ಸಿದ್ದು ದಿವಾಣರ ಜಾನಪದ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಸಾದರಪಡಿಸಿದ ಸಂಶೋಧನ ನಿಬಂಧ

ನೋಂದಣಿ ಸಂಖ್ಯೆ :
BRDSHKS-141301030053

ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ - ೫೮೩ ೨೭೬

೨೦೧೪-೧೫

1192

ಸಿದ್ದು ದಿವಾಣರ ಜಾನಪದ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಸಾದರಪಡಿಸಿದ ಸಂಶೋಧನ ನಿಬಂಧ

ನೊಂದಣಿ ಸಂಖ್ಯೆ :
BRDSHKS-141301030053

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೧೪-೧೫

• ಪರಿವಿಡಿ •

			ಪುಟ ಸಂಖ್ಯೆ
ಅಧ್ಯಾಯ :	೧	**ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ**	೦೧-೦೪
ಅಧ್ಯಾಯ :	೨	**ಸಿದ್ದು ದಿವಾಣರ ಜೀವನ ವ್ಯಕ್ತಿತ್ವ**	೦೫-೨೩
	೨.೧	ಬಾಡಗಿ ಗ್ರಾಮದ ಹಿನ್ನೆಲೆ	೦೫
	೨.೨	ಬಾಡಗಿ ಗ್ರಾಮದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಸರ	೦೭
		೧) ಮನೆತನದ ಹಿನ್ನೆಲೆ	೦೮
		೨) ಜನನ - ಬಾಲ್ಯ	೧೧
		೩) ಶಿಕ್ಷಣ	೧೩
		೪) ದಾಂಪತ್ಯ	೧೪
		೫) ಸಾಹಿತ್ಯಿಕ ಚಟುವಟಿಕೆಗಳು	೧೪
		೬) ವೃತ್ತಿ - ಪ್ರವೃತ್ತಿ - ವ್ಯಕ್ತಿತ್ವ	೧೫
		೭) ಜನಪದ ಜಂಗಮ	೧೮
		೮) ಸಂಘಟಕ - ಸಂಪನ್ಮೂಲ ವ್ಯಕ್ತಿ	೧೯
		೯) ವಿಶ್ರಾಂತಿ ಜೀವನ	೨೧
ಅಧ್ಯಾಯ :	೩	**ಸಿದ್ದು ದಿವಾಣರ ಜಾನಪದ ಸಂಶೋಧನೆ ಮತ್ತು ವಿಮರ್ಶೆ**	೨೪-೩೪
	೩.೧	ಸಂಶೋಧನೆ ಹಾಗೂ ವಿಮರ್ಶೆಯ ಸ್ವರೂಪ	೨೪
	೩.೨	ಸಂಶೋಧನ ಹಾಗೂ ವಿಮರ್ಶಾ ಬರಹಗಳು	೨೫
		೧) ಜೀವನದಿಂದ ಜಾರಿ ಹೋದ ದೇಶಿ ಶಬ್ದ ಸಿರಿ ಸಂಪತ್ತು	೨೬
		೨) ಗ್ರಾಮೀಣ ಹಬ್ಬಗಳ ಅಂತರಂಗ	೨೭
		೩) ಮನಿ ಮಾತ ಮರೀಬ್ಯಾಡ	೨೭
		೪) ಕುಂಬಾರರು	೨೭
		೫) ಹೊಟ್ಟೆ-ನೆತ್ತಿಯ ಹಸಿವಿನ ಮೂಲ ಗ್ರಾಮೀಣ ಆಟಗಳು	೨೮
		೬) ಸುಡುಗಾಡ ಸಿದ್ಧರತ್ತ ಪರಿವರ್ತನೆಯ ಗಾಳಿ	೨೮
		೭) ಲೋಕ ಪ್ರಸಿದ್ಧ ಲೋಕಾಪುರದ ಕಲ್ಲು	೨೯
		೮) ಇತಿಹಾಸದ ಹಾಸಿಗೆಯಲ್ಲಿ ಕೃಷ್ಣಾತೀರ ಸಂಸ್ಕೃತಿ	೨೯
		೯) ಹಿರಿಯ ಜಾನಪದ ತಜ್ಞ ; ಜಿ. ಬಿ. ಖಾಡೆ	೩೦
		೧೦) ಗ್ರಾಮೀಣ ಆಟಗಳು ಮತ್ತು ಪಾಠಗಳು	೩೦
		೧೧) ಮಕರ ಸಂಕ್ರಮಣ	೩೧
		೧೨) ಕಾಡು-ನಾಡಿನ ಐಸಿರಿ	೩೧
		೧೩) ಜನಮನದ ಕಲಾವಿದ : ಶ್ರೀ ಕೃಷ್ಣ ದೇಶಪಾಂಡೆ	೩೨
		೧೪) ನಾವು ಮತ್ತು ನಮ್ಮ ಸ್ವಾತಂತ್ರ್ಯ	೩೨
		೧೫) ನಂಬಿಗಸ್ಥ ಭಂಟ; ಮುಧೋಳ ಬೇಟೆ ನಾಯಿ	೩೩

ಪುಟ ಸಂಖ್ಯೆ

ಅಧ್ಯಾಯ : ೪ ಸಿದ್ದು ದಿವಾಣರ ಜಾನಪದ ಸಂಪಾದನೆ ೩೫–೫೭

೪.೧ ಜಾನಪದ ಸಂಪಾದನೆಯ ಸ್ವರೂಪ ೩೫

೪.೨ ಜಾನಪದ ಸಂಪಾದನೆಯ ವಿಭಿನ್ನ ನೆಲೆಗಳು ; ಸಮೀಕ್ಷೆ ೩೬

೪.೨.೧ ಜಾನಪದ ಕೃಷಿ ಸಂಸ್ಕೃತಿ

೧) ಕೃಷಿ ಪರಂಪರೆ ಸಲಕರಣೆಗಳು ೩೭

೨) ದೇಶಿ ಮಣ್ಣಿನ ಪಾತ್ರೆಗಳು ೩೯

೩) ಸುಗ್ಗಿ – ರಾಶಿ ೪೦

೪) ಜಾನಪದ ಹಬ್ಬ ಮತ್ತು ಆಟಗಳು ೪೧

೫) ಜಾನಪದ ಅಳತೆ ಮತ್ತು ತೂಕಗಳು ೪೫

೬) ಮಳೆಗಳು ೪೬

೭) ಆಯಗಾರರು ೪೮

೪.೨.೨ ಜಾನಪದ ಸಾಹಿತ್ಯ ಸಂಸ್ಕೃತಿ

೧) ಜಾನಪದ ಗಾದೆಗಳು ೪೯

೨) ಜಾನಪದ ಬೈಗುಳಗಳು ೫೦

೩) ದೇಶಿ ಶಬ್ದ ಸೊಗಡು ೫೧

೪) ಜಾನಪದ ಹಂತಿ ಹಾಡುಗಳು ೫೨

೫) ಜಾನಪದ ಮತ್ತು ಮಹಿಳೆ ೫೫

ಅಧ್ಯಾಯ : ೫ ಸಮಾರೋಪ ೫೮–೬೧

ಅನುಬಂಧಗಳು : ೬೨–೬೬

೧) ಸಿದ್ದು ದಿವಾಣರ ಬದುಕಿನ ಪ್ರಮುಖ ಘಟ್ಟಗಳು ೬೨

೨) ಸಿದ್ದು ದಿವಾಣರ ಪ್ರಕಟಿತ ಲೇಖನಗಳು ೬೩

೩) ಸಿದ್ದು ದಿವಾಣರ ಪ್ರಕಟಿತ – ಅಪ್ರಕಟಿತ ಗ್ರಂಥಗಳು ೬೫

೪) ಸಿದ್ದು ದಿವಾಣರಿಗೆ ಸಂದ ಪ್ರಶಸ್ತಿ – ಪುರಸ್ಕಾರಗಳು ೬೬

೫) ಸಿದ್ದು ದಿವಾಣರ ಹಸ್ತಾಕ್ಷರ ೬೭

ಗ್ರಂಥ ಋಣ : ೬೮–೬೯

ಪತ್ರಿಕೆಗಳು : ೭೦

ಅಧ್ಯಾಯ : ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಮಾನವ ಅನಾದಿಕಾಲದಿಂದಲೂ ಪ್ರಕೃತಿಯನ್ನು ಕುತೂಹಲದ ಕಣ್ಣಿನಿಂದ ನೋಡುತ್ತ ಬಂದಿದ್ದಾನೆ. ಪ್ರಕೃತಿಯ ವಿಕೋ ಪಕ್ಕೆ ಹೆದರಿ ಭಯದಿಂದ ನಡುಗಿದ್ದಾನೆ. ಆರಾಧನೆಯಿಂದ ಪ್ರಕೃತಿಯ ಉಗ್ರರೂಪವನ್ನು ತಣಿಸಲು ಸಾಧ್ಯವೆಂದು ಭಾವಿಸಿ ಭಕ್ತಿಯಿಂದ ಭಜಿಸಿದ್ದಾನೆ. ಹಕ್ಕಿ–ಪಕ್ಷಿಗಳ ಕೂಗಿಗೆ ಮನಸೋತು ಅವುಗಳ ಧ್ವನಿಗೆ ಧ್ವನಿ ಬೆರೆಸಿ ಹಾಡಿದ್ದಾನೆ. ಭೂಮಿ ಆಕಾಶ, ಬ್ರಹ್ಮಾಂಡವನ್ನು ಕಂಡು ಮೂಕವಿಸ್ಮಿತನಾಗಿ ಕಲ್ಪನೆಗಳನ್ನು ಹರಿಬಿಟ್ಟಿದ್ದಾನೆ. ಕಣ್ಣ ಮುಂದಿರುವುದೆಲ್ಲವನ್ನು ಪರೀಕ್ಷಿಸುತ್ತ ಸರಿ ಕಂಡದ್ದನ್ನು ಸ್ವೀಕರಿಸುತ್ತ ಪರಿಷ್ಕರಿಸುತ್ತ ಮುನ್ನಡೆದು ಬಂದಿದ್ದಾನೆ. ಹೀಗೆ ತಾನು ಕಂಡುಂಡ ಅನುಭವವನ್ನು ಸಹಜವಾಗಿ ಅಭಿವ್ಯಕ್ತಪಡಿಸಿದಾಗ ಹುಟ್ಟಿಕೊಂಡಿದುದೇ ನಮ್ಮ ಜನಪದ ಸಾಹಿತ್ಯ.

ಜನಪದರು ಬದುಕಿಗಾಗಿ ಬರೆದವರಲ್ಲ; ಬದುಕನ್ನೇ ಬರಹವನ್ನಾಗಿಸಿದರು. ಅವರು ಕೇವಲ ನುಡಿ ಜಾಣರಾಗಿ ಬದುಕಿಗೆ ಬೇಕಾದ ಸಿಂಗಾರದ ತೋರಣವನ್ನು ಕಟ್ಟದೇ ಬದಲಾಗಿ ನಡೆ ಧೀರರಾಗಿ ಬಾಳಿಗೆ ಅಗತ್ಯವಾದ ಬಂಗಾರದ ಹೂರಣವನ್ನು ಬಡಿಸಿದವರು. ಜನಪದರು ಕೇವಲ ವಿಷಯಗಳ ತಳಪಾಯ ಹಾಕಿ ವಿಚಾರಸೌಧ ನಿರ್ಮಿಸಿದವರಲ್ಲ. ಬದಲಾಗಿ ಆಚಾರ–ಸಂಸ್ಕೃತಿಗಳ ಅಡಿಪಾಯ ಹಾಕಿ ಅನುಭವ ಮಂಟಪವನ್ನು ನಿರ್ಮಿಸಿದವರು.

ಇಂತಹ ಅನುಭವ ಜನ್ಯವಾದ ಸಾಹಿತ್ಯದಲ್ಲಿ ಏನುಂಟು ಏನಿಲ್ಲ. ಅಲ್ಲಿ ಧಾರ್ಮಿಕ ಚಿಂತನೆಯಿದೆ. ಸಾಮಾಜಿಕ ಕಳಕಳಿಯಿದೆ. ರಾಜಕೀಯ ಸುಧಾರಣೆಯ ಹಂಬಲವಿದೆ. ನಿಸರ್ಗದ ಪ್ರೀತಿ ಇದೆ. ಸಂಸಾರದ ಸಹಜತೆ ಇದೆ. ಉಪಕಾರದ ಸ್ಮರಣೆ ಇದೆ. ಅಹಂ ನಿರಶನವಿದೆ. ಕರುಣೆಯ ಕಣ್ಣಿದೆ. ಗುರು–ಲಿಂಗ–ಜಂಗಮ ಗೌರವವಿದೆ. ಕಾಯಕದ ದೃಷ್ಟಿಯಿದೆ. ದಾಸೋಹದ ಸೃಷ್ಟಿಯಿದೆ. ಇಂತಹ ಸತ್ವಪೂರ್ಣ ಮತ್ತು ಪರಂಪರೆಯನ್ನು ತುಂಬಿಕೊಂಡ ಜನಪದರ ಬದುಕು–ಸಾಹಿತ್ಯವನ್ನು ಅಪಾರ ಪರಿಶ್ರಮದಿಂದ ಸಂಯಮ ಆಸಕ್ತಿಯಿಂದ ಗ್ರಾಮೀಣರ ಉತ್ಕಟ ಸಂವೇದನೆಗಳನ್ನು ಅಮೂಲ್ಯ ಆಚರಣೆಗಳನ್ನು

ದಾಖಲಿಸುತ್ತ ವಾಸ್ತವ–ವೈಜ್ಞಾನಿಕ ತಳಹದಿಯ ಮೇಲಿರುವ ಜಾನಪದರ ಮೂಲ ನಂಬಿಕೆಗಳು ಆಧುನಿಕ ದಿನಗಳಲ್ಲಿ ಮೂಢನಂಬಿಕೆಗಳಾದ ಪರಿಯನ್ನು ಬಿಡಿಸಿ, ತಿಳಿಸಿ, ವಿಶ್ಲೇಷಿಸುವ ಹಿರಿಯ ಜೀವ ಶ್ರೀ ಸಿದ್ದು ದಿವಾಣರು.

ಮಾತು, ಕೃತಿ, ವ್ಯಕ್ತಿತ್ವದಲ್ಲೆಲ್ಲ ಜನಪದವನ್ನೇ ಅರಗಿಸಿ–ಕರಗಿಸಿಕೊಂಡು ಜನಪದ ಜಂಗಮನಾಗಿ, ಕರ್ನಾಟಕದಲ್ಲೆಡೆ ಹೆಸರುವಾಸಿಯಾದವರು. ನಮ್ಮ ಪೂರ್ವಜ ಜನಪದರು ಏನೇ ಆಚಾರ–ವಿಚಾರಗಳನ್ನು ಮಾಡಿದರೂ ಅದರ ಹಿಂದೆ ವೈಜ್ಞಾನಿಕ ಅಂಶಗಳಿರುವುದನ್ನು ವಾಸ್ತವ ನೆಲೆಗಟ್ಟಿನಲ್ಲಿ ಚರ್ಚಿಸಿ, ಚಿಂತನ–ಮಂಥನಗೈಯುವ ಮಹಾ ಪ್ರಾಜ್ಞರು ಶ್ರೀ ಸಿದ್ದು ದಿವಾಣರು.

ನಾಡೋಜ ಪಾಟೀಲ ಪುಟ್ಟಪ್ಪ, ಶ್ರೀ ಕಂಠೀಹನುಮಂತರಾಯರು, ಶ್ರೀ ಈಶ್ವರ ಚಂದ್ರ ಚಿಂತಾಮಣಿ, ಶ್ರೀ ರಾಮಚಂದ್ರ ಶರ್ಮಾ, ಡಾ. ವ್ಹಿ. ಎಸ್. ಮಾಳಿ, ಶ್ರೀ ಕೃಷ್ಣ ಮೂರ್ತಿ ನಾಯಕ್, ಶ್ರೀ ಡಾ. ವೀರೇಶ ಬಡಿಗೇರ, ಶ್ರೀ ರಾಘವೇಂದ್ರ ಹೆಗಡೆಕರ, ಶ್ರೀ ಸಿದ್ಧರಾಜ ಪೂಜಾರಿ, ಶ್ರೀ ಚಂದ್ರಶೇಖರ ಆರಾಧ್ಯ, ಶ್ರೀ ಚಟ್ನಳ್ಳಿ ಮಹೇಶ ಹೀಗೆ ಹಿರಿ–ಕಿರಿಯ ಗೆಳೆಯರ ಸ್ಫೂರ್ತಿಗೆ ಮತ್ತು ದ. ರಾ. ಬೇಂದ್ರೆ ಹಾಗೂ ಚಂದ್ರಶೇಖರ ಕಂಬಾರರ ಸಾಹಿತ್ಯ ಪ್ರಭಾವಕ್ಕೆ ಸಿಲುಕಿದರೂ ತನ್ನತನವನ್ನು ಬಿಡದೇ ಗ್ರಾಮೀಣರ ಆಚಾರ–ವಿಚಾರಗಳ ಸಿರಿವಂತಿಕೆಯನ್ನು ಎಳೆ ಎಳೆಯಾಗಿ ಪರಿಶೀಲಿಸಿ ದಾಖಲಿಸುವ ಮೂಲಕ ನಾಡಿನ ಶ್ರೀಮಂತಿಕೆಯ ಸಂಸ್ಕೃತಿ, ಅಭಿರುಚಿಗಳನ್ನು ಶ್ರೀಯುತರು ಎತ್ತಿ ಹಿಡಿದಿದ್ದಾರೆ.

ಶ್ರೀಯುತ ಸಿದ್ದು ದಿವಾಣರ ಸಾಹಿತ್ಯವನ್ನು ಇವರ ವ್ಯಕ್ತಿತ್ವವನ್ನು ಕುರಿತು ಕೆಲವು ಸಾಹಿತಿ ವಿಮರ್ಶಕರು, ಲೇಖನಗಳ ಮೂಲಕ ದಿನಪತ್ರಿಕೆಗಳಲ್ಲಿ ಪರಿಚಯಿಸುವ ಕಾರ್ಯವನ್ನು ಮಾಡಿದ್ದಾರೆ. ಆದರೆ ಇವರ ಬದುಕು–ಬರಹ, ಜನಪದ ಸಂಪಾದನೆಯ ಸಮಗ್ರ ಸಾಹಿತ್ಯ ಅಧ್ಯಯನ ಇಲ್ಲಿಯವರೆಗೂ ನಡೆದಿಲ್ಲ. ಆದ್ದರಿಂದ ಶ್ರೀ ಸಿದ್ದು ದಿವಾಣರ ಸಮಗ್ರ ಜನಪದ ಸಾಹಿತ್ಯ ಸಂಪಾದನೆಯ ತಿರುಳನ್ನು ಅಧ್ಯಯನದ ಮಹತ್ತತೆಯನ್ನು ಹಾಗೂ ಅಗತ್ಯತೆಯನ್ನು ಕಂಡುಕೊಳ್ಳುವಲ್ಲಿ ಇದೊಂದು ಪ್ರಾಮಾಣಿಕ ಪ್ರಯತ್ನವಾಗಿದೆ.

ಒಟ್ಟಂದ ಇವರ ಬದುಕು, ಬರಹ ಅದರಲ್ಲೂ ಜನಪದ ಅಧ್ಯಯನದ ಸ್ವರೂಪವನ್ನು ಮುಂದಿಟ್ಟುಕೊಂಡು ಎಂ.ಫಿಲ್ ಅಧ್ಯಯನಕ್ಕಾಗಿ ಒಟ್ಟು ೫ ಅಧ್ಯಾಯಗಳನ್ನು ಮಾಡಿ ವಿಂಗಡಿಸಿಕೊಳ್ಳಲಾಗಿದೆ.

ಅಧ್ಯಾಯ – ಒಂದು :

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ :

ಶ್ರೀ ಸಿದ್ದು ದಿವಾಣರ ಸಮಗ್ರ ಸಾಹಿತ್ಯವನ್ನು ಒಳಹೊಕ್ಕು ನೋಡಿದಾಗ ಅದೊಂದು ಅಮೂಲ್ಯವಾದ ಜನಪದ ಕಣಜವೆಂದು ತಿಳಿಯುತ್ತದೆ. ಜನಪದರ ಶ್ರೀಮಂತ ಸಂಸ್ಕೃತಿ, ಸಂಸ್ಕಾರಗಳು ಹಾಗೂ ಮೂಲ ನಂಬಿಕೆಗಳು, ತಲೆತಲಾಂತರವಾಗಿ ವಂಶವಾಹಿನಿಗಳಂತೆ, ವರ್ಗಾವಣೆಗೊಳ್ಳುತ್ತ, ಕಾಲಾಂತರದಲ್ಲಿ ಅವು ಮೂಢನಂಬಿಕೆಗಳಾಗಿ ಯಾವ ರೀತಿಯಾಗಿ ಮಾರ್ಪಟ್ಟವು ಎಂಬುದನ್ನು ವಿವರಣಾತ್ಮಕವಾಗಿ ತಿಳಿಸುವ ದಿವಾಣರ ಬದುಕು, ಬರಹಗಳ ಸಾಧನೆಯನ್ನು ಗುರುತಿಸುವುದೇ ಅಧ್ಯಯನದ ಮೂಲ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯ ಕೇಂದ್ರ ಬಿಂದುವಾಗಿದೆ.

ಅಧ್ಯಾಯ – ಎರಡು :

ಸಿದ್ದು ದಿವಾಣರ ಜೀವನ – ವ್ಯಕ್ತಿತ್ವ :

ಈ ಅಧ್ಯಾಯದಲ್ಲಿ ಸಿದ್ದು ದಿವಾಣರ ಬದುಕಿನ ವಿಭಿನ್ನ ನೆಲೆಗಳನ್ನು ಕಲೆಹಾಕಿ ಇದಕ್ಕೆ ಪೂರಕವಾಗಿ ಇವರ ಹುಟ್ಟೂರಾದ ಕೃಷ್ಣೆಯ ತಡಿಯಲ್ಲಿನ 'ಬಾಡಗಿ' ಗ್ರಾಮದ ಹಿನ್ನೆಲೆ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಪರಿಸರ ಹಾಗೂ ಭೌಗೋಳಿಕ ಪರಿಸರವನ್ನು ಗುರುತಿಸುವುದರ ಜೊತೆಗೆ ಶ್ರೀಯುತರ ಮನೆತನದ ಹಿನ್ನೆಲೆ, ಇತಿಹಾಸ, ಹುಟ್ಟು-ಬಡತನ, ಬಾಲ್ಯ, ಶಿಕ್ಷಣ, ದಾಂಪತ್ಯ ಜೀವನ, ಮಕ್ಕಳು-ಮೊಮ್ಮಕ್ಕಳು, ಸಾಹಿತ್ಯಿಕ ಚಟುವಟಿಕೆಗಳು, ಕೆಲವು ಸಂಘಟನೆಗಳಿಗೆ ನಾಯಕರಾಗಿ, ಸದಸ್ಯರಾಗಿ, ಸಂಪನ್ಮೂಲ ವ್ಯಕ್ತಿಗಳಾಗಿ ಜನಪದ ಜಂಗಮರೆಂದು ಈ ಭಾಗದ ಶಬ್ದ ಗಾರುಡಿಗರೆಂದು ಹೆಸರು ಮಾಡಿದ ಇವರ ಜೀವನ-ವ್ಯಕ್ತಿತ್ವದ ಮೇಲೆ ಈ ಅಧ್ಯಾಯ ಬೆಳಕು ಚೆಲ್ಲುತ್ತದೆ.

ಅಧ್ಯಾಯ – ಮೂರು :

ಸಿದ್ದು ದಿವಾಣರ ಜಾನಪದ ಸಂಶೋಧನೆ ಮತ್ತು ವಿಮರ್ಶೆ :

ಗ್ರಾಮೀಣ ಆಟಗಳು-ಪಾಠಗಳು, ನಾಡಿನ ಹಬ್ಬ-ಹರಿದಿನಗಳ ವೈಶಿಷ್ಟ್ಯಗಳು ಈ ನೆಲದ ಮಣ್ಣಿನಲ್ಲಿ ಹುಟ್ಟಿಕೊಂಡ ಆಚಾರ-ವಿಚಾರ, ಸಂಪ್ರದಾಯ, ಮೂಲ ನಂಬಿಕೆಗಳ ನೈಜ ಸಾರಸತ್ವವನ್ನು ಬಿಂಬಿಸುವ ಸಿದ್ದು ದಿವಾಣರ ವೈಜ್ಞಾನಿಕ ಮೂಸೆಯಲ್ಲಿ ಮೂಡಿ ಬಂದ ಜಾನಪದ ಸಂಶೋಧನೆ-ವಿಮರ್ಶೆ ಲೇಖನ, ಬರಹಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ – ನಾಲ್ಕು :

ಸಿದ್ದು ದಿವಾಣರ ಜಾನಪದ ಸಂಪಾದನೆಗಳು :

ಸೃಷ್ಟಿಯ ಆದಿಯಿಂದಲೇ ಬಿಂಬಿತವಾಗುವ ಮನುಷ್ಯನ ನಂಬಿಕೆ, ಕನಸು, ಊಹೆ, ಐತಿಹ್ಯಗಳು, ಆಚರಣೆಗಳು, ಸಂವೇದನೆಗಳು 'ಜಾನಪದ' ಎಂಬ ಮಹಾ ಸಾಗರವಾಗಿ

ಹರವಿಕೊಂಡಿದೆ. ಇಂತಹ ಜಾನಪದದ ಅತ್ಯಮೂಲ್ಯ ಸಂಪಾದನೆಗಳನ್ನು ಗೈದು ಮುಂದಿನ ತಲೆಮಾರಿನ ಜನಾಂಗಕ್ಕೆ ವಿಶಿಷ್ಟ ಕೊಡುಗೆ ನೀಡಿದ ಶ್ರೀಯುತರ 'ಜನಪದ ಸಂಪಾದನೆ' ಕೃತಿಗಳನ್ನು ಅರ್ಥಪೂರ್ಣವಾದ ವಿವೇಚನೆಯನ್ನು ಈ ಅಧ್ಯಾಯದಲ್ಲಿ ಕಾಣಬಹುದಾಗಿದೆ.

ಅಧ್ಯಾಯ – ಐದು :

ಸಮಾರೋಪ :

ಜನಪದ ಕವಿಯಾಗಿ, ಸಂಪಾದಕರಾಗಿ, ಮೂಲ ಆಚರಣೆಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಪರಿಶೀಲಿಸಿ, ವಿವರಿಸುವ ಒಬ್ಬ ವಿಮರ್ಶಕನಾಗಿ, ಕಳೆದು ಹೋಗುತ್ತಿರುವ ಜನಪದರ ಬದುಕನ್ನು ಹಾಗೂ ಅವರ ಅನುಪಮವಾದ ಸಾಹಿತ್ಯವನ್ನು ಈ ಸಮಾಜಕ್ಕೆ ಕಟ್ಟಿ ಕೊಡುವ ಕಾರ್ಯವನ್ನು ಮಾಡುತ್ತಿರುವ ಶ್ರೀ ಸಿದ್ದು ದಿವಾಣರ ಕೊಡುಗೆಯನ್ನು ಮೌಲ್ಯ ಮಾಪನ ಮಾಡಲು ಪ್ರಯತ್ನಿಸಲಾಗಿದೆ.

ಅನುಬಂಧದಲ್ಲಿ ಶ್ರೀ ಸಿದ್ದು ದಿವಾಣರ ಬದುಕಿನ ಪ್ರಮುಖ ಘಟ್ಟಗಳನ್ನು ಪ್ರಕಟಿತ ಗ್ರಂಥ ಲೇಖನಗಳನ್ನು ಪಟ್ಟಿ ಮಾಡಲಾಗಿದೆ. ಹಾಗೆಯೇ ಶ್ರೀಯುತರು ಸಾಧಿಸಿದ ಸಾಧನೆಗಳ ಪ್ರತಿಫಲವಾಗಿ ಒಲಿದು ಬಂದ ಪ್ರಶಸ್ತಿ–ಪುರಸ್ಕಾರಗಳ ಜೊತೆಗೆ ಅವರ ಹಸ್ತಾಕ್ಷರಗಳನ್ನು ಓದುಗರಿಗೆ ಪರಿಚಯಿಸಲಾಗಿದೆ. ಕೊನೆಯಲ್ಲಿ ಈ ಅಧ್ಯಯನಕ್ಕೆ ಸಹಾಯಕವಾದ ಎಲ್ಲ ಗ್ರಂಥಗಳನ್ನು ಹೆಸರಿಸಲಾಗಿದೆ.

ಹೀಗೆ ಜನಪದ ಜಂಗಮರಾಗಿ ಉತ್ತರ ಕರ್ನಾಟಕದ ವಿಶೇಷ 'ಶಬ್ದಗಾರುಡಿಗ'ರಾಗಿ ಪ್ರಾಸಬದ್ಧವಾದ ಮಾತಿನಿಂದ ಸೃಹೃದಯ ಮನಸ್ಸನ್ನು ಸೆಳೆಯುವ ಶ್ರೀ ಸಿದ್ದು ದಿವಾಣರ ಬದುಕನ್ನು, ಜನಪದ ಸಂಪಾದನಾ ಕಾರ್ಯವನ್ನು ಸಮಗ್ರವಾಗಿ ವಿಶ್ಲೇಷಿಸುವ ಈ ಸಂಪ್ರಬಂಧವು ತನ್ನದೇ ಆದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ ಹಾಗೂ ಚೌಕಟ್ಟಿನ ಮಿತಿಯನ್ನು ಪಡೆದುಕೊಂಡಿದೆ.

❖❖❖❖❖

ಅಧ್ಯಾಯ : ೨

ಸಿದ್ದು ದಿವಾಣರ ಜೀವನ-ವ್ಯಕ್ತಿತ್ವ

ಅಧ್ಯಾಯ - ೨
ಸಿದ್ದು ದಿವಾಣರ ಜೀವನ - ವ್ಯಕ್ತಿತ್ವ

೨.೧ ಬಾಡಗಿ ಗ್ರಾಮದ ಹಿನ್ನೆಲೆ :

ಭರತ ಖಂಡದ ಸಂಸ್ಕೃತಿಯ ಚೌಕಟ್ಟಿನಲ್ಲಿ ಅಳವಟ್ಟು ಸುಂದರವಾಗಿ ಅರಳಿರುವ ಸಂಸ್ಕೃತಿ ಕುಸುಮಗಳಲ್ಲಿ ಕರ್ನಾಟಕದ ಸ್ಥಾನ ಬಹಳ ಹಿರಿಯದು ಮತ್ತು ವಿಶಿಷ್ಟವಾದದ್ದು. ಸಾಮ್ರಾಜ್ಯಗಳ ನಿರ್ಮಾಣ ಮತ್ತು ಅವುಗಳ ವ್ಯವಸ್ಥೆಯಲ್ಲಿ ಧಾರ್ಮಿಕ ದರ್ಶನದ, ದಿವ್ಯದೃಷ್ಟಿಯಲ್ಲಿ ಸಾಹಿತ್ಯ ಸೃಷ್ಟಿಯ ರಸಮಾರ್ಗದಲ್ಲಿ ಶಿಲ್ಪ-ಸಂಗೀತಾದಿಗಳ ಕಲೋಪಾಸನೆಯಲ್ಲಿ ಹೀಗೆ ಜೀವನದ ಎಲ್ಲ ರಂಗಗಳಲ್ಲಿಯೂ ಕರ್ನಾಟಕದ ಸಾಧನೆ, ಸಾರ್ಥಕತೆಯನ್ನು ಪಡೆದುಕೊಂಡಿದೆ. ಅತೀ ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಗೆ ತನ್ನದೇ ಆದ ಉಜ್ವಲ ಪರಂಪರೆಯನ್ನಿತ್ತು ಅದನ್ನು ಬೆಳೆಸಿಕೊಂಡು ಬಂದಿದೆ.[೧]

ಕರ್ನಾಟಕದ ಒಂದು ಜಿಲ್ಲಾ ಕೇಂದ್ರ ಬಾಗಲಕೋಟ. ಗದಗ, ಬೆಳಗಾವಿ, ರಾಯಚೂರು, ವಿಜಯಪುರಗಳೊಂದಿಗೆ ತನ್ನಗಡಿಯನ್ನು ಹೊಂದಿದೆ. ಐತಿಹಾಸಿಕವಾಗಿ ಬಾಗಲಕೋಟ ಜಿಲ್ಲೆಯು ಚಾಲುಕ್ಯರಾಳಿದ ನಾಡು. ಬದಾಮಿ, ಐಹೊಳೆ, ಪಟ್ಟದಕಲ್ಲು, ಕೂಡಲಸಂಗಮ ಮತ್ತು ಮಹಾಕೂಟ ಇವು ಇಲ್ಲಿಯ ಅತ್ಯಂತ ಪ್ರಮುಖ ಪ್ರೇಕ್ಷಣಿಯ ಸ್ಥಳಗಳಾಗಿವೆ.

ಇಲ್ಲಿ ದೊರೆತ ಶಿಲಾಶಾಸನಗಳ ಪ್ರಕಾರ ಬಾಗಲಕೋಟೆಯ ಮೂಲ ಹೆಸರು 'ಬಾಗಡಿಗೆ' ಎಂದಾಗಿತ್ತು. ಪುರಾಣಗಳ ಪ್ರಕಾರ ಲಂಕಾಧಿಪತಿಯಾದ ರಾವಣ ಈ ಪ್ರದೇಶವನ್ನು ಆಳುತ್ತಿದ್ದ. ಆತ ಈ ನಗರವನ್ನು ಭಜಂತ್ರಿ (ಸಂಗೀತಗಾರರು)ಗೆ ಕೊಡುಗೆಯಾಗಿ ನೀಡಿದ್ದನು. ವಿಜಯಪುರದ ರಾಜರು ತನ್ನ ಮಗಳಿಗೆ ಕಂಕಣ ಕಾಣಿಕೆ (ಮಗಳ ಮದುವೆಯ ಬಳಿಕ ಬಳೆ-ಸೀರೆ, ಆಭರಣ ಖರೀದಿಸಲು ತಂದೆ-ತಾಯಿ ಹಣ ಕೊಡುವ ಸಂಪ್ರದಾಯದಂತೆ)ಯಾಗಿ ಈ ಪಟ್ಟಣವನ್ನು ಕೊಡುಗೆಯಾಗಿ ನೀಡಿದ್ದರು ಎಂದು ಹೇಳಲಾಗುತ್ತದೆ. ಪರಿಣಾಮವಾಗಿ ಪಟ್ಟಣದ ಹೆಸರು 'ಬಾಗಡಿಕೋಟೆ'ಯಾಗಿ ನಂತರ

'ಬಾಗಲಕೋಟೆ'ಯಾಗಿ ಮಾರ್ಪಟ್ಟು ನಂತರದ ದಿನಗಳಲ್ಲಿ ಬಾಗಲಕೋಟೆಯು ವಿಜಯ ನಗರ ದೊರೆಗಳು, ಪೇಶ್ವೆಗಳು, ಮೈಸೂರು ಹೈದರಾಲಿ, ಮರಾಠಾ ಆಡಳಿತಗಾರರು, ಅಂತಿಮವಾಗಿ ೧೮೧೮ ರಲ್ಲಿ ಬ್ರಿಟಿಷರ ಆಳ್ವಿಕೆಗೆ ಒಳಗಾಯಿತು. ೧೮೬೫ ರಲ್ಲಿ ಪುರಸಭೆಯಾಗಿ ಅಸ್ತಿತ್ವಕ್ಕೆ ಬಂದಿತು. ಬಾಗಲಕೋಟೆಯು ಸ್ವಾತಂತ್ರ್ಯ ಚಳುವಳಿ ಮತ್ತು ಕರ್ನಾಟಕ ಏಕೀಕರಣ ಚಳುವಳಿಗೂ ಕೇಂದ್ರವಾಗಿತ್ತು.[೧೨]

ಇಂದು ಬಾಗಲಕೋಟೆಯು ೨ ಭಾಗಗಳಲ್ಲಿ ಹಂಚಿ ಹೋಗಿದೆ. ಹೊಸ ಬಾಗಲಕೋಟ (ನವನಗರ) ಮತ್ತು ಹಳೇ ಬಾಗಲಕೋಟ ಎಂದು. ಆಲಮಟ್ಟಿ ಆಣೆಕಟ್ಟಿನ ನಿರ್ಮಾಣದಿಂದಾಗಿ ಹಳೇ ಪಟ್ಟಣದ ಬಹುತೇಕ ಭಾಗಗಳು ಮುಳುಗಡೆ ಹೊಂದಿವೆ. ನವನಗರ ಹೊಸ ಬಾಗಲಕೋಟೆಯು ವಿಶಾಲ ರಸ್ತೆಗಳನ್ನು, ಉದ್ಯಾನವನಗಳನ್ನು ಇತರೆ ಆಧುನಿಕ ಸೌಲಭ್ಯಗಳನ್ನು ಹೊಂದಿ ಮಾದರಿ ವಿನ್ಯಾಸದಿಂದ ಯೋಜಿತ ರೀತಿಯಲ್ಲಿ ಕಟ್ಟಿದ ಪಟ್ಟಣವಾಗಿದೆ.

ಹೀಗೆ ಸಂಪತ್ಭರಿತವಾದ ಬಾಗಲಕೋಟ ಜಿಲ್ಲೆಯಲ್ಲಿ ಬೀಳಗಿ ತಾಲೂಕವೂ ಒಂದು. ಜಿಲ್ಲಾ ಕೇಂದ್ರದಿಂದ ಸುಮಾರು ೩೦ ಕಿ.ಮೀ. ದೂರವಿದೆ. ವ್ಯವಸಾಯವೇ ಪ್ರಮುಖವಾದ ಉದ್ಯೋಗವಾಗಿದ್ದು ಕಬ್ಬು ಬೆಳೆಯೇ ಪ್ರಮುಖವಾಗಿದ್ದು ಈ ತಾಲೂಕಿನಲ್ಲಿ ಹಲವಾರು ಸಕ್ಕರೆ ಕಾರ್ಖಾನೆಗಳು ತಲೆ ಎತ್ತಿ ನಿಂತಿವೆ. ಈ ತಾಲೂಕಿನಲ್ಲಿ 'ಆರು ಯಾತದ ಬಾವಿ', 'ಶ್ರೀ ಸಿದ್ದೇಶ್ವರ ಕೊಳ್ಳ', 'ಕೋರ್ತಿ ಕೊಲ್ಹಾರ ಸೇತುವೆ', 'ಪುಣ್ಯಕ್ಷೇತ್ರ ಚಿಕ್ಕ ಸಂಗಮ'ಗಳಿಂದ ಕಂಗೋಳಿಸುವ ಬೀಳಗಿ ತಾಲೂಕಿನ ಒಂದು ಚಿಕ್ಕ ಮತ್ತು ಐತಿಹಾಸಿಕ ಪುರಾಣ ಪ್ರಸಿದ್ಧವಾದ ಹಳ್ಳಿಯೇ ಸಿದ್ದು ದಿವಾಣರು ಹುಟ್ಟಿದ 'ಬಾಡಗಿ'.

ಬಾಗಲಕೋಟದಿಂದ ೫೦ ಕಿ.ಮೀ. ಬೀಳಗಿಯಿಂದ ೨೦ ಕಿ.ಮೀ. ದೂರದಲ್ಲಿ 'ಬಾಡಗಿ' ಗ್ರಾಮವಿದೆ. ಐತಿಹಾಸಿಕ ಮತ್ತು ಪ್ರವಾಸಿ ತಾಣಗಳಾದ ಬಾದಾಮಿಯಿಂದ ೧೦೦ ಕಿ.ಮೀ. ಐಹೊಳೆಯಿಂದ ೧೧೦ ಕಿ.ಮೀ. ಹಾಗೂ ಕವಿ ಚಕ್ರವರ್ತಿ ಹುಟ್ಟಿದ ನಾಡಾದ ಮುಧೋಳ ಪಟ್ಟಣದಿಂದ ೪೧ ಕಿ.ಮೀ. ದೂರದಲ್ಲಿದೆ.

ಕೃಷ್ಣಾ ನದಿ ತೀರದಲ್ಲಿರುವ 'ಬಾಡಗಿ' ಗ್ರಾಮ ಅಪ್ಪಟ ಕೃಷಿ ಬದುಕಿನ ತವರೂರು. ಕಪ್ಪು ಎರೆಮಣ್ಣಿನ ಫಲವತ್ತಾದ ನೆಲವುಳ್ಳ ದವಸ ಧಾನ್ಯದ ಕಣಜವಿದು. ಕೃಷ್ಣೆಯು ಇಲ್ಲಿ ಉತ್ತರ ವಾಹಿನಿಯಾಗಿ ಹರಿದಿದ್ದಾಳೆ. ಹೀಗಾಗಿ ಬಾಡಗಿ ಗ್ರಾಮಕ್ಕೆ ವಿಶೇಷ ಪಾವಿತ್ರ್ಯತೆ ಬಂದಿದೆ. ವರ್ಷಕ್ಕೊಮ್ಮೆ ಮಳೆಗಾಲದಲ್ಲಿ ತುಂಬಿ ಹರಿಯುವ ಈ ಕೃಷ್ಣಾಮಾತೆಯು ಇಡೀ ಗ್ರಾಮದ ಜಮೀನನ್ನು ಪ್ರವಾಹದಿಂದ ನೀರುಣಿಸಿ ಫಲವತ್ತಾದ ರ್‍ಯಾವಿಮಣ್ಣನ್ನು ತಂದು ಹಾಕಿ, ಈ ಕಾಳಿನ ಕಣಜದ ಈ ಭೂಮಿಯು ಫಲವತ್ತತೆಯನ್ನು ದ್ವಿಗುಣಗೊಳಿಸುತ್ತಾಳೆ. ಅಪ್ಪಟ ಕನ್ನಡ ಜನಪದ ಸಂಸ್ಕೃತಿಯ ಗಂಡು ಮೆಟ್ಟಾಗಿದೆ.

ಕೃಷ್ಣಾ ತೀರದ ಈ ಬಾಡಗಿ ಗ್ರಾಮಕ್ಕೆ ಐತಿಹಾಸಿಕ ಹಿನ್ನೆಲೆಯಿದೆ. ಬಾಡಗಿ ಎಂದು ಹೆಸರು ಬರಲು ಇದೇ ಕಾರಣವಾಗಿದೆ. ಪಾಂಡವರು ತಮ್ಮ ವನವಾಸ ಕಾಲದಲ್ಲಿ ಈ ಬದರಿಕಾಶ್ರಮದಲ್ಲಿ (ಈಗಿನ ಬಾಡಗಿ ಗ್ರಾಮದ ಮೂಲ ಹೆಸರು) ನೆಲೆಸಿ ಈ ಬಡಗುವಾಹಿನಿ (ಉತ್ತರವಾಹಿನಿ)ಯಲ್ಲಿ ಯಜ್ಞ-ಯಾಗಾದಿಗಳನ್ನು ಮಾಡುತ್ತಿದ್ದರಂತೆ. ಬಡಗು ಎಂದರೆ ಉತ್ತರ ದಿಕ್ಕು. ಬಡವಾಗ್ನಿ ಎಂದರೆ ಬೆಂಕಿ, ಅಗ್ನಿ ಇವುಗಳ ಹಿನ್ನೆಲೆಯಲ್ಲಿ ಬಡಗು-ಬಡವಾಗ್ನಿ ಸ್ಥಳ ನಾಮವು ನಾಡಿಗೆ 'ಬಾಡಗಿ'ಯಾಗಿ ಗ್ರಾಮನಾಮ ಪಡೆದಿದೆ. ಅಂದಿನ ಬದರಿಕ ಋಷಿಗಳ ಆಶ್ರಮವಾಗಿದ್ದ ಈ ಬದರೀಕಾಶ್ರಮವು ಇಂದಿನ 'ಬಾಡಗಿ' ಗ್ರಾಮವಾಗಿದೆ.[೨]

ಹೀಗಿರುವ ಬಾಡಗಿ ಗ್ರಾಮದ ಜನಸಂಖ್ಯೆ ಸುಮಾರು ೨೩೦೦ ಮಾತ್ರ, ಪುಟ್ಟದಾದ ಹಳ್ಳಿಯಾದರೂ ಪುರಾಣ ಪ್ರಸಿದ್ಧಿಯನ್ನು ಹೊಂದಿದ್ದು ಕಬ್ಬು, ತೆಂಗು, ಬಾಳೆ, ಮಾವು, ಹುಣಸೆ ಹಾಗೂ ಹೊಂಗೆಯ ಮರಗಳಿಂದ ಸೊಂಪಾಗಿರುವ ಬಾಡಗಿ ಪುಣ್ಯ-ಪುರುಷರ ದೇವಾನುದೇವತೆಗಳು ವಿರಮಿಸಿ ನೆಲೆಸಿದ ಕ್ಷೇತ್ರವಾಗಿದೆ; ನೆಲೆವೀಡಾಗಿವೆ.

೨.೨ ಬಾಡಗಿ ಗ್ರಾಮದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಸರ :

ಬಾಡಗಿಯ ಮೂಲ ಹೆಸರು ಬದರಿಕಾಶ್ರಮವೆಂದು ಇತಿಹಾಸ ಮತ್ತು ಪುರಾಣಗಳಿಂದ ಗೊತ್ತಾಗುತ್ತದೆ. ಇದರ ಉಲ್ಲೇಖ ಪಂಚತಂತ್ರದ ದುರ್ಗಸಿಂಹನ 'ಯತ್ಪರಾರ್ಥ ಶರೀರಂ' ಕಥೆಯಲ್ಲಿಯೂ ಕೂಡ ಉಲ್ಲೇಖವಿದೆ.

ಹೀಗಿರುವ ಗ್ರಾಮದ ದಕ್ಷಿಣ ಸೀಮೆಯ ಗುಡ್ಡದಲ್ಲಿ ಕರೆವ್ವತಾಯಿ ನೆಲೆಸಿದ್ದಾಳೆ. ಹಾಗೇ ಈ ಗುಡ್ಡದ ಮೇಲೆಯೇ ಬೀರಪ್ಪನ ಅವತಾರವೆಂದು ಹೇಳುವ ವೀರನಾರಾಯಣನ ಅವತಾರಿ ಪುರುಷ ಬೀರದೇವರಿದ್ದಾರೆ. ಉತ್ತರಕ್ಕೆ ಗೊಂದಿ ಸಾಲಿನ ಅಧಿದೇವತೆಯಾಗಿ ಮಾವಿನ ಮರದವ್ವ ನೆಲೆಸಿದ್ದಾಳೆ. ಗೊಂದಿ ಸಾಲಿನ ಹೊಳೆಯಾಚೆ ಗೆಣ್ಣೂರ ಲಕ್ಕವ್ವ ನೆಲೆಸಿದ್ದಾಳೆ. ಇಲ್ಲಿ ಕೃಷ್ಣೆಯು ಉತ್ತರವಾಹಿನಿಯಾಗಿರುವುದರಿಂದ 'ಬಾಡಗಿ'ಯು ಪವಿತ್ರ ತೀರ್ಥ ಕ್ಷೇತ್ರವೆಂದು ದ್ವಾಪರ ಯುಗದಲ್ಲಿಯೇ ಗುರುತಿಸಿದ ಪ್ರತೀತಿಯಿದೆ.[೩]

ಪಾಂಡವರು ತಮ್ಮ ವನವಾಸ ಕಾಲದಲ್ಲಿ ಈ ಬಡಗು ತಾಣದಲ್ಲಿ ಪಾಂಡವರಿಗೆ ಶ್ರೀಕೃಷ್ಣನು ಈ ಸ್ಥಳವನ್ನು ಪವಿತ್ರಗೊಳಿಸಿದ್ದಾನೆ. ಒಂದು ಐತಿಹಾಸಿಕ ಸಂಸ್ಕೃತಿಗೆ ಜನ್ಮವಿತ್ತಿದ್ದಾನೆ. ಶ್ರೀಕೃಷ್ಣ ದರ್ಶನವಿತ್ತ ಸಂದರ್ಭದಲ್ಲಿ ಧರ್ಮರಾಜನು ಪರಮಾತ್ಮ ನೀನು ನಮಗೆ ದರ್ಶನವಿತ್ತ ಈ ಗ್ರಾಮದಲ್ಲಿ (ಸ್ಥಳದಲ್ಲಿ) ನಿನ್ನ ಕುರುಹು ಬೇಕು. ನೀನು ಧರ್ಮ ರಕ್ಷಕನಾಗಿ ಇಲ್ಲಿರಬೇಕೆಂದು ಬೇಡಿಕೊಂಡನಂತೆ. ಈ ಪ್ರತೀಕವಾಗಿಯೇ ಶ್ರೀಕೃಷ್ಣನು ನಿಂತಿದ್ದ ಕೃಷ್ಣಾ ತೀರದಲ್ಲಿರುವ ಕಟ್ಟರಗಲ್ಲು, ಶ್ರೀ ಚಕ್ರಗಲ್ಲುಗಳಾಗಿವೆ. ಈಗಲೂ ಕಟ್ಟರಗಲ್ಲಿನ ರೂಪದಲ್ಲಿ ಶ್ರೀ ಚಕ್ರಕಲ್ಲುಗಳನ್ನು ನಾವು ನೋಡಬಹುದು ಹಾಗೂ ಧರ್ಮರಾಜನ

ಅಪೇಕ್ಷೆಯಂತೆ ಈ ಗ್ರಾಮದಲ್ಲಿ ಶ್ರೀಕೃಷ್ಣನು ಶ್ರೀ ಕೇಶವನಾಗಿ ಇಲ್ಲಿ ನೆಲೆಯೂರಿದ್ದಾನೆ. ಬೇಲೂರಿನ ಚೆನ್ನಕೇಶವ, ಗದುಗಿನ ವೀರನಾರಾಯಣನನ್ನು ಹೊರತುಪಡಿಸಿ ಉತ್ತರ ಕರ್ನಾಟಕದಲ್ಲಿ ನೆಲೆನಿಂತ ಶ್ರೀ ಕೇಶವನ ಸನ್ನಿಧಿಯಲ್ಲಿ ಕೃಷ್ಣೆ ಉತ್ತರವಾಹಿನಿಯಾಗಿ ಹರಿದದ್ದು ಬಾಡಗಿಯ ವಿಶೇಷವಾಗಿದೆ.[೪]

'ಬಾಡಗಿ' ಕೇವಲ ಸುಮಾರು ೨೩೦೦ ಜನಸಂಖ್ಯೆಯುಳ್ಳ ಹಳ್ಳಿಯಾದರೂ ಸರ್ವಜನಾಂಗಗಳ ಶಾಂತಿಯ ತೋಟವಾಗಿದೆ. ಸಾಮರಸ್ಯ ಸೌಹಾರ್ದಯುತವಾದ ಆತ್ಮೀಯ ಸಂಬಂಧಗಳನ್ನು ಜನರಲ್ಲಿ ಪರಸ್ಪರ ನಾವು ಕಾಣುತ್ತೇವೆ. ಈ ಊರಿನ ಪ್ರಮುಖ ದೇವರು 'ಬಂಕಯ್ಯ' ಸ್ವಾಮಿ. ಈ ಸ್ವಾಮಿಯ ಜಾತ್ರೆ ವರ್ಷದ ಎಳ್ಳು ಅಮವಾಸ್ಯೆಯಂದು ಭರ್ಜರಿಯಾಗಿ ಜರುಗುತ್ತದೆ. ಹಳ್ಳಿಗೆ ಹಳ್ಳಿಯೇ ಜಾತಿ-ಧರ್ಮದ ಭೇದ ಮರೆತು ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಶ್ರೀಕೃಷ್ಣ ಪರಮಾತ್ಮನು ಮೆಟ್ಟಿದ ಈ ಮಣ್ಣಿನಲ್ಲಿ ವಾಸಿಸುವ ಇಲ್ಲಿನ ಭೂತಾಯಿ ಮಕ್ಕಳು ಕಷ್ಟ ಜೀವಿಗಳು. ದುಡಿತವೇ ದುಡ್ಡಿನ ತಾಯಿ ಎಂದು ನಂಬಿದವರು. ಉದಾರೀಗಳಾದ ಇವರು ಸಹೃದಯರು ಅಷ್ಟೇ ಮುಗ್ಧರೂ ಕೂಡಾ ಹೌದು.

ಇಂತಹ ಸ್ವಚ್ಛಂದ ಪರಿಸರದಲ್ಲಿ ಹುಟ್ಟಿ-ಬೆಳೆದ ಶ್ರೀ ಸಿದ್ದು ದಿವಾಣರು ಒಬ್ಬ ಆಧ್ಯಾತ್ಮದ ರಸಋಷಿಯಾಗಿ ಜನಪದ-ಜಂಗಮನಾಗಿ ಈ ಲೋಕವನ್ನು ಕರುಣೆಯ ಕಂಗಳಿಂದಲೇ ನೋಡುವ ಹೃದಯವಂತರಾಗಿ, ಶರಣ ಜೀವಿಯಾಗಿ, ಸಂತನಂತೆ ಆದರ್ಶತನದ ಮಾನವೀಯ ಮೌಲ್ಯಗಳಡಿಯಲ್ಲಿಯೇ ಕುಡಿಯಾಗಿ ಬೆಳೆದರು.

೧) ಮನೆತನದ ಹಿನ್ನೆಲೆ :

ಸಿದ್ದು ದಿವಾಣರ ಪೂರ್ವಜರು ಮೂಲತಃ ಅಂದಿನ 'ಪೂನಾ' ಸಂಸ್ಥಾನದಲ್ಲಿ 'ದಿವಾಣ'ರಾಗಿ ಕೆಲಸವನ್ನು ನಿರ್ವಹಿಸುತ್ತಿದ್ದರು. ಹೀಗಾಗಿ ಇವರ ಅಡ್ಡ ಹೆಸರು ಇಂದಿಗೂ ದಿವಾಣರೆಂದೇ ಬೆಳೆದು ಬಂದಿದೆ. ಇವರ ಪೂರ್ವಜರಾದ ಶ್ರೀ ಕೇದಾರಿಬಾ ಎಂಬುವವರಿಗೆ 'ರಾಣೋಜಿ ಮತ್ತು ರತ್ನೋಜಿ' ಎಂಬಿಬ್ಬರು ಮಕ್ಕಳಿದ್ದರು. ಈ ಹಿರಿಯರಿಗೆ ಪೂನಾ ಸಂಸ್ಥಾನವು ವೈ. ಈ. ಕರಾಡದಲ್ಲಿ ಉಂಬಳಿಯಾಗಿ ಒಂದಿಷ್ಟು ಎಕರೆ ಜಮೀನನ್ನು ನೀಡಿದ್ದರು. ಕ್ರಮೇಣ ಕಾಲಾಂತರದಲ್ಲಿ ಇವರ ಹಿರಿಯರು ಮುಧೋಳ ಸಂಸ್ಥಾನಕ್ಕೆ ಬಂದು ಬಾಡಗಿಯಲ್ಲಿ ನೆಲೆಸಿದರಂತೆ. ಆಗ ಇವರ ದಿವಾಣಗಿರಿಗೆ ಮುಧೋಳ ಸಂಸ್ಥಾನದವರು ಮಾಚಕನೂರ, ಬಾಡಗಿಗಳಲ್ಲಿ ೧೪೪ ಎಕರೆ ಜಮೀನನ್ನು ಉಂಬಳಿಯಾಗಿ ನೀಡಿದ್ದ ವಿಷಯ ಮನೆ ಹೆಳವರಿಂದ ತಿಳಿದು ಬರುತ್ತದೆ. ಆದರೆ ಕಾಲಕ್ರಮೇಣ ಬಡತನದ ಬಲೆಗೆ ಸಿಲುಕಿದ ಇವರ ಪೂರ್ವಜ ಹಿರಿಯರು ತದನಂತರದಲ್ಲಿ ಕಷ್ಟಪಟ್ಟಿದ್ದು; ಅನೇಕ ಸತ್ಯದ ಸತ್ವಪರೀಕ್ಷೆಗಳಿಗೆ ಒಳಗಾಗಿದ್ದು ಇದೆ. ಮುಂದೆ ಲೇಖಕರ ತಂದೆ 'ರಾಮಪ್ಪ' ಹಾಗೂ ತಾಯಿ 'ರಾಮವ್ವ' ಇವರು ಹಳ್ಳಿಯ ನಾಟೀ ವೈದ್ಯರಾಗಿ ತಮ್ಮ ಕೈಗುಣದಿಂದ

ಅದೇಷ್ಟೋ ಪುಣ್ಯದ ಕೆಲಸಗಳನ್ನು ನಿಸ್ವಾರ್ಥದಿಂದ ಮಾಡಿದುದರಿಂದಲೇ ಇಂದು ಸಿದ್ದು ದಿವಾಣರ ಕುಟುಂಬ ಸಂತೋಷದಿಂದ ಸಮಾಜದಲ್ಲಿ ಸುಸಂಸ್ಕೃತ ಉನ್ನತ ದರ್ಜೆಯ ಮನೆತನವೆಂದು ಹೆಸರು ಪಡೆದುಕೊಂಡಿದೆ. ಇವರ ಧರ್ಮ ಹಿಂದು. ಜಾತಿ ಮರಾಠಾ ಹಾಗೂ ಇವರ ಮನೆದೇವರು 'ಬಂಕಯ್ಯ ಸ್ವಾಮಿಜಿ' ಬಾಡಗಿಯಲ್ಲಿ ಇಂದಿಗೂ ದಿವಾಣರ ಮನೆತನಕ್ಕೆ ವಿಶಿಷ್ಟವಾದ ಬೆಲೆ ಹಾಗೂ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕತೆಯ ನೆಲೆ ಇರುವುದನ್ನು ನಾವು ಕಾಣಬಹುದಾಗಿದೆ.

ಸಿದ್ದು ದಿವಾಣರ ವಂಶಾವಳಿ

ಖಿಷ್ಣಪ್ಪ
|
ಭೀಮಪ್ಪ
|
ಬುಜಂಗಪ್ಪ
|
ಕಂಬಳೆಪ್ಪ + ವಿಠಾಬಾಯಿ (ದಂಪತಿಗಳು)
|
ರಾಮಪ್ಪ + ರಾಮವ್ವ (ದಂಪತಿಗಳು)

ಸಿದ್ದು ದಿವಾಣರು + ಇಂದಿರಾ	ಭಾಗೀರತಿ + ಅರ್ಜುನ	ವಿಠಾಬಾಯಿ + ಚಂದ್ರಪ್ಪ	ಕೃಷ್ಣಾಜೀ + ಶಾಂತಾಬಾಯಿ

ಸಿದ್ದು ದಿವಾಣರು + ಇಂದಿರಾ:

ಜಗದೀಶ	ಜ್ಯೋತಿಭಾ	ಮಹೇಶ

ರಾಮಪ್ಪ ಮತ್ತು ರಾಮವ್ವ ದಂಪತಿಗಳಿಗೆ ಒಟ್ಟು ೪ ಜನ ಮಕ್ಕಳು. ೧) ಸಿದ್ದು ದಿವಾಣರು, ೨) ಭಾಗೀರತಿ, ೩) ವಿಠಾಬಾಯಿ, ೪) ಕೃಷ್ಣಾಜೀ. ರಾಮಪ್ಪನವರು ಒರ್ವ ಕೃಷಿಕ ಮನುಷ್ಯ. ಸಾದಾ ಸರಳವಾದ ವ್ಯಕ್ತಿತ್ವವುಳ್ಳ ಇವರು ಬಾಡಗಿ ಹಳ್ಳಿಗೇ ಬೇಕಾದವರು. ಅಜಾತ ಶತ್ರು. ತಮ್ಮ ಹಿರಿಯರ / ಪೂರ್ವಜರ ಕಾಲಕ್ಕೆ ನೂರಾರು ಎಕರೆ ಹೊಲವಿದ್ದ ದಿವಾಣ ಕುಟುಂಬಕ್ಕೆ ಇವರ ಕಾಲದಲ್ಲಿ ಅದೆಲ್ಲ ಮಾಯವಾಗಿ ಕ್ರೂರವಾದ ಬಡತನ ಮನೆ ಹೊಕ್ಕಿತ್ತು. ರಾಮನ್ನವರೋ ತಾವು ದುಡಿದ ಅಲ್ಪ ಹಣದಲ್ಲಿಯೇ ಹಿರಿಯ ಮಗ ಸಿದ್ದು ಒರ್ವ ವಿದ್ಯಾವಂತನನ್ನಾಗಿಸಿ, ದೊಡ್ಡ ಸಾಹೇಬನನ್ನಾಗಿ ಮಾಡುವ ಕನಸು ಕಂಡವರು.

ವಿದ್ಯಾರ್ಜನೆಗೆ ಎಳ್ಳಷ್ಟು ಕೊರತೆ ಮಾಡದೇ ಒರತೆಯಂತೆ ಸಾಲ-ಸೂಲಗೈದು, ಮಗನನ್ನು ಓದಿಸುತ್ತಿದ್ದರು. ಸಿದ್ದು ದಿವಾಣರ ಮಾತಿನಲ್ಲೇ ರಾಮಪ್ಪನವರ ವ್ಯಕ್ತಿತ್ವವನ್ನು ಪರಿಚಯಿಸುವುದಾದರೇ ನಮ್ಮ ಮನೆಯ ಉದ್ಯೋಗವು ಒಕ್ಕಲುತನವಾಗಿತ್ತು. ನಮ್ಮ ತಂದೆ ಜನಪದ ಮಾತುಗಾರರಾಗಿ ಜೋಡುನುಡಿ, ಪಡೆನುಡಿಗಳ ಚತುರರಾಗಿದ್ದರು. ಪ್ರಾಸಂಗೀಕ ಅವಕಾಶಗಳಲ್ಲಿ ತನ್ನದೆಯಾದ ಶೈಲಿಯಲ್ಲಿ ಪ್ರಾಸಬದ್ಧ ಮತ್ತು ತರ್ಕಬದ್ಧ ಪದಗಳ ಬಳಸಿ ಮಾತನಾಡುವಿಕೆಯಲ್ಲಿ ಪಳಗಿದ ವ್ಯಕ್ತಿಯಾಗಿದ್ದರು. ಒಡಪುಗಳು, ಗಾದೆಗಳು, ಒಗಟುಗಳು ಇವರ ಪ್ರತಿಭೆಯನ್ನು ದೂರದ ಊರುಗಳವರೆಗೆ ಇವರನ್ನು ಪರಿಚಯಿಸಿದ್ದವು. ನನ್ನ ಮಗ ದೊಡ್ಡ ಸಾಹೇಬನಾಗುತ್ತಾನೆಂದು ಕನಸು ಕಂಡವರು. ಈಗ ನಾನು ಬರೆಯುತ್ತ ಸಾಗಿದ್ದು ಅವರ ಒಡನಾಟದ ಫಲವಾಗಿದೆ. ನನ್ನ ತಂದೆಯೊಡನೆ ಅನುಭವಿಸಿದ ಎಲ್ಲ ಅವಕಾಶಗಳ ಅನುಭವಗಳನ್ನು ತಮಗೆ ನೀಡಿದ್ದೇನೆ. ನನ್ನ ಜನಪದ ಸಾಹಿತ್ಯ-ಸಂಸ್ಕೃತಿಯ ಅಭಿರುಚಿಗೆ ನನ್ನ ತಂದೆಯೇ ನನಗೆ ಪ್ರೇರಕರಾಗಿದ್ದಾರೆ. ನನ್ನ ತಂದೆ ಇಂದು ನನ್ನೆದುರಿಗಿಲ್ಲ. ಆದರೆ ನನ್ನ ಪ್ರತಿಯೊಂದು ಸಾಹಿತ್ಯದಲ್ಲಿನ ಶಬ್ದದಲ್ಲಿದ್ದಾರೆ ಎನ್ನುವ ಸಿದ್ದು ದಿವಾಣರ ಮಾತಿನಲ್ಲಿ ರಾಮಪ್ಪನವರ ಸುಸಂಸ್ಕೃತ ವ್ಯಕ್ತಿತ್ವವೂ ಸಂಪೂರ್ಣವಾಗಿ ಬಿಚ್ಚಿಕೊಳ್ಳುತ್ತದೆ ಹಾಗೂ ಅವರು ತನ್ನ ಮಗನಿಗೆ ಗುರುವಾಗಿದ್ದರು; ಪ್ರೇರಕ ಶಕ್ತಿಯಾಗಿದ್ದರು ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು.

ಸಿದ್ದು ದಿವಾಣರು ರಾಮಪ್ಪ-ರಾಮವ್ವ ದಂಪತಿಗಳಿಗೆ ಮೊದಲನೆ ಮಗುವಾಗಿ ದಿನಾಂಕ ೦೫-೧೨-೧೯೪೬ ರಲ್ಲಿ ಜನಿಸಿದರು. ಮೊದಲ ಗಂಡು ಮಗು ಸಿದ್ದು ದಿವಾಣರ ಮೇಲೆ ತಂದೆ-ತಾಯಿ ಬಂಧುಗಳ ವಿಶೇಷ ಅಕ್ಕರೆ-ಪ್ರೀತಿ. ಸಿದ್ದು ದಿವಾಣರಿಗೆ ಕೆನೆ ಮೊಸರು, ಹಿಂಡಿದಾಕ್ಷಣದ ಎಮ್ಮೆಯ ಹಸಿ ಹಾಲನ್ನು ಕುಡಿಸುತ್ತಿದ್ದರು. ಕಡು ಬಡತನ ಮನೆ ಮಾಡಿದರೂ ತನ್ನ ಮುದ್ದಿನ ಮಗ ಸಿದ್ದು ಏನೇನು ತಿನ್ನಲು ಕೇಳುತ್ತಾನೆಯೋ ಅದನ್ನು ಅವನಿಗೆ ತಂದು ನೀಡಿ ಆತನ ಖುಷಿಯಲ್ಲಿಯೇ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು.

ತದನಂತರ ಹುಟ್ಟಿದ ಭಾಗೀರತಿ ಮತ್ತು ವಿಠಾಬಾಯಿ ಸಹೋದರಿಯರೆಂದರೇ ಬಾಲ್ಯದಲ್ಲಿ ಅಷ್ಟೇ ಅಲ್ಲ; ಇಂದಿಗೂ ಸಿದ್ದು ದಿವಾಣರಿಗೆ ಪಂಚಪ್ರಾಣ. ಚಿಕ್ಕಂದಿನಿಂದಲೂ ಸಹೋದರಿಯರ ವಾತ್ಸಲ್ಯ-ಮಮತೆಯಲ್ಲಿ ಬೆಳೆದ ಶ್ರೀಯುತರು ತಾವು ಶಿಕ್ಷಣ ಪಡೆದು ಶಿಕ್ಷಕ ವೃತ್ತಿಯನ್ನು ಗಿಟ್ಟಿಸಿಕೊಂಡು ತನ್ನ ದುಡಿಮೆಯಿಂದ ಬಂದ ಹಣದಿಂದಲೇ (ವೇತನದಿಂದಲೇ) ಇಬ್ಬರೂ ತಂಗಿಯರ ಮದುವೆಯನ್ನು ಮಾಡಿಸಿದ ಕೀರ್ತಿ ಈ ಅಣ್ಣಂದು.

ತಂಗಿ ಭಾಗೀರತಿಗೆ ಶ್ರೀ ಅರ್ಜುನರೊಡನೆ ವಿಠಾಬಾಯಿಯನ್ನು ತಾಯಿಯ ಸಹೋದರ ಸಂಬಂಧಿಯಾದ ಶ್ರೀ ಚಂದ್ರಪ್ಪ ಘೋರ್ಪಡೆಯವರೊಡನೆ ಅದ್ಧುರಿಯಾಗಿ

ಮದುವೆ ಮಾಡಿಕೊಟ್ಟರು. ಬಳಿಕ ತಮ್ಮನಾದ ಶ್ರೀ ಕೃಷ್ಣಾಜೀಯವರಿಗೆ ಶಾಂತಾಬಾಯಿಯವರೊಡನೆ ವಿವಾಹ ಮಾಡಿಸಿ ತಾವು ಹಾರೂಗೇರಿಯ 'ಇಂದಿರಾ'ರವರನ್ನು ಮದುವೆ ಮಾಡಿಕೊಂಡರು.

ಪ್ರೀತಿಯಿಲ್ಲದ ಮೇಲೆ ಯಾತರದ ಬಾಳುವೆ? ಜ್ಯೋತಿಯಿಲ್ಲದ ಮನೆಯು ಹಾಳು ಗವಿಯು ನಾತವಿಲ್ಲದ ಹೂ........................ ಎಂಬ ಕವಿವಾಣಿಯಂತೆ ತಮ್ಮ ಬಡತನದ ಬದುಕಿಗೆ ಹಳಹಳಿಸದೇ ಪ್ರೀತಿ-ವಿಶ್ವಾಸ, ಆದರದ ನಂಬಿಕೆಗಳಿಂದಲೇ ಬದುಕನ್ನು ಸಾರ್ಥಕಪಡಿಸಿಕೊಂಡು ಮುಂದಿನ ಸುಖ-ಸಂತೋಷದ ಸಿಂಧೂವಿನತ್ತ ಪಯಣವನ್ನು ಬೆಳೆಸಿದರು. ಶ್ರೀಯುತ ಸಿದ್ದು ದಿವಾಣರು ಮತ್ತು ಇಂದಿರಾಮ್ಮನವರ ಜಗದಗಲದ ಪ್ರೀತಿಗೆ ಸಾಕ್ಷಿಯಾಗಿ ೩ ಗಂಡು ಮಕ್ಕಳು ಜನಿಸಿದರು.

ಸಿದ್ದು ದಿವಾಣರು + ಇಂದಿರಾ

ಜಗದೀಶ	ಜ್ಯೋತಿಭಾ	ಮಹೇಶ
+	+	+
ಜ್ಯೋತಿ	ತುಳಸಿ	ಸುನಿತಾ

ಪ್ರಥಮ ಪುತ್ರನಾದ ಶ್ರೀ ಜಗದೀಶರು ಬಿ.ಎ. ಪದವೀಧರರು. ಇವರು ಎಲ್.ಐ.ಸಿ. ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಇವರ ಧರ್ಮಪತ್ನಿ ಜ್ಯೋತಿಯವರು ಬಿ.ಕಾಂ. ಪದವೀಧರರು. ೨ನೇ ಮಗನಾದ ಡಾ. ಜ್ಯೋತಿಭಾರವರು ಬಿ.ಎ.ಎಂ.ಎಸ್. ಪದವಿ ಪಡೆದು ಸರ್ಕಾರಿ ವೈದ್ಯರಾಗಿ ಸೇವೆಯನ್ನು ಸಲ್ಲಿಸುತ್ತಿದ್ದರೇ, ಇವರ ಧರ್ಮಪತ್ನಿ ತುಳಸಿಯವರು ಬಿ.ಎ. ಪದವೀಧರರು. ಹಾಗೆಯೇ ಚಿಕ್ಕ ಮಗ ಮಹೇಶರು ಎಂ.ಎ.ಎಂ.ಇಡಿ. ಪದವಿಗಳನ್ನು ಪಡೆದು ಇಂಗ್ಲೀಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಧರ್ಮಪತ್ನಿ ಶ್ರೀಮತಿ ಸುನಿತಾರವರು ಬಿ.ಎ.,ಬಿ.ಈಡಿ. ಪದವೀಧರರು. ಹೀಗೆ ಒಂದೇ ಭವ್ಯ ಬಂಗಲೆಯಲ್ಲಿ ಎಲ್ಲರೂ ಕೂಡಿ ತುಂಬು ಸಂಸಾರವನ್ನು ಆನಂದದಿಂದ ಸಾಗಿಸುತ್ತಿರುವ ಸಿದ್ದು ದಿವಾಣರಿಗೆ ಸುಧಾಕರ, ಪ್ರತೀಕ, ಸೌಭಾಗ್ಯ, ಗಾಯತ್ರಿ, ಜಯರಾಮ, ಸಂಜನಾ ಹೀಗೆ ಮೊಮ್ಮಕ್ಕಳಿದ್ದು, ಅಜ್ಜನಾಗಿ ಜನಪದ ಕಥೆ ಹೇಳುವ ಆತ್ಮೀಯ ಪ್ರಾಣ ಸ್ನೇಹಿತನಾಗಿ, ಸಿದ್ದು ದಿವಾಣರು ಇಳಿ ವಯಸ್ಸಿನಲ್ಲೂ ವಯಸ್ಕರರು ನಾಚುವಂತಹ ಸದೃಢ ದೇಹ ಮತ್ತು ಆರೋಗ್ಯದಿಂದ ನೆಮ್ಮದಿ ಜೀವನವನ್ನು ಮುಧೋಳದಲ್ಲಿ ನಡೆಸುತ್ತಿದ್ದಾರೆ.

೨) ಜನನ - ಬಾಲ್ಯ :

ಸಿದ್ದು ದಿವಾಣರ ಜನಿಸಿದ್ದು ೦೫ ಡಿಸೆಂಬರ ೧೯೪೬ ರಂದು. ತಾಯಿ ರಾಮವ್ವಳು ಅಧ್ಯಾತ್ಮಿಕ ಮತ್ತು ಧಾರ್ಮಿಕ ಸಂಸ್ಕಾರ ಪ್ರವೃತ್ತಿಯುಳ್ಳ ಸಾತ್ವಿಕ ಹೆಣ್ಣು ಮಗಳು. ತಮ್ಮ

ನಡೆ-ನುಡಿಯಲ್ಲಿ ಸೀತೆ-ಸಾವಿತ್ರಿಯರಿಗೆ ಸಮನಾಗಿದ್ದ ಈ ರಾಮವ್ವಳಿಗೆ ಮೊದಲ ಗಂಡು ಮಗು 'ಸಿದ್ದು' ಎಂದರೇ ಅತಿಯಾದ ಪ್ರೀತಿ. ಬಡತನ ಕಿತ್ತು ತಿನ್ನುವಷ್ಟಿದ್ದರೂ ಬದುಕಿನ ಪ್ರೀತಿಗೆ ಮಾತ್ರ ಕಿಂಚಿತ್ತೂ ಬರವಿರಲಿಲ್ಲ. ತಾಯಿ ಸದಾ ಜನಪದ ಕಥೆಗಳನ್ನು, ಪದ್ಯಗಳನ್ನು ರಾತ್ರಿಯ ಚಂದ್ರನ ಆ ಬೆಳದಿಂಗಳ ಬೆಳಕಿನಲ್ಲಿ ಮನೆಯ ಅಂಗಳದ ಹಾಸಿಗೆಯ ಮೇಲೆ ಮಲಗಿಸುತ್ತ ಮಕ್ಕಳಿಗೆ ಹೇಳುತ್ತಿದ್ದಳು. ಅದನ್ನೆಲ್ಲ ಕುತೂಹಲದಿಂದ ಆಸಕ್ತಿಯಿಂದ ಕೇಳುತ್ತಿದ್ದ 'ಸಿದ್ದು' ದಿವಾಣರು ಆಗಿನಿಂದಲೇ ಜಾನಪದದ ಸವಿಗೆ ಶರಣಾಗಿದ್ದರು. ನಂತರದ ದಿನಗಳಲ್ಲಿ ಜನಪದ ಕ್ಷೇತ್ರದಲ್ಲಿ ಆಗಾಧ ಕೃಷಿಗೈದು ಜನಪದ ಜಂಗಮರಾಗಿ ಹೊರಹೊಮ್ಮಿದ್ದು ತಾಯಿಯ ಪ್ರೇರಣೆ ತಂದೆಯ ಸ್ಫೂರ್ತಿಯೇ ಎಂಬುದು ವಾಸ್ತವ ಸತ್ಯ.

ಚಿಕ್ಕಂದಿನಲ್ಲಿ ಬಾಲ್ಯದ ಆಟಗಳನ್ನು ಆಡಲು ಹೊಳೆಯ ದಂಡೆ, ದಂಡೆಯಲ್ಲಿನ ಪೇರು ಮಾವಿನ ಮರಗಳು, ಹುಲ್ಲುಗಾವಲು, ದೇವರ ಗುಡಿಗಳು ಇವು ಬಾಲಕ ಸಿದ್ದುರವರಿಗೆ ಸಾಲುತ್ತಿರಲಿಲ್ಲ. ದಷ್ಟ-ಪಷ್ಟ ಮೈಮಾಟವನ್ನು ಹೊಂದಿದ್ದ ಈ ಪೋರನಿಗೆ ಪ್ರೀತಿಯಿಂದ ಜನರೆಲ್ಲ 'ಮೆದಗ'ನೆಂದು ಕರೆಯುತ್ತಿದ್ದರು. ಬಾಲ್ಯದಿಂದಲೂ ಶಾಂತ-ಸರಳ ಹಾಗೂ ಧೈರ್ಯಶಾಲಿಯಾಗಿದ್ದ ಸಿದ್ದು ದಿವಾಣರಿಗೆ ಈಜುವುದು ಎಂದರೆ ಪಂಚಪ್ರಾಣ. ಒರಗೆಯವರೊಂದಿಗೆ ಹೊಳೆಗೆ ಹೋಗಿ ಈಜುತ್ತ ನಿಮಿಷಗಟ್ಟಲೇ ಉಸಿರಿಡಿದು ಹೊಳೆಯಲ್ಲಿ ಮುಳುಗುವುದು, ಪೇರಲ, ಮಾವು, ಕೆಂಪು ಹುಣಸೆ ಕಾಯಿಗಳನ್ನು ಕದ್ದು ತಿನ್ನುವುದು; ಮಾಲೀಕ ಬಂದಾಗ ಎದ್ದು-ಬಿದ್ದು ಓಡುವುದು, ಕಣ್ಣು ಮುಚ್ಚಾಲೆ, ಮರಕೋತಿ, ಚಿನ್ನಿದಾಂಡು ಆಡುವುದು ಇವರ ಬಾಲ್ಯದ ನಿತ್ಯದ ಕರ್ಮಗಳಾಗಿದ್ದವು.

ತಂದೆ ರಾಮಪ್ಪ ಮತ್ತು ರಾಮವ್ವಳು ಬಾಡಗಿ ಗ್ರಾಮಕ್ಕೆ ಸುತ್ತಲಿನ ಹಳ್ಳಿಗಳಿಗೆ ಪ್ರಸಿದ್ಧ ನಾಟೀ ವೈದ್ಯರು. ಇವರಿಬ್ಬರ ಕೈಗುಣವೇ ಎಲ್ಲ ಕಾರ್ಯಗಳಿಗೆ ಮೂಲವಾಗಿತ್ತು. ಚಿಕ್ಕಮಕ್ಕಳಿಗೆ ಮೈ-ಮುಖಕ್ಕೆಳುವ ಪೈನ್ (ಗುಳ್ಳೆಗಳು)ದಿಂದ ಹಿಡಿದು, ಗರ್ಭಿಣಿಯರಿಗೆ ಕಷ್ಟದ ಬಾಣಂತನವನ್ನು ಸರಳವಾಗಿ ಮಾಡಿಸುವವರೆಗೆ ಇವರ ಕೈಗುಣ ಸಿದ್ಧಿಸಿತ್ತು. ಇಂತಹ ಪರೋಪಕಾರಕ್ಕೆ ಪ್ರತಿಯಾಗಿ ಕಿಂಚಿತ್ತು ಫಲಾಪೇಕ್ಷೆಯನ್ನು ಬಯಸದೇ ಸೇವಾ ಮನೋಭಾವದಿಂದ ಮಾಡಿದ್ದ ಆ ದಂಪತಿಗಳ ಪುಣ್ಯವೇ ಇಂದು ಸಿದ್ದು ದಿವಾಣರನ್ನು ಇಷ್ಟೇತ್ತರಕ್ಕೆ ಒಯ್ದು ನಿಲ್ಲಿಸಿದೆ.

ರಾಮಪ್ಪನವರು ಸಿದ್ದು ದಿವಾಣರಿಗೆ ಕಂಡ ಮೊದಲ ಜನಪದ ಜಂಗಮರು. ಏಕೆಂದರೆ ತನ್ನ ಬರವಣಿಗೆಗೆ ಜಾನಪದದ ಕ್ಷೇತ್ರದ ಈ ಆಸಕ್ತಿಗೆ ತಂದೆಯೇ ಕಾರಣಿಪುರುಷರೆಂದು, ಸ್ಫೂರ್ತಿ ಎಂದೆನ್ನುವ ಸಿದ್ದು ದಿವಾಣರು, ನಾನು ಒಕ್ಕಲು ಮನೆತನದಲ್ಲಿ ಹುಟ್ಟಿ ಬೆಳೆದಿದ್ದೇನೆ. ಬೇಸಾಯದ ಬೇರನ್ನು ಅರಿದು ಕುಡಿದು ಪಚನ ಮಾಡಿಕೊಂಡಿದ್ದೇನೆ. ಗಳೆ, ಗಾಡಿ ಹೊಡೆದಿದ್ದೇನೆ, ಅಕ್ಕಡಿ ಹಾಕಿದ್ದೇನೆ, ಬೆಳೆ ಸಾಲ ಹೊಡೆದಿದ್ದೇನೆ, ಎಡೆಪಟ್ಟಿ ಮೆಟ್ಟಿದ್ದೇನೆ, ಜೋಳ ಕಿತ್ತಿದ್ದೇನೆ, ಗೂಡು-ಭಾಪಾ ಒಗೆದಿದ್ದೇನೆ,

ಸುಂಕ ಕಡಿಸಿಕೊಳ್ಳುತ್ತ ಹಂತಿ ಹೊಡೆದಿದ್ದೇನೆ, ಸುಂಕ ಕಡಿದಾಗ ಶಟಗೊಂಡು ಹಂತಿ ಹೊಡೆಯುವುದನ್ನು ಬಿಟ್ಟು ಹಠ ಮಾಡಿದಾಗ ಅಪ್ಪನಿಂದ ಬೈಯಿಸಿಕೊಂಡಿದ್ದೇನೆ, ಹಂತಿ ಹಾಡಾ ಹಾಡಿದ್ದೇನೆ ಇವೆಲ್ಲವನ್ನು ಅನುಭವಿಸಿದ್ದೇನೆ. ಅನುಭವಿಸಿದ್ದನ್ನೇ ಕೃತಿ ರೂಪದಲ್ಲಿ ಬರೆದಿದ್ದೇನೆ"[೫] ಎನ್ನುವಲ್ಲಿ ಬಾಲ್ಯದಿಂದಲೇ ಸಿದ್ದು ದಿವಾಣರಿಗೆ ಕೃಷಿಯ ಬಗೆಗಿದ್ದ ಒಲವು ಅಧಮ್ಯ ಪ್ರೇಮವನ್ನು ಜಾನಪದದ ಬಗೆಗಿನ ಆಸಕ್ತಿಯನ್ನು ನಾವು ಊಹಿಸಬಹುದು; ಗ್ರಹಿಸಬಹುದು.

೩) ಶಿಕ್ಷಣ :

ಸಿದ್ದು ದಿವಾಣರು ಪ್ರಾಥಮಿಕ ಶಾಲಾ ಶಿಕ್ಷಣವನ್ನು ಸ್ವಗ್ರಾಮ 'ಬಾಡಗಿ'ಯಲ್ಲಿಯೇ ಪೂರೈಸಿ 'ಮುಲ್ಕಿ' ಪರೀಕ್ಷೆಯನ್ನು ಪಾಸು ಮಾಡಿಕೊಂಡರು. ಇವರಿಗೆ ೮ ವರ್ಷ ವಯಸ್ಸು ತುಂಬುವವರೆಗೂ ಶಾಲೆಯ ಹೊರಗಿನ ಕಟ್ಟೆಯ ಮೇಲೆ ಕುಳಿತು ಶಾಲೆಯ ಕೋಣೆಯೊಳಗಿದ್ದ ಮೊಮ್ಮಗನನ್ನು ಕಾಯುತ್ತಿದ್ದರಂತೆ ಅಜ್ಜ ಕಂಬಳೆಪ್ಪನವರು. ಮುಂದೆ ಹೈಸ್ಕೂಲ ಶಿಕ್ಷಣವನ್ನು ಜಮಖಂಡಿಯ ಪರಶುರಾಮ ಬಾಹು ಪ್ರೌಢ ಶಾಲೆಯಲ್ಲಿ ಪೂರೈಸಿ ೧೯೬೫ ರಲ್ಲಿ ಮೇಟ್ರಿಕ್ ಪರೀಕ್ಷೆಯನ್ನು ಪಾಸು ಮಾಡುತ್ತಾರೆ. ಬಡತನದಲ್ಲಿಯೇ ಕಾಲ ದೂಡುತ್ತಿದ್ದ ಕುಟುಂಬಕ್ಕೆ ಸಿದ್ದು ದಿವಾಣರು ಆಸರೆಯಾಗಿ ನಿಲ್ಲಲು ಈ ಶಿಕ್ಷಣ ಸಾಧ್ಯವಾಗಿಸಿತು. ಮುಂದೇ ೧೯೭೧ ರ ಜುಲೈ ೨೭ ರಂದು ಶಿಕ್ಷಕ ವೃತ್ತಿಗೆ ಕಾಲಿರಿಸಿದ ಶ್ರೀಯುತರು ತನ್ನ ವೇತನದಲ್ಲಿಯೇ ತಂಗಿಯರ ಮದುವೆ ಮಾಡಿಸಿ, ಹಿರಿಯಣ್ಣನ ಸ್ಥಾನಕ್ಕೆ ಮತ್ತಷ್ಟು ಕಳೆ ತಂದುಕೊಂಡರು. ತದನಂತರದಲ್ಲಿ ಶ್ರೀಯುತರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರಿನಿಂದ ಬಿ.ಎ. ಮತ್ತು ಬಿ.ಈಡಿ ಪದವಿಯನ್ನು ಕೂಡ ಪಡೆದುಕೊಂಡರು.

ಬಡತನದಿಂದ ಬಿಸಿ ಉಸಿರನ್ನು ಹಾಕಿದರೂ ಹೆದರದೇ ಅದನ್ನು ಎದುರಿಸಿ ಮಗನಿಗೆ ಸ್ಫೂರ್ತಿ ಪ್ರೇರಣೆಯ ಚಿಲುಮೆಯಾಗಿದ್ದ ರಾಮಪ್ಪನವರು ೧೯೮೬ ರಲ್ಲಿ ವಿಧಿವಶರಾಗುತ್ತಾರೆ. ಆಗ ಸಿದ್ದು ದಿವಾಣರು ಬಹಳಷ್ಟು ನೊಂದುಕೊಳ್ಳುತ್ತಾರೆ. ಇನ್ನೂ ಸ್ವಲ್ಪ ಕಾಲ ತಂದೆ ಬದುಕಿದ್ದರೆ ಚೆನ್ನಾಗಿರುತ್ತಿತ್ತು; ಏಕೆಂದರೇ ಕಷ್ಟವನ್ನೇ ತಾನು ಅಡಿಪಾಯ ಹಾಕಿ ಅದರ ಮೇಲೆ ಸುಖದ ಸೌಧೆಯನ್ನು ಕಟ್ಟುವ ಹಂತದಲ್ಲಿರಬೇಕಾದರೇ ತೀರಿ ಹೋದ ತಂದೆ ಆ ಸುಖದ ಸೌಧದಲ್ಲಿ ಒಂದೆರಡು ವರ್ಷ ವಾಸ್ತವ್ಯ ಮಾಡಲಿಲ್ಲವಲ್ಲ ಎಂಬ ಕೊರಗು ಇಂದಿಗೂ ಸಿದ್ದು ದಿವಾಣರನ್ನು ಕಾಡುತ್ತಿದೆ. ನಂತರದಲ್ಲಿ ನಿರ್ಮಾಣವಾದ ಸುಂದರ ಸುಖದ ಸೌಧದಲ್ಲಿ ನಡೆದು ಬಂದ ದಾರಿಯನ್ನು ನೆನೆಯುತ್ತ ಸಾರ್ಥಕ ಬದುಕನ್ನು ಬದುಕಿ ಸಂತೋಷಗೊಂಡು ತನ್ನ ಮಗನ ಸಾಧನೆ ಸಿದ್ಧಿಗಳನ್ನೆಲ್ಲ ಮನದುಂಬಿ ಕಣ್ಣಾರೆ ಕಂಡು ಸುಖಿಸಿದ ತಾಯಿ ರಾಮವ್ವರು ೨೦೦೪ ರಲ್ಲಿ ತೀರಿಕೊಳ್ಳುತ್ತಾರೆ. ಇಂದಿಗೂ ತಂದೆ-ತಾಯಿಗಳ ಕುರಿತು ಸಿದ್ದು ದಿವಾಣರು ಮಾತಿಗಿಳಿದರೇ ಕಣ್ಣೀರಿಡುವ ಶ್ರೀಯುತರ ಮಾತೃ-ಪಿತೃ ವಾತ್ಸಲ್ಯಕ್ಕೆ ತಲೆಬಾಗಲೇ ಬೇಕಾಗುತ್ತದೆ.

೪) ದಾಂಪತ್ಯ :

ಶ್ರೀ ಸಿದ್ದು ದಿವಾಣರು ಹಾರೂಗೇರಿಯ ಇಂದಿರಮ್ಮನವರನ್ನು ದಿನಾಂಕ ೨೫-೦೫-೧೯೭೨ ರಂದು ಮದುವೆಯಾದರು. ಬದುಕಿನಲ್ಲಿ ಸುಖ-ದುಃಖಗಳು ಜೊತೆಯಾಗಿ ಇರಲ್ಲ! ಅವುಗಳ ಪ್ರಯಾಣ ಹಿಂದೆ-ಮುಂದೆ ಎಂಬ ಸತ್ಯವನ್ನು ಅರಿತಿದ್ದ ದಂಪತಿಗಳು ಸಿಗುವ ಅಲ್ಪ ಸಂಬಳದಲ್ಲಿಯೇ ಬಳಗದವರೆಲ್ಲರೂ ಹಂಚಿ ತಿನ್ನುತ್ತ ಜೀವನವನ್ನು ನಿರ್ವಹಿಸುತ್ತ ಬಂದರು.

ಶ್ರೀಮತಿ ಇಂದಿರಮ್ಮನವರು ಸಿದ್ದು ದಿವಾಣರ ಬದುಕಿನ ನಡಿಗೆಗೆ ಅನುವರ್ತಿಯಾಗಿ ನಡೆದವರು. ದೇವನಿಟ್ಟ ಅನೇಕ ಸತ್ವ-ಪರೀಕ್ಷೆಗಳಲ್ಲಿ ಕಿಂಚಿತ್ತೂ ವಿಚಲಿತಗೊಳ್ಳದೇ ಭರವಸೆಯ ಭರದಲ್ಲಿ ಮುನ್ನಡೆದರು. ಸಿದ್ದು ದಿವಾಣರ ಸಾಹಿತ್ಯ ಕೃಷಿಗೆ ಶ್ರೀಮತಿ ಇಂದಿರಮ್ಮನವರ ಸಹಾಯ-ಸಹಕಾರ ಸ್ಪೂರ್ತಿಗಳು ಕೂಡ ಕಾರಣವಾದವು. ಈ ಅಪರೂಪದ ಮಾದರಿ ದಂಪತಿಗಳು ಅತಿಥಿ ಸತ್ಕಾರಕ್ಕೆ ಎತ್ತಿದ್ದ ಕೈ. ಇವರು ಉತ್ತಮ ಅತೀಥೇಯರಾಗಿದ್ದಾರೆ.

ಬಾಳ ಹೆಮ್ಮರದಲ್ಲಿ ಮನೆ ಮಾಡಿಕೊಂಡಿಹುದು ಜೇನು ಗೂಡು; ಕಂಟಿಗಳ ಕಿತ್ತೆಸೆವ ಒಲವು ನಿನ್ನೊಳಗಿರಲು, ಜೇನು ಬಿಡಿಸುವ ಕಲೆಯನರಿತಿರುವ ಸತಿಯಿರಲು ಬಾಳ ಹೆಮ್ಮರದಿಂದ ಜೇನು ಸವಿ ಪಡೆಯುವುದು ಕಷ್ಟವಲ್ಲ[೫೭] ಎಂಬ ಕವಿವಾಣಿಯಂತೆ ಈ ದಂಪತಿಗಳು ಒಬ್ಬರನೊಬ್ಬರನ್ನರಿತು ಸಾರ್ಥಕ ಬದುಕನ್ನು ಬದುಕುತ್ತಿದ್ದಾರೆ.

೫) ಸಾಹಿತ್ಯ ಚಟುವಟಿಕೆಗಳು :

ಗ್ರಾಮೀಣ ಜನಪದ ಕೃಷಿ ಮನೆತನದಲ್ಲಿ ಜನ್ಮ ತಾಳಿದ ಸಿದ್ದು ದಿವಾಣರು ಬಾಲ್ಯದಿಂದಲೂ ಸ್ಮೃತಿಯಲ್ಲೇ ಉಳಿದುಕೊಂಡಿದ್ದ ಕೃಷಿ ಸಂಸ್ಕೃತಿಯ ಜೀವನಾನುಭವಗಳನ್ನು ಒಂದೊಂದು ಉಪಯುಕ್ತ ಕೃತಿಗಳನ್ನಾಗಿ ಬರೆದು ಜೀವ ನೀಡಿದರು. ಸೂಕ್ಷ್ಮಾತೀ ಸೂಕ್ಷ್ಮ ಗ್ರಾಮೀಣ ಸಂವೇದನೆಗಳನ್ನು ಅತ್ಯಂತ ಹೃದ್ಯವಾಗಿ ಅನೇಕ ಕೃತಿಗಳಲ್ಲಿ ದಾಖಲಿಸಿದರು. ಗ್ರಾಮೀಣ ಪರಿಭಾಷೆಯ ಅರ್ಥವಂತಿಕೆಯನ್ನು ಅವರು ಹಿಂಜಿಂಜಿ ತೋರಿಸಿದ್ದಾರೆ. ಹಿಂದಿನ ಗ್ರಾಮೀಣ ಜನಪದರ ಸಂಸ್ಕೃತಿ-ಸಂಪ್ರದಾಯ, ವಿಧಿ-ವಿಧಾನಗಳು, ಜೀವನ ಕ್ರಮಗಳೆಲ್ಲ ಇಂದು ನಶಿಸಿ ಹೋಗುತ್ತಿರುವ ದುರಂತದ ಬಗ್ಗೆ ಎಚ್ಚರಿಕೆ ಮಾತುಗಳನ್ನು ಹೇಳಿರುವುದರ ಜೊತೆಗೆ ತನ್ಮೂಲಕ ಅವರು ಈ ನಾಡಿನ ನೆಲದ ಸಂಸ್ಕೃತಿ ಅಭಿರುಚಿಗಳನ್ನು ಎತ್ತಿ ಹಿಡಿದಿದ್ದಾರೆ.

ಶ್ರೀಯುತರು ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅನೇಕ ಸಂಶೋಧನಾತ್ಮಕ ಮತ್ತು ವಿಮರ್ಶಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಜೊತೆಗೆ ಆಧುನಿಕತೆಯ ಭರಾಟೆಯಲ್ಲಿ ಮರೆಯಾಗುತ್ತಿರುವ ಜನಪದ ಗದ್ಯ-ಪದ್ಯಗಳನ್ನು ಸಂಪಾದಿಸಿ ವಿಶ್ಲೇಷಿಸಿದ್ದಾರೆ. ಶ್ರೀಯುತ ಸಿದ್ದು ದಿವಾಣರ ಬರವಣಿಗೆಗಳೆಂದರೇ –

೧)	ಭಾರತ ಸ್ವರ್ಣರಶ್ಮಿ (ಕವನ ಸಂಕಲನ)
೨)	ಪಾರಿಜಾತ ಗಾರುಡಿಗ (ವ್ಯಕ್ತಿ ಪರಿಚಯ)
೩)	ಕರ್ನಾಟಕ ಪರಿಚಯ (ಮಾಹಿತಿ ಸಂಗ್ರಹ)
೪)	ಜೇನ ಹನಿ (ಚುಟುಕು ಕವನ ಸಂಕಲನ)
೫)	ನೆಂಪು-ಕಂಪು (ಲೇಖನ ಮಾಲೆಗಳು)
೬)	ಜಗದಗಲ ಪ್ರೀತಿ (ಕವನ ಸಂಕಲನ)
೭)	ಶಬ್ದಸಿರಿ (ಚುಟುಕು ಸಂಪದ)
೮)	ಗುಳಬುಟ್ಟಿ (ಜನಪದ ಸಂಪದ)
೯)	ಹಂತಿ ನೀ ಎಲ್ಹೋಗಿ ಕುಂತಿ (ಜನಪದ ಸಂಪದ)
೧೦)	ಎದ್ದಾವ ಹೋಳ್ಗಿ (ಜನಪದ ಸಂಪದ)
೧೧)	ಸಿದ್ಧಹನಿ (ಚುಟುಕು ಸಂಪದ)

ಹೀಗೆ ಸಿದ್ದು ದಿವಾಣರು ಜಾನಪದ ಸಾಹಿತ್ಯಿಕ ಕೃತಿಗಳನ್ನು ರಚಿಸಿರುವುದಷ್ಟೇ ಅಲ್ಲದೇ ನಾಡಿನೆಲ್ಲೆಡೆ ಹಮ್ಮಿಕೊಳ್ಳುವ ಹಲವಾರು ಸಾಹಿತ್ಯಿಕ ಸಮಾರಂಭಗಳಲ್ಲಿ ವಿವಿಧ ಗೋಷ್ಠಿಗಳ ಅಧ್ಯಕ್ಷರಾಗಿ ಹಾಗೆಯೇ ಅನೇಕ ಮಹತ್ವಪೂರ್ಣ ಜಾನಪದ ಲೇಖನ ಬರಹಗಳನ್ನು ಮಂಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ಅಸಂಖ್ಯಾತ ಲೇಖನಗಳು ಕನ್ನಡದ ಹಲವಾರು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡು ನಾಡಿನ ಘನ ವಿದ್ವಾಂಸರ ಗಮನ ಸೆಳೆದಿವೆ.

ಶ್ರೀ ಪಾಟೀಲ ಪುಟ್ಟಪ್ಪ, ಶ್ರೀ ಸಿದ್ಧರಾಜ ಪೂಜಾರಿ, ಡಾ. ವ್ಹಿ. ಎಸ್. ಮಾಳಿ, ಶ್ರೀ ಅರ್ಜುನ ಕೊರಟಕರ, ಶ್ರೀ ಈಶ್ವರಚಂದ್ರ ಚಿಂತಾಮಣಿ, ಶ್ರೀ ಸಂಗಮೇಶ ಕೋಟಿ, ಶ್ರೀ ಬಿ. ಪಿ. ಹಿರೇಸೋಮಣ್ಣವರ, ಶ್ರೀ ಶಿವಾನಂದ ಪೂಜಾರ, ಶ್ರೀ ಜಿ. ಎಸ್. ವಡಗಾಂವಿ, ಶ್ರೀ ವಾಸಣ್ಣ ದೇಸಾಯಿ, ಶ್ರೀ ಕಂಠೀ ಹನುಮಂತರಾಯ, ಶ್ರೀ ಎಂ. ಎಸ್. ಬಾದಾಮಿ, ಶ್ರೀ ಬಾಬುರಡ್ಡಿ ತುಂಗಳ, ಶ್ರೀ ಕೆ. ಎಂ. ಪೆಟ್ಲೂರು, ಡಾ. ವೀರೇಶ ಬಡಿಗೇರ, ಡಾ. ವಿ. ಎಂ. ಪಾಟೀಲ, ಶರಣಶ್ರೀ ಈಶ್ವರ ಮಂಟೂರು ಇನ್ನೂ ಹಲವಾರು ಪ್ರಬುದ್ಧ ವಿದ್ವಾಂಸರೊಡನೆ ನಿಕಟ ಸಂಪರ್ಕವನ್ನು ಹೊಂದಿದ ಪರಿಣಾಮವಾಗಿ ಸಿದ್ದು ದಿವಾಣರ ಬೌದ್ಧಿಕ ವ್ಯಕ್ತಿತ್ವ, ಹುಲುಸಾದ ಜನಪದ ಸಾಹಿತ್ಯ ಕೃಷಿ ಬೆಳೆಯಲು ಸಾಧ್ಯವಾಗಿದೆ.

### ೬)	ವೃತ್ತಿ – ಪ್ರವೃತ್ತಿ – ವ್ಯಕ್ತಿತ್ವ :

ವೃತ್ತಿ :

ಜಮಖಂಡಿ ತಾಲೂಕು ಮರೇಗುದ್ದಿಯಲ್ಲಿ ೧೯೬೬ ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಆರಂಭ. ಬೀಳಗಿ ತಾಲೂಕಿನ ಹೆಗ್ಗೂರು, ಸಿಂಧಗಿ ತಾಲೂಕಿನ ರಾಮಾಪೂರ ಪಿಜಿ, ಬಸವನ ಬಾಗೇವಾಡಿ ತಾಲೂಕಿನ ಮಾರ್ಕಬ್ಬಿನ ಹಳ್ಳಿ, ಬದಾಮಿ ತಾಲೂಕಿನ ಹೊಸೂರು, ಒಂಟಗೋಡಿ, ರಂಜಣಗಿ, ಮಹಾಲಿಂಗಪೂರ, ಮುಗಳಖೋಡ,

ಮುಧೋಳ, ಬೂದಿಹಾಳ, ಎಸ್. ಜಿ. ಸಿದ್ದಾಪೂರಗಳಲ್ಲಿ ಸೇವೆ ಸಲ್ಲಿಸಿ ೨೦೦೪ ರಲ್ಲಿ ನಿವೃತ್ತಿ ಹೊಂದಿದ್ದಾರೆ.

ವೃತ್ತಿ ಪ್ರವೃತ್ತಿ :

* ಜನಜಾಗೃತಿ ಬೀದಿ ನಾಟಕ ಕಲಾವಿದರಾಗಿ
* ಆಕಾಶವಾಣಿಗಳಲ್ಲಿ ಜಾನಪದ ಕುರಿತು ಮಾತು
* ಮಕ್ಕಳ ರಂಗ ತರಬೇತಿ ಶಿಬಿರದಲ್ಲಿ ಕಲಾವಿದರಾಗಿ
* ದೂರದರ್ಶನ ಚಂದನದಲ್ಲಿ ಚಿಂತನ ಕಾರ್ಯಕ್ರಮದಲ್ಲಿ ಚಿಂತಕರಾಗಿ
* ಗ್ರಾಮೀಣ ರಂಗೋತ್ಸವ ಕಾರ್ಯಕ್ರಮ ನಿರ್ವಹಣೆ
* ಜಿಲ್ಲಾ ಮೆಟ್ರಿಕ ಮೇಳ ನಿರ್ವಹಣೆ
* ಪ್ರತಿಭಾ ಕಾರಂಜಿ ರೂಪಕಕಾರರಗಾಗಿ
* ಕಲಾಜಾಥಾ ಅಕ್ಷರ ಕಾರಂಜಿ ರೂಪಕ
* ಕಲಾಜಾಥಾ ಕಲಾವಿದರಾಗಿ
* ಚಾಲುಕ್ಯ ಉತ್ಸವದಲ್ಲಿ ಸಂವಾದಕರಾಗಿ

ಸಿದ್ದು ದಿವಾಣರು ತಮ್ಮ ಅನುಪಮ ಸೇವೆಯನ್ನು ಸಲ್ಲಿಸಿದ್ದಾರೆ; ಸಲ್ಲಿಸುತ್ತಿದ್ದಾರೆ.

ವ್ಯಕ್ತಿತ್ವ :

ಮಾನವೀಯ ಅಂತಃಕರಣದ ವ್ಯಕ್ತಿತ್ವವನ್ನು ಹೊಂದಿರುವ ಸಿದ್ದು ದಿವಾಣರು ಕವಿಯಾಗಿ, ಸಂಶೋಧಕರಾಗಿ, ಸಂಪಾದಕರಾಗಿ, ವಿಮರ್ಶಕರಾಗಿರುವುದರ ಜೊತೆಗೆ ಮಾನವೀಯ ಮೌಲ್ಯಗಳ ಮನಸ್ಸಿನ ಮನುಷ್ಯರಾಗಿದ್ದಾರೆ. ಆದರ್ಶತೆ, ತತ್ವ ಸಿದ್ಧಾಂತಗಳನ್ನೇ ನಂಬಿ ನಡೆದಿರುವ ಶ್ರೀಯುತರು ಖಂಡಿತವಾದಿಗಳು. ಭಂಡತನಕ್ಕೆ ಯಾವತ್ತೂ ರಾಜೀ ಮಾಡಿಕೊಂಡವರಲ್ಲ. 'ಕಂಡದನ್ನಾಡಿದರೆ, ಕೆಂಡದಂತಹ ಕೋಪ' ಎಂಬ ಮಾತಿನ ಅರಿವಿದ್ದರೂ ಇದ್ದದ್ದನ್ನು ಇದ್ದಂತೆ ಹೇಳುವ, ಯಾವುದೇ ಮುಲಾಜಿಗೆ ಒಳಗಾಗದ ವ್ಯಕ್ತಿ ಎಂದು ಮುಧೋಳವೇ ಮಾತಾಡುವುದುಂಟು. ಇಂತಹ ವ್ಯಕ್ತಿಯ ವ್ಯಕ್ತಿತ್ವವನ್ನು ಕೇವಲ ಅವರು ರಚಿಸಿರುವ ಸಾಹಿತ್ಯವನ್ನು ಅವಲೋಕಿಸಿ ದೃಢಪಡಿಸಿವುದು ಉಚಿತವಲ್ಲವೆಂದು ತಿಳಿದು ಅವರ ಸಮಗ್ರ ವ್ಯಕ್ತಿತ್ವವನ್ನು ಅವರನ್ನು ಅತೀ ಹತ್ತಿರದಿಂದ ಕಂಡ ಗೆಳೆಯರಿಂದ ಅಭಿಮಾನಿಗಳಿಂದ ಶಿಷ್ಯವರ್ಗ ಸಂಬಂಧಿಗಳಿಂದ ಕಲೆ ಹಾಕಲಾಗಿದೆ.

* **ಬಸವರಾಜ ಗವಿಮಠ :**

ಸಿದ್ದು ದಿವಾಣರು ಶಾಸ್ತ್ರಬದ್ಧವಾದ – ತೂಕಬದ್ಧ ಮಾತುಗಳಿಂದಲೇ ಮನೆ ಮನಗಳನ್ನು ಕಟ್ಟಿದವರು. ಎಷ್ಟೇ ದೊಡ್ಡವರಾದರೂ ತಾವು 'ಸಿದ್ದು' ಎಂದೇ ಕರೆಯಿಸಿಕೊಳ್ಳುವ ಇವರ ಗುಟ್ಟು................ ಹುಟ್ಟಿಸಿದ್ದು, ಬೆಳೆಸಿದ್ದು, ಬದುಕಿಸಿದ್ದು, ನೋಡಿಸಿದ್ದು, ಮಾಡಿಸಿದ್ದು ಹೀಗೆ ಎಲ್ಲಾ ಕ್ರಿಯಾಪದಗಳಿಗೆ 'ಸಿದ್ದು' ಪದ ಅನ್ವರ್ಥವಾಗುವಂತೆ ಇವರ ದಿವಾಣಗಿರಿಯೂ

ಎಂದೂ ಯಾರ ಮನೋಧೋರಣೆಗಳ ಮೇಲೆ ಸವಾರಿ ಮಾಡಿಲ್ಲ. ಬದುಕಿನುದ್ದಕ್ಕೂ ಶಿಕ್ಷಕ ವೃತ್ತಿಯನ್ನು ತನ್ನತನವನ್ನು ಉಳಿಸಿಕೊಂಡು ವಿದ್ಯಾರ್ಥಿ, ಪಾಲಕ, ಅಧಿಕಾರಿ ವರ್ಗದವರ ಮನಗೆದ್ದ ಮಹಾನ ವ್ಯಕ್ತಿ.

*** ಶ್ರೀ ಕಂಠೀ ಹನುಮಂತರಾಯರು[೭] :**

ಸಿದ್ದು ದಿವಾಣರು ಗ್ರಾಮೀಣ ಬದುಕಿನ ಸಜೀವ ನಿಘಂಟೇ ಆಗಿದ್ದಾರೆ. ಶ್ರೀಯುತರ ಶಬ್ದ ಸಂಪತ್ತು ಅಕ್ಷಯವಾದ ಗಣಿ ಇದ್ದ ಹಾಗೆ.

*** ಎಂ. ಎಸ್. ಬದಾಮಿ[೮] :**

ಸಿದ್ದು ದಿವಾಣರು ಸಾಹಿತ್ಯ, ಶಿಕ್ಷಣ, ಸಮಾಜ ಸೇವೆ ಮುಂತಾದ ರಂಗಗಳಿಗೆ ಕೊಡುಗೆ ಕೊಡುವಲ್ಲಿಯೇ ಸುಖ ಕಾಣುವಂತವರು.

*** ಬಿ. ಎಸ್. ವಡಗಾಂವಿ[೯] :**

ಗ್ರಾಮೀಣ ಬದುಕಿನಲ್ಲಿ ಅರಳಿ ಬೆಳೆದ ಸಿದ್ದು ದಿವಾಣರು ಅಪ್ಪಟ ಅನುಭವದ ಜಾನಪದ ಸೊಗಡನ್ನು ಮೈಗೂಡಿಸಿಕೊಂಡವರು. ನಿರರ್ಗಳವಾಗಿ ಟಿಪ್ಪಣಿ ರಹಿತವಾಗಿ ತಾಸುಗಟ್ಟಲೇ ಜಾನಪದ ಕುರಿತು ಮಾತನಾಡಬಲ್ಲ ನೈಜ ಜನಪದ ವಿದ್ವಾಂಸರು.

*** ಕೃಷ್ಣ ಮೂರ್ತಿ ನಾಯಕ (ಅಂಕೋಲ)[೧೦] :**

ಮನುಷ್ಯನಿಗೆ ೬೦ ದಾಟಿದ ಮೇಲೆ ಅರಳು-ಮರಳು ಎನ್ನುತ್ತಾರೆ. ಆದರೆ ಸಿದ್ದು ದಿವಾಣರು ಮರಳಿ ಅರಳುತ್ತಿದ್ದಾರೆ. ಎಲ್ಲಾ ವರ್ಗದವರೊಡನೆ ಹೊಂದಿಕೊಂಡು ಗೌರವಿಸುವ ಗುಣ ಮೆಚ್ಚುವಂತದ್ದು.

*** ಶ್ರೀ ಕೆ. ಎಂ. ಪೆಟ್ಲೂರ್[೧೧] :**

'ವಿಶಿಷ್ಟ ಶೈಲಿಯ ಮಾತಿನ ಮೋಡಿಯಿಂದ ಸೆಳೆಯುವ ನಗುಮುಖದ ನೇಹಿಗ ಸಿದ್ದು ದಿವಾಣ'.

*** ಸಿದ್ಧರಾಮ ಮನಹಳ್ಳಿ[೧೨] :**

ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕರಾಗಿ ಮಕ್ಕಳಿಗೆ ನಲ್ಮೆಯ ಗುರುಗಳಾಗಿ, ನೋಡುವವರಿಗೆ ಚಿಂತನ ಶೀಲ ಶಿಕ್ಷಕರಾಗಿ ಹೀಗೆ ಬಗೆಬಗೆಯಾಗಿ ಒಡೆದು ಕಾಣುವ ವ್ಯಕ್ತಿತ್ವ ಹೊಂದಿದ ದಿವಾಣಜೀಯವರು ವ್ಯಕ್ತಿ ಮತ್ತು ಸಮಾಜ ಹೀಗಿರಲೆಂದು ಆಶಿಸುವ ಮಹಾನ ವ್ಯಕ್ತಿಯಾಗಿದ್ದಾರೆ.

*	**ಸಿದ್ಧರಾಜ ಪೂಜಾರಿ[೧೩] :**

ಹಿರಿಯ ಕವಿ ಸಿದ್ದು ದಿವಾಣರು ಅಪ್ಪಟ ಸ್ನೇಹ ಜೀವಿ. ಅಷ್ಟೇ ಸೂಕ್ಷ್ಮ ಮನಸ್ಸಿನ ವ್ಯಕ್ತಿ.

*	**ಈಶ್ವರ ಮಂಟೂರ[೧೪] :**

ಸಿದ್ದು ದಿವಾಣರದು ಸಕಲರಿಗೆ ಲೇಸ ಬಯಸುವ ಹೃದಯ. ಪರೋಪಕಾರ ಗುಣದಿಂದ ಮತ್ತು ಅದರ ಫಲದಿಂದ ಮೇಲೇರಿದವರು. ಇವರದ್ದು 'ಹೂ' ಮನಸ್ಸು.

**೨)	ಜನಪದ ಜಂಗಮ :**

ಸಿದ್ದು ದಿವಾಣರು ಮೂಲತಃ ಕೃಷಿಕ ಗ್ರಾಮೀಣ ಕುಟುಂಬದಲ್ಲಿ ಹುಟ್ಟಿದವರು. ಈ ನೆಲದ ಜಾನಪದ ಪರಿಸರದಲ್ಲೇ ಬೆಳೆದವರು. ತಂದೆ ರಾಮಪ್ಪ ಕೃಷಿಕನಾಗಿದ್ದು ಜನಪದ ಮಾತಿನ ಜಾದುಗಾರರಾಗಿ ಜನರನ್ನು ತನ್ನಡೆಗೆ ಸೆಳೆದುಕೊಳ್ಳುವ ರಸಋಷಿಯಾಗಿದ್ದರು. 'ಮಣ್ಣ ಬಿಟ್ಟು ಮಡಿಕೆಯಿಲ್ಲ ತನ್ನ ಬಿಟ್ಟು ದೇವರಿಲ್ಲ' ಎಂಬ ಜೀವ ಮಂತ್ರವನ್ನು ಪಾಲಿಸುವ ಬಾಡಗಿ ಹಳ್ಳಿಗರು ಅಪ್ಪಟ ಜನಪದ ಪ್ರೇಮಿಗಳು. ಸಮಸ್ತ ಮನುಕುಲಕ್ಕೆ ಕಲ್ಯಾಣವಾಗಲೆಂದು ಪ್ರಾರ್ಥಿಸೋ ವಿಶಾಲ ಹೃದಯಿಗಳು. ಇಂತಹ ವಾತಾವರಣದಲ್ಲಿ ಬೆಳೆದ ಸಿದ್ದು ದಿವಾಣರು ಸಹಜವಾಗಿಯೇ ಮುಂದೇ ಜನಪದ ಕ್ಷೇತ್ರದಲ್ಲಿ ಸಾಧನೆಗೈದು ಜನಪದ ಜಂಗಮರೆಂದು, ಬಾಗಲಕೋಟೆಯ ಬೇಂದ್ರೆಯೆಂದು ಪ್ರಸಿದ್ಧಿ ಪಡೆದವರು.

ಸಿದ್ದು ದಿವಾಣರ ಬದುಕನ್ನು ಹಾಗೂ ಬರಹಗಳನ್ನು ಆಳವಾಗಿ ಕಂಡುಂಡು, ಜನಪದ ಜಂಗಮರೆಂದು ಅವರನ್ನು ಪೂಜ್ಯನೀಯವಾಗಿ ಕಾಣುವ ಮತ್ತು ಅವರ ಮೌಲ್ಯಯುತ ವ್ಯಕ್ತಿತ್ವಕ್ಕೆ ಮನಸೋತು ಭಕ್ತಿ–ಗೌರವಗಳಿಂದ ದಿವಾಣರ ಜಾನಪದ ಬದುಕನ್ನು ಪರಿಚಯಿಸಿದವರು ಅದೆಷ್ಟೋ ಜನರಿದ್ದಾರೆ. ಅವರಲ್ಲಿ –

*	**ಡಾ. ವ್ಹಿ. ಎಲ್. ಪಾಟೀಲ[೧೫] :**

ಹಿರಿಯರಾದ ಸಿದ್ದು ದಿವಾಣರು ಕೃಷಿ ಸಂಸ್ಕೃತಿಗೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ಅನುಭವಗಳನ್ನು ಪ್ರಾಮಾಣಿಕವಾಗಿ ಕೃತಿಗಳ ಮೂಲಕ ಕಟ್ಟಿ ಕೊಟ್ಟಿರುವುದು ನಿಜಕ್ಕೂ ಶ್ಲಾಘನೀಯ. ಸರಳ ಭಾಷೆ, ಆತ್ಮೀಯ ನಿರೂಪಣೆ, ಅದ್ಭುತ ಪದ ಸಂಪತ್ತು, ಕೃತಿಗಳ ಮೌಲ್ಯಗಳನ್ನು ಹೆಚ್ಚಿಸಿವೆ. ಜನಪದ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ ಶ್ರೀಯುತರಿಗೆ ಧನ್ಯವಾದಗಳು.

*	**ಸಿದ್ಧರಾಜ ಪೂಜಾರಿ[೧೬] :**

ಸಿದ್ದು ದಿವಾಣರು ಜಾನಪದ ಕಣಜವೇ ಆಗಿದ್ದಾರೆ. ಬಾಲ್ಯದಿಂದಲೂ ಅವರ

ಸ್ಮೃತಿಯಲ್ಲೇ ಉಳಿದುಕೊಂಡಿದ್ದ ಕೃಷಿ ಸಂಸ್ಕೃತಿಯ ಜೀವನಾನುಭವಗಳು ಒಂದೊಂದು ಉಪಯುಕ್ತ ಕೃತಿಗಳಾಗಿ ಜೀವ ತಳೆದಿವೆ. ಸೂಕ್ಷ್ಮಾತಿ ಸೂಕ್ಷ್ಮ ಗ್ರಾಮೀಣ ಸಂವೇದನೆಗಳನ್ನು ಅತ್ಯಂತ ಹೃದ್ಯವಾಗಿ ಕೃತಿಗಳಲ್ಲಿ ದಾಖಲಿಸಿದ್ದಾರೆ. ಅಲ್ಲದೇ ಗ್ರಾಮೀಣ ಪರಿಭಾಷೆಯ ಅರ್ಥವಂತಿಕೆಗಳನ್ನು ಅವರು ಹಿಂಜಿ ತೋರಿದ್ದಾರೆ. ಈ ನೆಲದ ಸಂಸ್ಕೃತಿ–ಅಭಿರುಚಿಗಳನ್ನು ಎತ್ತಿ ಹಿಡಿದಿದ್ದಾರೆ.

* **ಶ್ರೀ ಜಿ. ಎಸ್. ವಡಗಾಂವಿ[೧೭] :**

ನನಗೆ ಜನಪದ ಎಂದೊಡನೆ ನೆನಪಿಗೆ ಬರುವ ಮೊದಲ ಹೆಸರು ಶ್ರೀ ಸಿದ್ದು ದಿವಾಣರು.

* **ಸಂಗಮೇಶ ಕೋಟೆ[೧೮] :**

ಸಾಂಪ್ರದಾಯಿಕ ಆಚರಣೆಗಳು ಜಾನಪದೀಯ ಶಬ್ದಗಳ ಬಳಕೆ, ಹಬ್ಬ–ಹರಿದಿನಗಳ ಮಹತ್ವವನ್ನು ಅರಿಯದೇ ತೆರೆಮರೆಯಲ್ಲಿ ಸರಿಯುತ್ತಿರುವ ಇಂದಿನ ಜನಾಂಗದ ಪ್ರಜ್ಞೆಯನ್ನು ಎಚ್ಚರಿಸುವ ಕೆಲಸವನ್ನು ದಿವಾಣರು ಮಾಡುತ್ತಿದ್ದಾರೆ.

* **ಶಿವಾನಂದ ಪೂಜಾರ[೧೯] :**

ಗ್ರಾಮೀಣ ಸಂಸ್ಕೃತಿಯ ಮಣ್ಣಿನ ವಾಸನೆಯನ್ನು ಸವಿದು ಬೆಳೆದ ಸಿದ್ದು ದಿವಾಣರು ತಮ್ಮ ಕೃತಿಗಳ ಮೂಲಕ ಜಾನಪದ ಸಂಸ್ಕೃತಿಯ ಜೀವಾಳವನ್ನು ಪರಿಚಯಿಸುತ್ತಿದ್ದಾರೆ.

* **ಬಾಬುರಡ್ಡಿ ತುಂಗಳ[೨೦] :**

ನಮ್ಮ ಸಿದ್ದು ದಿವಾಣರು ಒಬ್ಬ ಸಾಹಿತಿ, ವಾಗ್ಮಿ ಎಲ್ಲಕ್ಕಿಂತ ಮಿಗಿಲಾಗಿ ಅವರೊಬ್ಬ ಜಾನಪದ ವಿದ್ವಾಂಸ ಮತ್ತು ಶಬ್ದಗಾರುಡಿಗರು.

* **ಶ್ರೀ ಕಂಠೀ ಹನುಮಂತರಾಯರು[೨೧] :**

ಸಿದ್ದು ದಿವಾಣರ ಶಬ್ದ – ಸಂಪತ್ತು ಅಕ್ಷಯವಾದ ಗಣಿ ಇದ್ದ ಹಾಗೇ. ಶ್ರೀಯುತರು ಜಾನಪದದ ಧೃವತಾರೆಯಾಗಿದ್ದಾರೆ.

೮) ‘ಸಂಘಟಕ – ಸಂಪನ್ಮೂಲ ವ್ಯಕ್ತಿ :

ಶ್ರೀ ಸಿದ್ದು ದಿವಾಣರು ತಮ್ಮ ಜೀವನದ ಪ್ರತಿಯೊಂದು ಕ್ಷಣವನ್ನು ವ್ಯರ್ಥಮಾಡದ ವ್ಯಕ್ತಿ. ಹುಟ್ಟಿನಿಂದ ಬದುಕಿನುದ್ದಕ್ಕೂ ಜಾನಪದವನ್ನೇ ಕಂಡುಂಡವರು. ಇವರೊಬ್ಬ ಜಾನಪದ ತಪಸ್ವಿ; ಜಂಗಮರು. ಅವರ ನಿರಂತರ ಜೀವನೋತ್ಸಾಹ ಹಿಡಿದ ಕೆಲಸವನ್ನು ಜೀಡದೇ ಸಾಧಿಸುವ ಸಾತ್ವಿಕ ಗುಣ ಶಿಸ್ತು, ನಿಸ್ವಾರ್ಥ ಮನೋಭಾವನೆ, ಅತಿಥಿ ಸತ್ಕಾರ, ಇವೆಲ್ಲಾ ಅವರ ಸಾಧನೆಯ ಸಫಲತೆಗೆ ಕಾರಣಗಳಾಗಿವೆ.

ಬರೀ ಜ್ಞಾನವಿದ್ದರೇ ಸಾಲದು. ತಂತ್ರಜ್ಞಾನವು ಇರಬೇಕೆಂಬುದು ಇಂದಿನ ಇರಾದೆ. ಶ್ರೀಯುತರು ೬೯ ವರ್ಷದ ವಯೋಮಾನದ ಸಹಜವಾದ ಆರಾಮಗಿರಿಯನ್ನು ಬಿಟ್ಟು ಲ್ಯಾಪಟಾಪ್‌ನ ಮೇಲೆ ಕೈಬೆರಳಿಟ್ಟು ಕನ್ನಡ ನುಡಿ ತಂತ್ರಾಂಶವನ್ನು ಗಟ್ಟಿ ಮಾಡಿಕೊಂಡವರು. ೨-೩ ದೊಡ್ಡ ದೊಡ್ಡ ಕಂಪನಿಗಳ ವಿಶಾಲ ಸ್ಕ್ರೀನಿನ ಮೊಬೈಲ್‌ಗಳ ಮೇಲೆ ಬೆರಳಾಡಿಸುತ್ತ 'ಫೇಸ್‌ಬುಕ್', 'ವಾಟ್ಸಪ್'ಗಳನ್ನು ಅರಿದು ಕುಡಿದವರು.[೨೨]

ಹೀಗೆ ವಿಭಿನ್ನ ವ್ಯಕ್ತಿತ್ವದ ಅವಿರತ ಪ್ರಯತ್ನಿಗಳಾದ ಸಿದ್ದು ದಿವಾಣರು ಸಂಘಟಕರಾಗಿ, ಸಂಪನ್ಮೂಲ ವ್ಯಕ್ತಿಗಳಾಗಿ, ವಿಶ್ರಾಂತಿ ಜೀವನದಲ್ಲೂ ತಮ್ಮ ಅನುಪಮ ಸೇವೆಯನ್ನು ಸಮಾಜಕ್ಕೆ ಧಾರೆಯೆರೆದಿದ್ದಾರೆ; ಈಗಲೂ ಎರೆಯುತ್ತಿದ್ದಾರೆ.

'ಸಂಘಟನೆಗಳ ಸಂಘಟಕರಾಗಿ' :

* ಅಂತರಾಷ್ಟ್ರೀಯ ಮಾನವಾಧಿಕಾರಿ ಸಂಘ (ಲಖನೌ)ದ ಬಾಗಲಕೋಟ ಜಿಲ್ಲಾ ಉಪಾಧ್ಯಕ್ಷರು ಮತ್ತು ಅಜೀವ ಸದಸ್ಯರು.
* ಅಧ್ಯಕ್ಷರು, ಬರಹಗಾರರ ವೇದಿಕೆ, ಮುಧೋಳ.
* ಪ್ರಧಾನ ಕಾರ್ಯದರ್ಶಿಗಳು, ಪಾರಿಜಾತ ಪ್ರತಿಷ್ಠಾನ, ಮುಧೋಳ.
* ಅಧ್ಯಕ್ಷರು, ಗುಳಬುಟ್ಟಿ ಜಾನಪದ ಪ್ರತಿಷ್ಠಾನ, ಮುಧೋಳ.
* ಅಧ್ಯಕ್ಷರು, ಬಾಗಲಕೋಟ ಜಿಲ್ಲಾ ಕ್ಷತ್ರೀಯ ಮರಾಠಾ ಮಹಾ ಒಕ್ಕೂಟ, ಬೆಂಗಳೂರು.
* ಉಪಾಧ್ಯಕ್ಷರು, ಕರ್ನಾಟಕ ಮರಾಠಾ ಸಮುದಾಯ.
* ೬೪ ಪುಸ್ತಕಗಳ ಸಂಪಾದಕ ಮಂಡಳಿ ಸದಸ್ಯರು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಬಾಗಲಕೋಟ.
* ಸದಸ್ಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

'ಸಂಪನ್ಮೂಲ ವ್ಯಕ್ತಿಗಳು :

* ಡಿ.ಪಿ.ಇ.ಪಿ. ಶಿಕ್ಷಣ ರಾಜ್ಯ ಮತ್ತು ಜಿಲ್ಲಾಮಟ್ಟದ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಣೆ.
* ಅಬ್ದುಲ್ ನಜೀರಸಾಬ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು. ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಣೆ.
* ಜನ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಣೆ.
* ಸಾಕ್ಷರತಾ – ಜಿಲ್ಲಾ ಮತ್ತು ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿ.
* ಎಸ್.ಡಿ.ಎಮ್.ಸಿ. ಜಿಲ್ಲಾ ಮತ್ತು ರಾಜ್ಯಮಟ್ಟದ ಸದಸ್ಯರ ತರಬೇತಿ ಸಂಪನ್ಮೂಲ ವ್ಯಕ್ತಿ.

* ಭಾರತ ಜನಗಣತಿ ಸಂಪನ್ಮೂಲ ವ್ಯಕ್ತಿ.
* ವಿಧಾನಸಭೆ ಮತ್ತು ಲೋಕಸಭೆ ಚುನಾವಣಾ ಸಿಬ್ಬಂಧಿಗಳ ತರಬೇತಿ ಮತ್ತು ಕಾರ್ಯ ನಿರ್ವಹಣಾ ಸಂಪನ್ಮೂಲ ವ್ಯಕ್ತಿಗಳು.
* ಚುನಾವಣಾ ಗುರುತಿನ ಚೀಟಿ – ಸಂಪನ್ಮೂಲ ವ್ಯಕ್ತಿ.
* ಸರ್ವ ಶಿಕ್ಷಣ ಅಭಿಯಾನ – ಸಂಪನ್ಮೂಲ ವ್ಯಕ್ತಿ.
* ಗ್ರಾಮೀಣ ಅಭಿವೃದ್ಧಿ ಕಿರಿಯ ಮತ್ತು ಸಹಾಯಕ ಇಂಜಿನೀಯರುಗಳಿಗೆ ತರಬೇತಿ ಸಂಪನ್ಮೂಲ ವ್ಯಕ್ತಿ.
* ಏಡ್ಸ್ ಜನಜಾಗೃತಿ – ಸಂಪನ್ಮೂಲ ವ್ಯಕ್ತಿ.
* ಗ್ರಾಮೀಣ ವಿಕಾಸ ಬ್ಯಾಂಕ ಗ್ರಾಹಕರ ತರಬೇತಿ ಸಂಪನ್ಮೂಲ ವ್ಯಕ್ತಿ.
* ಡಿ.ಈಡಿ ಮತ್ತು ಬಿ.ಈಡಿ ತರಬೇತಿ ಗೌರವ ಸಂಪನ್ಮೂಲ ವ್ಯಕ್ತಿ.
* ಡೈಟ್ – ಇಳಕಲ್ಲ ಸಲಹಾ ಮಂಡಳಿ ಸದಸ್ಯರು.

ಹೀಗೆ ತಮ್ಮ ಪಾರದರ್ಶಕ ವ್ಯಕ್ತಿತ್ವದಿಂದ ಸಾಮಾಜಿಕ ಕಾರ್ಯಗಳಿಗಾಗಿ ಪಾದರಸದಂತೆ ಸದಾ ಲವಲವಿಕೆಯ ಗುಣವುಳ್ಳ ಸಿದ್ದು ದಿವಾಣರ ಬದುಕಿನ ಪುಟ–ಪುಟದಲ್ಲಿಯೂ ಚೈತನ್ಯದ ಹೊಸತನ, ಹೊಸ ದೃಷ್ಠಿಕೋನ, ಅಚ್ಚ ಮಾನವೀಯ ಗುಣ ಎದ್ದು ಕಾಣುತ್ತದೆ.

೯) ವಿಶ್ರಾಂತಿ ಜೀವನ :

ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ – ಬದುಕಿಗೆ ಅಡಿಇಟ್ಟ ದಿವಾಣರು, ಮುಖ್ಯೋಪಾಧ್ಯಾಯರಾಗಿ, ಬಿ.ಆರ್.ಸಿ.ಯ ಸಂಪನ್ಮೂಲ ವ್ಯಕ್ತಿಗಳಾಗಿ, ಪ್ರಾಮಾಣಿಕ ಸೇವೆಗೈದು ೨೦೦೪ ರಲ್ಲಿ ನಿವೃತ್ತಿಯಾಗುತ್ತಾರೆ. ಸುಧೀರ್ಘ ೩೮ ವರ್ಷಗಳ ಇವರ ಸೇವೆ ಈ ಸಮಾಜಕ್ಕೆ ಸಂದಿದ್ದು ವರವೆಂದೇ ಭಾವಿಸಬಹುದು.

ಸ್ನೇಹಶೀಲ, ಕರುಣಾ ಹೃದಯಿಗಳಾದ ಶ್ರೀಯುತರು ಮನೆಗೆ ಬಂದವರನ್ನು ಊಟ ಮಾಡಿಸದೇ ಕಳುಹಿಸಿದ ಉದಾಹರಣೆಗಳೇ ಇಲ್ಲ. ಅತಿಥಿ ದೇವೋಭವ ಮನೋಧರ್ಮದವರು. ಇದು ನನ್ನ ತಂದೆ–ತಾಯಿ ನನಗೆ ಉಸುರಿದ 'ಧರ್ಮ ಬೀಜವೆಂದು' ನಯವಾಗಿಯೇ ಹೇಳುವ ಇವರು ಕೊಡುಗೈ ದಾನಿಗಳು. ವರ್ಷಕ್ಕೆ ೨ ಬಾರಿ ತೀರ್ಥ ಯಾತ್ರೆಯನ್ನು ಮಾಡುವ ಪಕ್ಕಾ ಆಸ್ತಿಕರು. ಸದಾ ಹಸನ್ಮುಖಿಯಾಗಿರುವ ಶ್ರೀಯುತರ ಹೃದಯ ತೆರೆದಿಟ್ಟ ಪುಸ್ತಕ. ಮುಚ್ಚು ಮರೆಯಿಲ್ಲ. ಸ್ವಾರ್ಥ–ದ್ವೇಷ–ಅಸೂಯೆಗಳಿಗೆ ಅಲ್ಲಿ ಆಸ್ಪದವೇ ಇಲ್ಲ. ಬಡವ–ಬಲ್ಲಿದ, ಬಲಿಷ್ಠ–ದುರ್ಬಲ, ಮೇಲು–ಕೀಳು ಎಂಬ ಭೇದಭಾವಕ್ಕೆ ಎಡೆಯೇ ಇಲ್ಲ. Clothes Make Man ಎಂಬ ಆಂಗ್ಲ ಸೂಕ್ತಿಯಂತೆ ಸಿದ್ದು ದಿವಾಣರು ಉಡುಗೆ–ತೊಡುಗೆಯಲ್ಲಿ ತೀರಾ ಅಚ್ಚುಕಟ್ಟು; ಶಿಸ್ತು. ಸಿಂಹ ಮುಪ್ಪಾದರೂ ಅದರ ಶೌರ್ಯ ಮುಪ್ಪಾಗದಿರುವಂತೆ ಇಂದಿಗೂ ತಮ್ಮ ಸ್ಪಷ್ಟವಾದ ನೀಲುವು–ನಿಖರವಾದ ಧೋರಣೆಯಿಂದ ಹಿಂದೆ ಸರಿಯುವವರಲ್ಲ.

'ಮುದುಕನಾದರೂ ನನ್ನ ತಾಖತ್ತು
ಇವರು ಹೇಳುವ ಹಾಗೇ ಹೋಗಿಲ್ಲ ಸತ್ತು
ಸೇವೆಗೈಯುವ ಶಕ್ತಿ ಇಂದಿಗೂ ಉಂಟು
ಕೈಯೊಳಗೆ ನಾನು ಊರುವುದಿಲ್ಲ ದಂಟು'[೨೩]

ಎಂಬಂತೆ ದಿವಾಣರು ಇಳಿ ವಯಸ್ಸಿನಲ್ಲೂ ಯುವಕರಂತೆ ಉಕ್ಕಿನ ದೇಹವನ್ನು ಹೊಂದಿದ ಯೋಗಪ್ರೀಯರು. ಶ್ರೀಯುತರು ಮಡದಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹೀಗೆ ತುಂಬು ಸಂಸಾರದೊಡನೆ ಮುಧೋಳದ ಜಯನಗರ ಬಡಾವಣೆಯ ೧೮೮೧ ಭವಾನಿ ನಿಲಯದ ಭವ್ಯ ಬಂಗಲೆಯಲ್ಲಿ ಒಟ್ಟಾಗಿ ಬದುಕುತ್ತಿರುವುದು, ಜಾನಪದ ಅವಿಭಕ್ತ ಕುಟುಂಬಕ್ಕೆ ಸಾಕ್ಷಿಯಾಗಿದೆ; ಮಾದರಿಯಾಗಿದೆ. ನಿವೃತ್ತಿ ನಂತರವೂ ಸದಾ ಕ್ರಿಯಾಶೀಲ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಸಿದ್ದು ದಿವಾಣರು ನಾಡಿನ ಜನಪದ ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರದ ರಾಯಭಾರಿಯಾಗಿದ್ದಾರೆ.

❖❖❖❖❖

ಅಡಿಟಿಪ್ಪಣಿಗಳು :

೧. ಡಾ. ಎಚ್. ತಿಪ್ಪೇರುದ್ರ ಸ್ವಾಮಿ. ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಪು.ಸಂ. ೭೩
೧ಎ. ಕರ್ನಾಟಕ ಸರ್ಕಾರದ ಅಧಿಕೃತ ಜಾಲತಾಣದ ವಿವರ.
೨. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ'. ಪು.ಸಂ. ೯೬
೩. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ'. ಪು.ಸಂ. ೯೬
೪. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ'. ಪು.ಸಂ. ೯೭
೫. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ'. ಪು.ಸಂ. ೯೭
೫ಎ. ಡಾ. ಎಸ್. ಎಸ್. ಕೋತಿನ : ಅಸ್ತಿತ್ವ ಕವನ ಸಂಕಲನ : ಪು.ಸಂ. ೬೫
೬. ಸಿದ್ದು ದಿವಾಣ : 'ನೆಂಪು-ಕಂಪು' ಬೆನ್ನುಡಿಯಿಂದ
೭. ಸಿದ್ದು ದಿವಾಣ : 'ನೆಂಪು-ಕಂಪು' ಪು.ಸಂ. XI
೮. ಸಿದ್ದು ದಿವಾಣ : 'ನೆಂಪು-ಕಂಪು' ಪು.ಸಂ. XI
೯. ಸಿದ್ದು ದಿವಾಣ : 'ನೆಂಪು-ಕಂಪು' ಪು.ಸಂ. XIII
೧೦. ಸಿದ್ದು ದಿವಾಣ : 'ಸಿದ್ಧಹನಿ' ಪು.ಸಂ. X
೧೧. ಸಿದ್ದು ದಿವಾಣ : 'ಶಬ್ದಸಿರಿ' ಪು.ಸಂ. XVII
೧೨. ಸಿದ್ದು ದಿವಾಣ : 'ಶಬ್ದಸಿರಿ' ಪು.ಸಂ. XVII
೧೩. ಸಿದ್ದು ದಿವಾಣ : 'ಜಗದಗಲ ಪ್ರೀತಿ' ಪು.ಸಂ. XIV
೧೪. ಸಿದ್ದು ದಿವಾಣ : 'ಶಬ್ದಸಿರಿ' ಪು.ಸಂ. XIV
೧೫. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' ಪು.ಸಂ. ೧೧೯
೧೬. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' ಪು.ಸಂ. VIII
೧೭. ಸಿದ್ದು ದಿವಾಣ : 'ನೆಂಪು-ಕಂಪು' ಪು.ಸಂ. XIII
೧೮. ಸಿದ್ದು ದಿವಾಣ : 'ನೆಂಪು-ಕಂಪು' ಪು.ಸಂ. XII
೧೯. ಸಿದ್ದು ದಿವಾಣ : 'ನೆಂಪು-ಕಂಪು' ಪು.ಸಂ. XII
೨೦. ಸಿದ್ದು ದಿವಾಣ : 'ನೆಂಪು-ಕಂಪು' ಪು.ಸಂ. XI
೨೧. ಸಿದ್ದು ದಿವಾಣ : 'ನೆಂಪು-ಕಂಪು' ಪು.ಸಂ. XI
೨೨. ಸಿದ್ದು ದಿವಾಣ : 'ಸಿದ್ಧಹನಿ' ಬೆನ್ನುಡಿಯಿಂದ
೨೩. ಶ್ರೀಪಾದ ಶೆಟ್ಟಿ : ದಿನಕರ ದೇಸಾಯಿ ಬದುಕು ಬರಹ. ಪು.ಸಂ. ೫೪

ಅಧ್ಯಾಯ : ೩

ಸಿದ್ದು ದಿವಾಣರ ಜಾನಪದ ಸಂಶೋಧನೆ ಮತ್ತು ವಿಮರ್ಶೆ

ಅಧ್ಯಾಯ – ೩
ಸಿದ್ದು ದಿವಾಣರ ಜಾನಪದ ಸಂಶೋಧನೆ ಮತ್ತು ವಿಮರ್ಶೆ

೩.೧ ಸಂಶೋಧನೆ ಹಾಗೂ ವಿಮರ್ಶೆಯ ಸ್ವರೂಪ :

ಜಾನಪದ ಕ್ಷೇತ್ರದ ಆಚಾರ್ಯ ಪುರುಷ 'ಸ್ಮಿತ್ ಥಾಮಸನ್' ಅವರು ಜಾನಪದವನ್ನು ಕುರಿತು '*The common idea present in all folklore is that of tradition something handed down from one person to another and preserved either by memory or practice wather then written record*'[೧] ಎಂದು ವ್ಯಾಖ್ಯಾನಿಸುತ್ತಾನೆ. ಅಂದರೆ –

ಎಲ್ಲಾ ಜಾನಪದದಲ್ಲಿ ಸಾಮಾನ್ಯವಾಗಿರುವ ವಿಚಾರವೇನೆಂದರೆ 'ಪರಂಪರೆ'. ಇದರಲ್ಲಿ ಆಯಾ ಜನಾಂಗಗಳ ಕಲೆ, ಸಾಹಿತ್ಯ, ನಂಬಿಕೆ, ಆಚರಣೆ, ಒಗಟು, ಗಾದೆ ಮುಂತಾದ ವಿಷಯಗಳು ಅಡಕವಾಗಿದ್ದು ವ್ಯಕ್ತಿಯಿಂದ ವ್ಯಕ್ತಿಗೆ ಸ್ಮರಣೆಯ ಮೂಲಕ ಅಥವಾ ರೂಢಿಯ ಮೂಲಕ ಸಾಗಿ ಬರುತ್ತದೆ. ಇದು ಲಿಖಿತ ಮಾಧ್ಯಮದಲ್ಲಿ ದಾಖಲುಗೊಳ್ಳುವುದಿಲ್ಲ ಎಂಬ ಅಂಶ ಗಮನಾರ್ಹವಾಗಿದೆ.

ಜನಪದ ಸಾಹಿತ್ಯ ಎಂಬುದೇ ಒಂದು ನಾಡಿನ ಶಕ್ತಿ. ಬದುಕಿನ ಪ್ರತಿಬಿಂಬ, ಸಂಸ್ಕೃತಿಯು ವಾಹಿನಿ, ತಲೆವಾರಿನಿಂದ ತಲೆವಾರಿಗೆ ಮೌಖಿಕವಾಗಿ ಸಾಗಿ ಬಂದಿರುವಂತದ್ದು. ಅದು ಹುಟ್ಟಿದ ಸಮುದಾಯ ಚಿಂತನೆ, ಅನುಭವ, ಕಲ್ಪನೆ ಮನೋಧರ್ಮಗಳ ಸಾರ; ಜನಪದರ ಬೌದ್ಧಿಕ ವಿಚಾರಗಳ ಮಡು. ಈ ಎಲ್ಲ ಮಹತ್ವದ ಲಕ್ಷಣಗಳನ್ನು ಜನಪದ ಸಾಹಿತ್ಯ ತುಂಬಿಕೊಂಡಿದೆ.

ಜಗತ್ತಿನ ಮಟ್ಟದಲ್ಲಿ ಜಾನಪದ ಸಂಶೋಧನೆ ಮತ್ತು ಸಂಗ್ರಹದ ಅಧ್ಯಯನದಲ್ಲಿ ೧೯ನೇ ಶತಮಾನದ ಅತ್ಯಂತ ಮಹತ್ವದ ಕಾಲ. ಜಾನಪದ ಅಧ್ಯಯನ ಖಚಿತವಾದ ರೂಪರೇಷೆಗಳನ್ನು ಪಡೆದುಕೊಂಡ ಕಾಲವಿದು. ಡಬ್ಲ್ಯೂ. ಜೆ. ಥಾಮ್ಸ್ ಇಂಗ್ಲೇಂಡಿನ ಪ್ರಸಿದ್ಧ ವಿದ್ವಾಂಸ. 'ದಿ ಅಥೇನಿಯಂ' ಎಂಬ ಪತ್ರಿಕೆಗೆ 'ಆಂಬ್ರೋಸ್ ಮೆರ್ತಾನ್'

ಎಂಬ ಬದಲಿ ಹೆಸರಿನಲ್ಲಿ ಪತ್ರ ಬರೆದು Folk-lore (ಫೋಕ್‌ಲೋರ್) ಪದ ಪ್ರಯೋಗಿಸಿ ಜನಪದ ಶಾಸ್ತ್ರಕ್ಕೆ ಒಂದು ಸುಂದರ ಹೆಸರನ್ನು ಬಳಕೆಗೆ ತಂದನು.[೨]

ಹೀಗೆ ಜನಪದ ಸಾಹಿತ್ಯವು ಅನಕ್ಷರಸ್ಥರಿಂದಲೇ ರಚನೆಯಾಗಿ, ಕಾವ್ಯ-ನಾಟಕ, ಕಥೆ, ಗಾದೆ, ಒಗಟು, ಲಾವಣಿ ಹೀಗೆ ವಿಭಿನ್ನ ನೆಲೆಯಲ್ಲಿ ಈ ನೆಲದ ಸತ್ವವನ್ನು-ಸತ್ಯವನ್ನು ಹದಮಾಡಿಕೊಂಡು ದಷ್ಟ-ಪುಷ್ಟವಾಗಿ ಬೆಳೆದು ಬಂದಿದೆ. ಲಿಖಿತವಲ್ಲದ ಬಾಯಿ ಮಾತಿನ ಈ ಸಾಹಿತ್ಯವನ್ನು ಹುಡುಕಾಡಿ, ಬೇಡಿ, ಹೆಕ್ಕಿ ಕೃತಿಯ ರೂಪದಲ್ಲಿ ಪ್ರಕಟಿಸಿ ಅದರ ಬಗ್ಗೆ ಪರಾಮರ್ಶಿಸುವ ಕೆಲಸ ಬಹಳ ಶ್ರಮದಾಯಕವಾಗಿದೆ.

ಈ ನಿಟ್ಟಿನಲ್ಲಿ ಸಿದ್ದು ದಿವಾಣರು ಕಾರ್ಯವು ತುಂಬಾ ಶ್ಲಾಘನೀಯವಾದುದು. ಶ್ರೀಯುತರು ಜನಪದಕ್ಕೆ ಸಂಬಂಧಿಸಿದ ಅನೇಕ ಸಂಶೋಧನಾತ್ಮಕ ಮತ್ತು ವಿಮರ್ಶಾತ್ಮಕ ಮೌಲಿಕ ಬರಹಗಳನ್ನು ಕನ್ನಡ ಜಾನಪದ ಸಾರಸ್ವತ ಪ್ರಪಂಚಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಕವಿಯಾಗಿ ನಾಡಿನ ಜನತೆ ಇವರನ್ನು ಗುರುತಿಸಿದರೂ ಕೂಡ ಸಂಶೋಧನ ಮತ್ತು ವಿಮರ್ಶೆಯಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದಂತವರು. ನಮ್ಮ ನಿತ್ಯ ಜೀವನದಿಂದ ಜಾರಿ ಹೋದ ನೂರಾರು ದೇಶಿ ಶಬ್ದ ಸಿರಿಸಂಪತ್ತು, ಕುಂಬಾರರು, ಸುಡುಗಾಡ ಸಿದ್ಧರು, ಗ್ರಾಮೀಣ ಆಟ-ಪಾಠಗಳು, ಗ್ರಾಮೀಣ ವೈದ್ಯ ಪದ್ಧತಿ, ಗ್ರಾಮೀಣ ಹಬ್ಬಗಳು ಹೀಗೆ ಹಲವಾರು ವಿಭಿನ್ನ ಸಂಶೋಧನಾತ್ಮಕ ಮತ್ತು ವಿಮರ್ಶಾತ್ಮಕ ಲೇಖನಗಳನ್ನು ನೋಡಿದಾಗ ವಿಷಯದ ಆಳಕ್ಕಿಳಿದು ಸತ್ಯವನ್ನು ಸಂಶೋಧಿಸುವ – ಶೋಧಿಸುವ ವಿಶ್ಲೇಷಿಸುವ, ಗ್ರಹಿಸುವ, ಮೂಲ ಕವಿಯ ಆಶಯಕ್ಕೆ ಧಕ್ಕೆಯಾಗಿಸದೇ ಸ್ಪಷ್ಟವಾಗಿ ಬೆಲೆಯನ್ನು-ಮೌಲ್ಯವನ್ನು ನಿರ್ಣಯಿಸುವ ಇವರ ಪ್ರಾಮಾಣಿಕ ಶಕ್ತಿಯನ್ನು ಮೆಚ್ಚಲೆಬೇಕಾಗುತ್ತದೆ.

೩.೨ 'ಸಂಶೋಧನೆ ಹಾಗೂ ವಿಮರ್ಶಾ ಬರಹಗಳು' :

ಸಿದ್ದು ದಿವಾಣರ ಒಟ್ಟು ಸಂಶೋಧನೆ ಮತ್ತು ವಿಮರ್ಶಾ ಬರಹಗಳೆಂದರೇ –

೧) ಜೀವನದಿಂದ ಜಾರಿ ಹೋದ ದೇಶಿ ಶಬ್ದ-ಸಿರಿ ಸಂಪತ್ತು
೨) ಗ್ರಾಮೀಣ ಹಬ್ಬಗಳ ಅಂತರಂಗ
೩) ಮನಿ ಮಾತ ಮರೀಬ್ಯಾಡ
೪) ಕುಂಬಾರರು
೫) ಹೊಟ್ಟೆ ನೆತ್ತಿ ಹಸಿವಿನ ಮೂಲ ಗ್ರಾಮೀಣ ಆಟಗಳು
೬) ಸುಡುಗಾಡ ಸಿದ್ಧರತ್ತ ಪರಿವರ್ತನೆಯ ಗಾಳಿ
೭) ಲೋಕ ಪ್ರಸಿದ್ಧ ಲೋಕಾಪುರದ ಕಲ್ಲು
೮) ಇತಿಹಾಸದ ಹಾಸಿಗೆಯಲ್ಲಿ ಕೃಷ್ಣಾ ತೀರ ಸಂಸ್ಕೃತಿ

೯) ಹಿರಿಯ ಜಾನಪದ ತಜ್ಞ; ಜಿ. ಬಿ. ಖಾಡೆ

೧೦) ಗ್ರಾಮೀಣ ಆಟಗಳು–ಪಾಠಗಳು

೧೧) ಮಕರ ಸಂಕ್ರಮಣ

೧೨) ಕಾಡು ನಾಡಿನ ಐಸಿರಿ

೧೩) ಜನಮನದ ಕಲಾವಿದ; ಶ್ರೀ ಕೃಷ್ಣಾ ದೇಶಪಾಂಡೆ

೧೪) ನಾವು ನಮ್ಮ ಸ್ವಾತಂತ್ರ್ಯ

೧೫) ನಂಬಿಗಸ್ಥ ಭಂಟ, ಮುಧೋಳದ ಬೇಟೆ ನಾಯಿ

೧) ಜೀವನದಿಂದ ಜಾರಿ ಹೋದ ದೇಶಿ ಶಬ್ದ ಸಿರಿ ಸಂಪತ್ತು :

ಪರಿವರ್ತನೆ ಜಗದ ನಿಯಮ. ಕಾಲವು ನಿರಂತರವಾಗಿ, ಸಮರ್ಪಕವಾದ ಮತ್ತು ಸಕಾಲಿಕವಾದ, ಸಕಾರಾತ್ಮಕವಾದ ಹಿನ್ನೆಲೆಯಲ್ಲಿ ಜನ ಮತ್ತು ಜೀವನದ ಜೊತೆಗೆ ಸಂಸ್ಕೃತಿ, ಸಂಪ್ರದಾಯಗಳೊಡನೆ ತಂತಾನೆ ಹೊಂದಿಕೊಂಡು ವರ್ತಿಸುತ್ತದೆ. ಇಂತಹ ಪರಿವರ್ತನೆಯ ವರ್ತನೆಯಿಂದ ನಮ್ಮ ಜಾನಪದ ಕನ್ನಡ ಶಬ್ದ ಸಂಪತ್ತು ಉಚ್ಚಾರದ ಉಸಿರನ್ನೇ ಕಳೆದುಕೊಂಡು ನಿರ್ಜೀವ, ಅನಾಥ, ಅನಾಮಧೇಯವಾದ ಪರಿಯನ್ನು ಲೇಖಕರು ಎತ್ತಿ ತೋರಿಸುತ್ತ ಕಳವಳವನ್ನು ವ್ಯಕ್ತಪಡಿಸುತ್ತಾರೆ.

ಗ್ರಾಮೀಣ ಜನಪದರಲ್ಲಿ ಆಚರಣೆಯಲ್ಲಿದ್ದ ಕಿಸಬಾಯಿ, ಅಗದಿ, ದಗದ, ಢಕಲಾಸ್, ಸೌಡ, ಗುದುಮುರುಗಿ, ವಜ್ಜೆ, ಜಗ್ಗ, ಸಟ್ನ ಹೀಗೆ ಹಲವಾರು ಅಸಂಖ್ಯಾತ ಪದಗಳನ್ನು ಇಂದಿನ ಯುವ ಪೀಳಿಗೆ ಅರ್ಥ ಮಾಡಿಕೊಳ್ಳಲು ಹೇಗೆ ಸಾಧ್ಯ? ಎಂದು ಖಾರವಾಗಿ ಪ್ರಶ್ನಿಸುತ್ತಾರೆ. ಇದಕ್ಕೆಲ್ಲ ನಮ್ಮ ಮನಸ್ಥಿತಿಯೇ ಕಾರಣವೆಂದು, ಜಾನಪದವೆಂದರೇ ಕೀಳು ಅಸಹ್ಯ, ಅನಾಗರಿಕತೆ ಎಂಬ ಹುಚ್ಚು ಭ್ರಮೆಯಲ್ಲಿರುವವರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ.

ಗ್ರಾಮೀಣ ಭಾಗದಲ್ಲಿ ಹಿಂದೆ ಪ್ರತಿಯೊಬ್ಬರು ಮನೆಯಲ್ಲಿ ಮುಖ್ಯ ಆಹಾರವಾಗಿದ್ದ ನುಚ್ಚ, ಅಂಬ್ಲಿ, ಬಾಣ, ಹುಳಿ ನುಚ್ಚ, ಸಪ್ಪಾನುಚ್ಚ ಇಂದು ಮೂಲವಾಗಿಯೇ ಕಣ್ಮರೆಯಾಗಿರುವುದಕ್ಕೆ ಖೇದ ವ್ಯಕ್ತಪಡಿಸುತ್ತಾರೆ. ಗ್ರಾಮೀಣ ಜನಪದ ಕೃಷಿಗೆ ಸಂಬಂಧಿಸಿದ 'ಅಂಟ', ಚಪ್ರ, ಗಳೆ, ಕೂಟಿ, ಮುಗದಾನ, ಕೂರಿಗೆ, ಕವಣಿ, ಗುದ್ಲಿ, ಸನಕಿ, ಬಡಮನಿ, ವಳ್ಳ, ಒನಕಿ, ಬೀಸುಕಲ್ಲ, ಮಟ್ಟಿ, ಚಿಮಣಿ ಇತ್ಯಾದಿ ಶಬ್ದಗಳ ಜೊತೆಗೆ ಹೆಣ್ಣು ಮಕ್ಕಳ ಶೃಂಗಾರದ ವಸ್ತುಗಳಾದ ಜುಮಕಿ, ತೋಡೆ, ಬಾವಲಿ, ಲೋಲಾಕು, ಪೈಜನ್, ಎಕ್ಸಾರ್, ಬೋರಮಾಳ, ಟಿಕ್ಕೆ, ಕಡಗ, ಉಡದಾರ, ಪಿಲ್ಲೆ ಹೀಗೆ ಅಂದಿನ ಅನೇಕ ಜನಪದ ದೇಶಿ ಪದಗಳು ಇಂದು ಮಾಯವಾಗಿರುವ ಹಿನ್ನೆಲೆಯಲ್ಲಿ ಮಾಧ್ಯಮಗಳು, ವೃತ್ತ ಪತ್ರಿಕೆಗಳು, ಸಾಹಿತಿಗಳು, ವಿಶ್ವವಿದ್ಯಾಲಯಗಳು ಇವುಗಳನ್ನೆಲ್ಲ ನೆನಪಿಸುವ ಉಳಿಸುವ ಮತ್ತು ಮುಂದಿನ ಜನಾಂಗಕ್ಕೆ ವರ್ಗಾಯಿಸುವ ಗುರುತರ ಜವಾಬ್ದಾರಿಯನ್ನು ನೆನಪಿಸುತ್ತಾರೆ.

೨) ಗ್ರಾಮೀಣ ಹಬ್ಬಗಳ ಅಂತರಂಗ :

ಬಸವಶ್ರೀ ಸ್ಮರಣ ಸಂಚಿಕೆಯಲ್ಲಿ ಪ್ರಕಟಗೊಂಡ ಈ ಲೇಖನವು[೩] ಜಾನಪದ ಆಚರಣೆಗಳ ಮೂಲ ಧ್ಯೇಯವನ್ನು ತಿಳಿಸುತ್ತದೆ.

ಆಚರಣೆಗಳು ಮಾನವನ ನಡುವಳಿಕೆಯ ಮೊತ್ತ ಮತ್ತು ಮೌಲ್ಯಗಳಾಗಿವೆ. ಕಾಲದ ಪರೀಧಿಯಲ್ಲಿ ನಿರ್ಧಿಷ್ಟತೆಯ ಆಚಾರ-ವಿಚಾರ, ವೈಜ್ಞಾನಿಕ ಪರಿಕಲ್ಪನೆಯನ್ನು ಪಡೆದುಕೊಂಡಿರುವ ವಾರ, ತಿಥಿ, ನಕ್ಷತ್ರ, ಮಾಸ, ಋತುಗಳು ಒಂದೊಂದು ವಿಶಿಷ್ಟ-ವೈಶಿಷ್ಟ್ಯದಿಂದ ಕೂಡಿವೆ ಎಂಬುದನ್ನು ಲೇಖಕರು ಚರ್ಚಿಸಿದ್ದಾರೆ.

ನಮ್ಮ ಹಬ್ಬಗಳು ೨೭ ನಕ್ಷತ್ರಗಳ ಮೂಲಕ ಪ್ರವೇಶ ಮಾಡುವ ಘಳಿಗೆಯನ್ನು ಅನುಸರಿಸಿ ಉತ್ಪತ್ತಿಯಾಗಿವೆ ಎಂಬುದನ್ನು ಉದಾಹರಣೆಗಳ ಮೂಲಕ ಓದುಗರಿಗೆ ಬಿಡಿಸಿ ತೋರಿಸಿದ್ದಾರೆ. ಮಣ್ಣು ಪೂಜೆ, ನೀರು ಪೂಜೆ, ಮರ-ಗಿಡ ಪೂಜೆ, ಪ್ರಾಣಿ-ಪಕ್ಷಿಗಳ ಪೂಜೆ, ಸೂರ್ಯ-ಚಂದ್ರ, ದಿಕ್ಕುಗಳ ಪೂಜೆಯು ನಮ್ಮ ಸಂಸ್ಕೃತಿಯಲ್ಲಿ ಯಾವ-ಯಾವ ಕಾರಣಗಳಿಂದ ಮೂಡಿ ಬಂದವು ಎಂಬುದನ್ನು ಕೂಡ ವೈಜ್ಞಾನಿಕ ತಳಹದಿಯ ಮೇಲೆ ಚರ್ಚಿಸುತ್ತ ವಿಶ್ಲೇಷಿಸುವ ಪರಿ ನಿಜಕ್ಕೂ ಪ್ರಶಂಸಾರ್ಹ.

೩) 'ಮನಿ ಮಾತ ಮರೀಬ್ಯಾಡ' :

ಬಾಗಲಕೋಟ ಜಿಲ್ಲಾ ೭ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಿದ ಉಪನ್ಯಾಸ ಲೇಖನವಿದು.[೪] ಆಧುನಿಕತೆಯ ಭರಾಟೆಯಲ್ಲಿ ದೇಶಿಯ ಪದ ಸಂಪತ್ತು ಯಾವ ಪರಿಯಾಗಿ ಸೋತು ಸೊರಗಿದೆ ಎಂಬುದನ್ನು ಅತೀ ವಿಷಾದದಿಂದ ಲೇಖಕರು ತೋರಿಸಿಕೊಡುತ್ತ ಅವುಗಳನ್ನು ಉಳಿಸಲು ಬೆಳೆಸಲು ಕರೆ ನೀಡಿದ್ದಾರೆ.

ದ್ರಾವಿಡ ಭಾಷೆಗಳ ನಿಕಟ ಸಂಬಂಧಿಯಾದ ಕನ್ನಡಕ್ಕೆ ಇಂಗ್ಲೀಷ ಸಂಪರ್ಕ ಹೆಚ್ಚಾಗಿ ಇದು ಜೀವನ ಶೈಲಿ, ಕೃಷಿ ಚಟುವಟಿಕೆ, ದೈನಂದಿನ ಉಡುಗೆ-ತೊಡುಗೆ, ಆಹಾರ ಪದ್ಧತಿಗಳನ್ನೆಲ್ಲ ಪರಕೀಯ ಸಂಸ್ಕೃತಿಯ ಆಚರಣೆಗಳು ನುಂಗಿ ಹಾಕಿ ಗ್ರಾಮೀಣ ಮನೆ ಮಾತು ಸಂಪ್ರದಾಯ ಆಚರಣೆಗಳು ನಶಿಸುತ್ತಿರುವುದನ್ನು ಸೋದಾಹರಣವಾಗಿ ವಿವರಿಸುತ್ತ ಬೇಸರ ವ್ಯಕ್ತಪಡಿಸಿದ್ದಾರೆ.

೪) ಕುಂಬಾರರು :

ಕೂಡಲ ಸಂಗಮದಲ್ಲಿ ರಾಜ್ಯಮಟ್ಟದ ಕುಂಬಾರರ ಸಮ್ಮೇಳನ ಹಾಗೂ ಸರ್ವಜ್ಞ ಬ್ಯಾಂಕ ಉದ್ಘಾಟನಾ ಸಮಾರಂಭ ನಡೆದ ಸಂದರ್ಭದಲ್ಲಿ ಬರೆದ ಆಶಯ ಲೇಖನವಿದು.[೫] ಕುಂಬಾರಿಕೆ ಎಂದರೆ ಕೇವಲ ಗಡಿಗೆ-ಮಡಿಕೆ ಮಾಡುವುದಷ್ಟೇ ಅಲ್ಲ ಮಾನವ ಜನಾಂಗಕ್ಕೆ ಸಂಸ್ಕಾರದ ನೆಲೆ ನೀಡಿದ ಕೀರ್ತಿ ಇವರದ್ದು ಎಂಬುದನ್ನು ಪೌರಾಣಿಕ, ಐತಿಹಾಸಿಕ, ನೆಲೆಯಲ್ಲಿ ಚರ್ಚಿಸಿ ಕುಂಬಾರ ಜನಾಂಗವು ಸಾಂಸ್ಕೃತಿಕ ರಾಯಭಾರಿಗಳೆಂದು ಅಭಿಪ್ರಾಯ ಪಟ್ಟಿದ್ದಾರೆ.

ಕುಂಬಾರರು ಚಕ್ರಗಳು ತಿಗರಿಗಳ ಅನ್ವೇಷಣೆಯೇ ಇಂದಿನ ಔದ್ಯೋಗಿಕ ಯುಗಕ್ಕೆ ನಾಂದಿಯಾದ ಈ ಜನಾಂಗದ ಅಸ್ತಿತ್ವವನ್ನು ಮಹೆಂಜೋದಾರೋ, ನೈಲನದಿ ಸಂಸ್ಕೃತಿಯವರೆಗೆ ಕರೆದೊಯ್ದಿದ್ದಾರೆ.

೫) ಹೊಟ್ಟೆ-ನೆತ್ತಿಯ ಹಸಿವಿನ ಮೂಲ ಗ್ರಾಮೀಣ ಆಟಗಳು :

ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ ದಿನಾಂಕ : ೨೧-೧೨-೨೦೦೩ ರಂದು ಹಾಗೂ ಜೀವಕ ವಿಕಾಸ ಶೈಕ್ಷಣಿಕ ಮಾಸ ಪತ್ರಿಕೆಯಲ್ಲಿ ಜನೇವರಿ ೨೦೦೪ ರಂದು ಪ್ರಕಟಗೊಂಡ ಲೇಖನವಿದು.[೬]

ಕಣ್ಮೆಚ್ಚಿಗೆ, ಅಂಡ್ಯಾಳ, ಮನಿಪತ್ತಾ, ಚಿಪ್ಪ, ಸಕ್ಕಾಸರಿಗೆ, ಬಳಚೂರ, ವಟಾ, ಗುಬ್ಬಿಮನಿ, ಗೊಂಬಿಮದುವಿ, ಕುಂಟಾಟ, ಚಿಕ್ಕಮನಿ, ಮುಟ್ಟಾಟ, ದುಪ್ಪಾ-ದುಪ್ಪಿ, ಕಡ್ಡಿ ಆಟ ಹೀಗೆ ಗ್ರಾಮೀಣರ ಆಟಗಳ ಮಹತ್ವವನ್ನು ಹಾಗೂ ಇಂದಿನ ಗಣಿತ ವಿಷಯದ ಮೂಲ ಈ ಆಟಗಳಲ್ಲಿಯೇ ಅಡಗಿದೆ ಎಂಬುದನ್ನು ಕೆಲವು ನಿದರ್ಶನಗಳ ಮೂಲಕ ಒರೆಗೆ ಹಚ್ಚಿ ತೋರಿಸಿಕೊಟ್ಟಿದ್ದಾರೆ.

ಇಂದಿನ ಕ್ರಿಕೆಟ್, ವ್ಹಾಲಿಬಾಲ್, ಹಾಕಿ ಮುಂತಾದ ಪಾಶ್ಚಿಮಾತ್ಯ ಕ್ರೀಡೆಗಳಿಂದ ದೇಶಿ ಕ್ರೀಡೆಗಳು ನಶಿಸಿ ಹೋದ ಬಗ್ಗೆ ಕಳವಳ ವ್ಯಕ್ತಪಡಿಸುತ್ತಾರೆ. ಇಂದಿನ ಪೀಳಿಗೆಗಳಿಗೆ ಚಿನ್ನಿದಾಂಡು, ದಡಂದುಡಕಿ, ಮರಕೋತಿ ಆಟಗಳ ಮಹತ್ವವೆಲ್ಲಿ ಗೊತ್ತು ಎಂದು ಖಾರವಾಗಿ ಪ್ರಶ್ನಿಸುತ್ತಾರೆ.

೬) ಸುಡುಗಾಡ ಸಿದ್ಧರತ್ತ ಪರಿವರ್ತನೆಯ ಗಾಳಿ :

ಸಂಯುಕ್ತ ಕರ್ನಾಟಕ ಜಿಲ್ಲಾ ವಿಶೇಷ ವಾರ್ತಾ ವಿಭಾಗದಲ್ಲಿ ದಿನಾಂಕ : ೦೩-೧೦-೨೦೦೨ ರಂದು ಪ್ರಕಟಗೊಂಡ ಲೇಖನವಿದು.[೭]

ಹಲವು ಧರ್ಮ-ಜನಾಂಗದ ಕೂಟವಾದ ಕರ್ನಾಟಕದ ಪರಂಪರೆಗೆ ಅಲೆಮಾರಿ ಸುಡುಗಾಡ ಸಿದ್ಧ ಜನಾಂಗವು ನಮ್ಮ ಸಂಸ್ಕೃತಿಯ ಭಾಗವಾಗಿದ್ದಾರೆಂಬ ಲೇಖಕರ ಚಿಂತನೆಗೆ ಅವರು ನೀಡುವ ನಿದರ್ಶನಗಳು ಪುಷ್ಠಿ ನೀಡುತ್ತವೆ. ಸುಡುಗಾಡ ಸಿದ್ಧ ಜನಾಂಗವು ನಮ್ಮ ರಾಜ್ಯಕ್ಕೆ ಆಂಧ್ರಪ್ರದೇಶದಿಂದ ವಲಸೆ ಬಂದಿರುವುದಕ್ಕೆ ಐತಿಹಾಸಿಕ ಸಾಕ್ಷಾಧಾರಗಳನ್ನು ಒದಗಿಸುವ ಲೇಖಕರು ಸ್ಮಶಾನವಾಸಿ ಶಿವಶಂಕರನೇ ಇವರ ಮೂಲ ಪುರುಷ ಎಂಬುದನ್ನು ಕಾವ್ಯ-ಪುರಾಣಗಳನ್ನು ಆಧರಿಸಿ ದೃಢಪಡಿಸುತ್ತಾರೆ.

ಸುಡುಗಾಡ ಸಿದ್ಧರು ನಾಟೀ ವೈದ್ಯರು, ದನಕರುಗಳು ಮೇವು ತಿನ್ನದಿದ್ದಾಗ, ಎಮ್ಮೆ ಆಕಳುಗಳು ಹಿಂಡದಿದ್ದರೆ, ಬಾಯ್ಬೇನೆ, ಕಾಲ್ಬೇನೆಗಳು ಇತ್ಯಾದಿಗಳಿಗೆ ವನಸ್ಪತಿ

ನೀಡುವ ಈ ಜನಾಂಗದವರಿಗೆ ಶಿಕ್ಷಣದ ಅಗತ್ಯತೆಯನ್ನು ಒತ್ತಿ ಹೇಳುತ್ತ 'ಅಕ್ಷರ ಬೆಳಕು ಬಂದಿದೆ ಸುಡುಗಾಡು ಸಿದ್ಧರ ಮನೆ ಬಾಗಿಲಿಗೆ'[೮] ಎಂದು ಆ ಜನಾಂಗವನ್ನು ಎಚ್ಚರಿಸುವ ಅರಿವನ್ನು ಮೂಡಿಸುವ ಕೆಲಸವನ್ನು ಲೇಖಕರು ಮಾಡಿದ್ದಾರೆ.

೭) ಲೋಕ ಪ್ರಸಿದ್ಧಿ ಲೋಕಾಪುರದ ಕಲ್ಲು :

ಸಂಯುಕ್ತ ಕರ್ನಾಟಕ ವ್ಯಾಪಾರ ವಾಣಿಜ್ಯ ಪುರವಣಿಯಲ್ಲಿ ದಿನಾಂಕ : ೧೩–೦೩–೨೦೦೨ ರಂದು ಪ್ರಕಟಗೊಂಡ ಲೇಖನವಿದು.[೯]

ಬಾಗಲಕೋಟೆಯ ಲೋಕಾಪುರವು ಕಲ್ಲು ಗಣಿ ಉದ್ದಿಮೆಗೆ ಅಷ್ಟೇ ಅಲ್ಲದೇ ಸಿಮೆಂಟ್, ಸುಣ್ಣ, ಬಣ್ಣ (ಪೇಂಟ್) ಬೆಲ್ಲ ತಯಾರಿಕೆಯ ಖನಿಜಗಳ ಕೇಂದ್ರವಾಗಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮುಂಚೂಣಿಯಲ್ಲಿರುವುದನ್ನು ಕೆಲವು ಡಾಟಾಗಳ ಮೂಲಕ ವ್ಯಾಪಾರ–ವಹಿವಾಟುವಿನ ಸಮಗ್ರ ಚಿತ್ರವನ್ನು ಲೇಖಕರು ಬಿಡಿಸಿಟ್ಟಿದ್ದಾರೆ.

ಮನುಷ್ಯನ ಆಸೆಯು ದುರಾಸೆಯಾಗಿ ಮಾರ್ಪಾಡು ಹೊಂದಿ ಇಂದು ಭೂಮಿಯನ್ನು ಒಟ್ಟಾರೆ ನಿಸರ್ಗವನ್ನು ಶೋಷಣೆ ಮಾಡುತ್ತಿದ್ದು ಇದರ ಹಿಂದಿನ ದರಿದ್ರ ಕೈಗಳನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಳ್ಳುವ ಲೇಖಕರು ಅವಶ್ಯಕ ಮತ್ತು ಉಪಯುಕ್ತ ಸನ್ನಿವೇಶಕ್ಕೆ ಮಾತ್ರ ಈ ಖನಿಜ ಸಂಪನ್ಮೂಲಗಳನ್ನು ಬಳಕೆ ಮಾಡಿ ಮುಂದಿನ ಪೀಳಿಗೆಗೂ ಇವುಗಳು ಉಳಿಯುವಂತಾಗಬೇಕೆಂಬ ಲೇಖಕರ ಒತ್ತಾಸೆಯಿಂದ ಲೇಖನ ಮುಕ್ತಾಯಗೊಳ್ಳುವುದು.

೮) ಇತಿಹಾಸದ ಹಾಸಿಗೆಯಲ್ಲಿ ಕೃಷ್ಣಾತೀರ ಸಂಸ್ಕೃತಿ :

ಪ್ರಪಂಚ ವಾರ ಪತ್ರಿಕೆಯಲ್ಲಿ ದಿನಾಂಕ : ೦೬–೦೪–೨೦೦೩ ರಲ್ಲಿ ಹಾಗೂ ೧೩–೦೪–೨೦೦೩ ರಲ್ಲಿ ಎರಡು ಕಂತುಗಳಾಗಿ ಪ್ರಕಟಗೊಂಡ ಲೇಖನವಿದು.[೧೦]

ಸುಮಾರು ೧೬೦೦ ವರ್ಷಗಳ ಹಿಂದೆಯೇ 'ನಾಸ್ಟ್ರಾಡಾಮಸ್' ಇಂದಿನ ಜಗತ್ತನ್ನು ಕುರಿತು ಭವಿಷ್ಯ ನುಡಿದದ್ದು; ಅದು ಇಂದು ಸತ್ಯವಾಗುತ್ತಿರುವಂತೆ, ಸಾವಿರಾರು ವರ್ಷಗಳ ಹಿಂದೆಯೇ ಈ ನಮ್ಮ ನೆಲದ ಆಲಮಟ್ಟಿ ಜಂಗಮರು ಕಂಡ ಕನಸ್ಸು ಹಾಗೂ ಬಬಲಾದಿಯ ಶ್ರೀ ಚಿಕ್ಕಪಯ್ಯನವರು ಹೇಳಿದ ಭವಿಷ್ಯ ಇಂದು ನೈಜತೆಯನ್ನು ಪಡೆದ ಪವಾಡ ಸಾದೃಶ್ಯ ಘಟನೆಗಳನ್ನು ಲೇಖಕರು ಸಾರಸ್ಯಕರವಾಗಿ ಬಿಚ್ಚಿಟ್ಟಿದ್ದಾರೆ.

ಲೇಖನದ ತುಂಬೆಲ್ಲ ಜಂಗಮರ ವಾಣಿಯು ವೈಜ್ಞಾನಿಕತೆಗೆ ಮತ್ತು ವರ್ತಮಾನದ ಭವಿಷ್ಯತೆಗೆ (ವಾಸ್ತವತೆಗೆ) ಯಾವ ಬಗೆಯಾಗಿ ಹತ್ತಿರವಾಗಿ ನೈಜತೆಯನ್ನು ಸಾಧಿಸಿತು ಎಂಬುದನ್ನು ಲೇಖನದುದ್ದಕ್ಕೂ ರಸವತ್ತಾಗಿ ಲೇಖಕರು ವಿವರಿಸಿದ್ದಾರೆ. ಆಲಮಟ್ಟಿ

ಆಣೆಕಟ್ಟನ್ನು ಕಟ್ಟಿದ ಪರಿಣಾಮವಾಗಿ ಹಿನ್ನೀರಿನಲ್ಲಿ ಮುಳುಗಡೆಯಾದ ಸಾವಿರಾರು ಎಕರೆ ಭೂಮಿ ಹಲವಾರು ದೇವಾಲಯಗಳು ಮಹತ್ವ ಪೂರ್ಣ ಶಾಸನಗಳು ಹೀಗೆ ಎಲ್ಲವುಗಳ ಮೇಲೆ ಈ ಲೇಖನ ಅರ್ಥಪೂರ್ಣವಾಗಿ ಬೆಳಕು ಚೆಲ್ಲುತ್ತದೆ.

೯) ಹಿರಿಯ ಜಾನಪದ ತಜ್ಞ ; ಜಿ. ಬಿ. ಖಾಡೆ :

ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ದಿನಾಂಕ : ೧೦-೦೩-೨೦೦೭ ರಂದು ಪ್ರಕಟವಾದ ಪುಟ್ಟ ಲೇಖನವಿದು.[೧೧]

ಕನ್ನಡ ಜಾನಪದ ಸಾಹಿತ್ಯ ಸಂಪಾದನೆ ಮತ್ತು ಜಾನಪದ ಕತೆಗಳ ಬಗೆಗೆ ವಿಶೇಷ ಕಾಳಜಿ ಹೊಂದಿ ತಮ್ಮ ಜೀವಿತದುದ್ದಕ್ಕೂ ಜಾನಪದಕ್ಕಾಗಿ ತೊಡಗಿಸಿಕೊಂಡಿರುವ ಗಣಪತಿ ಬಾಪು ಖಾಡೆಯವರ ಸಮಗ್ರ ಸಾಧನೆ ಸವಿವರಗಳನ್ನು ಚಿತ್ರಿಸುವುದೇ ಈ ಲೇಖನದ ಉದ್ದೇಶವಾಗಿರುವದರ ಜೊತೆಗೆ ಜಾನಪದ ಸಾಹಿತ್ಯದ ಮೆರಗನ್ನು ಲೇಖಕರು ಅತ್ಯುತ್ತಮವಾಗಿ ಬಿಂಬಿಸಿದ್ದಾರೆ.

ಖಾಡೆಯವರು 'ಕರ್ಬಲ್' ಪದ್ಯಗಳನ್ನು (ಮುಸ್ಲಿಂ, ಮೋಹರಂನಲ್ಲಿ ಹಾಡುವ ಪದ್ಯಗಳು) ಒಟ್ಟು ಮಾಡಿ, 'ಹಳ್ಳಿ ಹಬ್ಬಿಸಿದ ಹೂಬಳ್ಳಿ' ಹಾಗೂ ೨೩ ಜಾನಪದ ಕಥೆಗಳ ಸಂಕಲನವಾದ 'ಬೆಳವಲ ಬೆಳಕು' ಕೃತಿಗಳನ್ನು ಪರಿಚಯಿಸುವುದರ ಜೊತೆಗೆ ಶ್ರೀಯುತರಿಗೆ ಸಂದ ಪ್ರಶಸ್ತಿ-ಪುರಸ್ಕಾರಗಳ ಸಮಗ್ರ ವಿವರಣೆಯಿಂದ ಖಾಡೆಯವರ ನಿಸ್ವಾರ್ಥ ಜನಪದ ಬದುಕನ್ನು ಓದುಗರಿಗೆ ತೋರಿಸಿಕೊಟ್ಟಿದ್ದಾರೆ.

೧೦) ಗ್ರಾಮೀಣ ಆಟಗಳು ಮತ್ತು ಪಾಠಗಳು :

ಪರಿಪೂರ್ಣ ಕಲಿಕಾ ಆಸಕ್ತಿಯಾಗಿ ಬೋಧನಾ ಶಕ್ತಿಯಾಗಿ, ಶಾರೀರಿಕ ಸಾಮರ್ಥ್ಯವನ್ನು ಬಲಿಷ್ಟಗೊಳಿಸುವ ಗ್ರಾಮೀಣ ಆಟಗಳ, ಸಂಸ್ಕೃತಿ-ಪರಂಪರೆಯನ್ನು ಬಿಚ್ಚಿಡುವ ಲೇಖನವಿದು.

ಅಜ್ಜಿ ಹೇಳುವ / ಹೇಳಿದ ಕಥೆಗಳು ಮಗುವಿನ ಧೈರ್ಯ-ಸಾಹಸ, ತಾಳ್ಮೆ ಬಲಿದಾನ, ದೂರದೃಷ್ಟಿ, ಪ್ರವೃತ್ತಿಗಳಿಗೆ ಮೂಲವಾಗಿ ಹಾಗೂ ವಿಕಾಸಕ್ಕೆ ನಾಂದಿಯಾಗಿ ಬಂದಂತಹ ಪರಂಪರೆಯನ್ನು ಲೇಖಕರು ಪರಾಮರ್ಶಿಸಿದ್ದಾರೆ. 'ಅಜ್ಜಿ ವಿಶ್ವವಿದ್ಯಾಲಯಕ್ಕೆ ಸಮಾನಳು' ಎಂಬ ಲೇಖಕರ ಮಾತು. ಅಜ್ಜಿಯ ಅಗತ್ಯತೆಯನ್ನು ಹಾಗೂ ಜಾನಪದ ಕತೆಗಳಲ್ಲಿನ ಸತ್ಯ-ಸತ್ವವನ್ನು ಎತ್ತಿ ಅರ್ಥಪೂರ್ಣವಾಗಿ ತೋರಿಸುವಲ್ಲಿ ಯಶಸ್ವಿಯಾಗಿದೆ.

೧೧) ಮಕರ ಸಂಕ್ರಮಣ :

ಯುಗಾದಿ, ಕಾರಹುಣ್ಣಿಮೆ, ಪಂಚಮಿ, ಮಹಾನವಮಿ, ದೀಪಾವಳಿ, ಸಂಕ್ರಾಂತಿ ಮುಂತಾದ ಹಬ್ಬಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿದ್ದು ಜನಜೀವನಕ್ಕೆ ಉಚಿತವಾದ ಸಂಸ್ಕಾರ ನೀಡುವುದಲ್ಲದೇ ನಿರಭಿಮಾನ, ಸಮರ್ಪಣಾಭಾವ, ಸಾಮಾಜಿಕ ಸ್ವಾಸ್ಥ್ಯ, ವಿನೋದಗಳ ಜೊತೆಗೆ ಪ್ರಾಚೀನ ಇತಿಹಾಸ, ಸಾಹಿತ್ಯ-ಸಂಸ್ಕೃತಿ, ಅನ್ಯಮತ ಸಹಿಷ್ಣುತೆ, ಸೋದರತ್ವ ಮನೋಭಾವವಿದ್ದ ಭ್ರಾತೃತ್ವ ಗುಣಗಳನ್ನು ಹೃದಯಕ್ಕೆ ತುಂಬುವ ಪರಿಯನ್ನು ಲೇಖಕರು ಔಚಿತ್ಯ ಪೂರ್ಣವಾಗಿ ಚರ್ಚಿಸಿದ್ದಾರೆ.

ಕೃತಯುಗದಲ್ಲಿ, ತ್ರೈತಾಯುಗದಲ್ಲಿ, ದ್ವಾಪರ ಯುಗದಲ್ಲಿ ಹಾಗೆಯೇ ಇಂದಿನ ಕಲಿಯುಗದಲ್ಲಿ ಮಕರ ಸಂಕ್ರಮಣವನ್ನು ಆಚರಿಸುವ ವಿಧಿವಿಧಾನಗಳು ಅದರಿಂದ ದೊರೆಯುವ ಸತ್ಫಲಗಳು ಇವೆಲ್ಲವನ್ನು ವೈಜ್ಞಾನಿಕ ಮೂಸೆಯಲ್ಲಿ ಕೂಲಂಕಶವಾಗಿ ಚರ್ಚಿಸಿ, ಈಗಿನ ತಂತ್ರಜ್ಞಾನಕ್ಕೆ ಹಿಂದಿನ ಜಾನಪದರ ಮಂತ್ರಜ್ಞಾನವೇ ಮೂಲ ಎಂಬುದನ್ನು ಕೆಲವು ಉದಾಹರಣೆ – ಉಲ್ಲೇಖಗಳಿಂದ ಸ್ಪಷ್ಟಪಡಿಸುತ್ತಾರೆ.

ಸೂರ್ಯನು ಮಕರ ರಾಶಿ ಪ್ರವೇಶಿಸಿ ಉತ್ತರಾಯಣಕ್ಕೆ ಅಡಿಯಿಡುವ ಈ ಪುಣ್ಯ ಕಾಲದಲ್ಲಿನ ಮಹತ್ವವನ್ನು ಅಧ್ಯಾತ್ಮಿಕತೆಯ ದೃಷ್ಟಿಯಿಂದ ತೂಗಿ ನೋಡುವ ಲೇಖಕರು, 'ತೇನ ತ್ಯಕ್ತೇನ ಭುಂಜಿತಾ' (ಸುಗ್ಗಿಯ ಈ ಕಾಲದಲ್ಲಿ ಎಲ್ಲರೂ ಹಂಚಿಕೊಂಡು ತಿಂದು ಬದುಕಬೇಕು) ಎನ್ನುವ ತತ್ವವನ್ನು ಅರ್ಥಪೂರ್ಣವಾಗಿ ಅರ್ಥೈಸಿ ವಿಶ್ಲೇಷಿಸಿದ್ದಾರೆ.

೧೨) ಕಾಡು-ನಾಡಿನ ಐಸಿರಿ :

ಚಿಂತಕರ ಚಾವಡಿ ವಿಭಾಗ, 'ಸಮಾಜ ವೀರ' ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನವಿದು.[೨]

ಮನುಷ್ಯ ಪರಿಸರದ ಕೂಸು. ಪರಿಸರವೆಂದರೇ ಕೇವಲ ಮನುಷ್ಯರೇ ಮಾತ್ರವಲ್ಲ ಪ್ರಾಣಿ, ಪಕ್ಷಿ, ಕೀಟ, ಸಸ್ಯ, ಹೊಳೆ, ಹಳ್ಳ, ಬೆಟ್ಟ, ಗುಡ್ಡ ಮುಂತಾದವುಗಳೊಡನೆ ನಮ್ಮ ಗ್ರಾಮೀಣ ಜಾನಪದರು ಯಾವ ರೀತಿ ಸೌಹಾರ್ದ ಮತ್ತು ಆತ್ಮೀಯವಾಗಿ ಬೆರೆತು ಎಲ್ಲವುಗಳಲ್ಲಿ ಒಂದಾಗಿ ಬದುಕುತ್ತಿದ್ದ ಸನ್ನಿವೇಶ ಸಂದರ್ಭಗಳನ್ನು ನೆನೆಯುತ್ತ ಇಂದಿನ ಮನುಷ್ಯ ಎಲ್ಲವನ್ನು ದಮನಗೈಯುತ್ತ ರಾಕ್ಷಸ ಪ್ರವೃತ್ತಿಯ ಬದುಕನ್ನು ಬದುಕುತ್ತಿರುವುದನ್ನು ನೋಡಿ ಲೇಖಕರು ಖೇದವನ್ನು ಹೊರಹಾಕುತ್ತಾರೆ.

ಗ್ರಾಮೀಣ ಜಾನಪದರು ಕಂಡ ಮಳೆ-ಬೆಳೆ ಎಲ್ಲವೂ ಏರುಪೇರಾಗಿ ನಿಸರ್ಗದೊಡನೆ ಆತನ ಆತ್ಮೀಯ-ಭಯ-ಭಕ್ತಿಯ ಸಂಬಂಧ ಇಂದು ಮಾಯವಾಗಿ ಮನುಷ್ಯನ ದುರಾಸೆಯಿಂದ ನಿಸರ್ಗವೇ ನಾಶವಾಗುವ ಹಂತಕ್ಕೆ ಬಂದು ಪ್ರಳಯದ ಹೊಸ್ತಿಲಿಗೆ

ಹಾಸಿಗೆ ಹಾಸಿದ್ದೇವೆ ಎಂಬ ಲೇಖಕರ ಮಾತು ಪರಿಸರದ ವಿನಾಶ ಮನುಷ್ಯನ ನಾಶವನ್ನು ಪ್ರತಿಬಿಂಬಿಸಿದೆ.

೧೩) ಜನಮನದ ಕಲಾವಿದ : ಶ್ರೀ ಕೃಷ್ಣ ದೇಶಪಾಂಡೆ :

ಪಾರಿಜಾತ ಗಾರುಡಿಗ ದಿ. ಕೃಷ್ಣಾಜೀ ದೇಶಪಾಂಡೆ ಲೋಕಾಪುರ ಅವರ ಜೀವನ-ಸಾಧನೆಯನ್ನು ಪುಸ್ತಕ ದಿನಾಂಕ : ೧೪-೧೦-೧೯೯೭ ರಂದು ಬಿಡುಗಡೆಗೊಂಡ ಕೃತಿಯಲ್ಲಿ ಪ್ರಕಟಗೊಂಡ ಲೇಖನವಿದು.[೧೩]

ಪಾರಿಜಾತದಲ್ಲಿ ಧೂತೆಯ ಪಾತ್ರದ ಮೂಲಕ ಜನಮನವನ್ನು ಸೂರೆಗೊಂಡು ವೈಯಕ್ತಿಕ ಬದುಕಿನಲ್ಲಿ ನೋವುಗಳನ್ನು ತಾನೇ ಉಂಡು, ನಲಿವುಗಳನ್ನು ಮಾತ್ರ ಕಲಾರಸಿಕನಾಗಿ ಹಂಚಿಕೊಂಡ ಅಪ್ರತಿಮ ಕಲಾವಿದ ಕೃಷ್ಣಾ ದೇಶಪಾಂಡೆಯವರ ಬದುಕಿನ ಮೇಲೆ ಬೆಳಕು ಚೆಲ್ಲುವ ಲೇಖಕರ ಪ್ರಾಮಾಣಿಕ ಪ್ರಯತ್ನವನ್ನು ಇಲ್ಲಿ ಕಾಣಬಹುದು.

ಪಾರಿಜಾತದ ಮೂಲಕ ದಲಿತ ಕಲಾವಿದರನ್ನು ಬೆಳಕಿಗೆ ತಂದ ದೇಶಪಾಂಡೆಯವರು ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡಮಿಗೆ ೨ ಬಾರಿಗೆ ಸದಸ್ಯರಾಗಿ ಮಾಡಿದ ನಿಸ್ವಾರ್ಥ ಕೆಲಸಗಳನ್ನು ಲೇಖಕರು ಪಟ್ಟಿಮಾಡಿ ಮೆಚ್ಚುಗೆಯಿಂದ ಶ್ಲಾಘಿಸಿದ್ದಾರೆ.

೧೪) ನಾವು ಮತ್ತು ನಮ್ಮ ಸ್ವಾತಂತ್ರ್ಯ :

ಕುರುಕ್ಷೇತ್ರ ವಾರ ಪತ್ರಿಕೆಯಲ್ಲಿ ಸ್ವಾತಂತ್ರ್ಯೋತ್ಸವ ೨೦೧೧ ರ ವಿಶೇಷ ಸಂಚಿಕೆಯಲ್ಲಿ ಪ್ರಕಟಗೊಂಡ ಲೇಖನವಿದು.[೧೪]

ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ೬೪ ವರ್ಷ ಪೂರೈಸಿದ ಸಂದರ್ಭದಲ್ಲಿ ರಚಿಸಿದ ಈ ಲೇಖನದಲ್ಲಿ ಲೇಖಕರು ಭಾರತಕ್ಕೆ ಭಾರತೀಯರೇ ನೀಡಿದ ದಾರಿದ್ರ್ಯತನಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತ ಪ್ರಜಾಪ್ರಭುತ್ವವೆಂಬುದು ಭಂಢ-ಲಫಂಗರ ಸಾಮ್ರಾಜ್ಯವಾಗಿ ಮಾರ್ಪಟ್ಟಿದೆ ಎಂಬುದನ್ನು ಕೆಲವು ಆಗು-ಹೋಗುಗಳನ್ನು ಉದಾಹರಣೆ ನೀಡಿ ರೋಷಿ ಹೋಗಿ ವ್ಯವಸ್ಥೆಯನ್ನೇ ಧಿಕ್ಕರಿಸುವ ದಿಟ್ಟ ಧೈರ್ಯವನ್ನು ಲೇಖಕರಲ್ಲಿ ಕಾಣುತ್ತೇವೆ.

ಜಾತ್ಯಾತೀತ ರಾಷ್ಟ್ರದಲ್ಲಿ ಜಾತೀಯತೆಯ ಜ್ವಾಲೆಯು ದಿಕ್ಕು-ದಿಕ್ಕಿಗೂ ಪಸರಿಸಿ ಮೆರೆಯುವ ಅದರ ಅಟ್ಟಹಾಸಕ್ಕೆ ಮಟ್ಟ ಹಾಕಲು ಲೇಖಕರು ಯುವ ಜನಾಂಗಕ್ಕೆ ಕರೆ ನೀಡುತ್ತಾರೆ. ಕೋಮದಳ್ಳುರಿಗೆ ಸಿಕ್ಕು ನಲುಗಿ-ನರಳುತ್ತಿರುವ ಭಾರತಾಂಬೆಗೆ ನಿಯತ್ತಿನ ನೇತಾರರ ಅವಶ್ಯಕತೆ ಇದೆಯೆಂದು ಅಭಿಪ್ರಾಯ ಪಟ್ಟಿದ್ದು ತೀರಾ ಸತ್ಯ ಮತ್ತು ಸೂಕ್ತವಾಗಿದೆ.

೧೫) ನಂಬಿಗಸ್ಥ ಭಂಟ; ಮುಧೋಳ ಬೇಟೆ ನಾಯಿ :

'ಈ ಭಾನುವಾರ' ಪತ್ರಿಕೆ ಬೆಂಗಳೂರು ವಿಶೇಷ ಸಂಚಿಕೆಯಲ್ಲಿ ದಿನಾಂಕ : ೧೫-೦೭-೨೦೧೧ ರಂದು ಪ್ರಕಟಗೊಂಡ ಲೇಖನವಿದು.[೧೫]

ದೇಶದ ೩೬ ಜಾತಿಯ ನಾಯಿ ಸಂಕುಲಗಳಲ್ಲಿ ಮುಧೋಳದ ಬೇಟೆ ನಾಯಿಯು ಪ್ರಥಮ ಸ್ಥಾನದಲ್ಲಿದ್ದು ಮುಧೋಳ ಹೌಂಡಾ ತಳಿಗೆ ಅಂತರಾಷ್ಟ್ರೀಯ ಮಟ್ಟದಲ್ಲೂ ಮಾನ್ಯತೆ ದೊರೆತಿದ್ದನ್ನು ಪ್ರಸ್ತಾಪಿಸುತ್ತ ಅದರ ತೀಕ್ಷ್ಣ ಬೌದ್ಧಿಕ ಸಾಮರ್ಥ್ಯವನ್ನು ಲೇಖಕರು ಕೊಂಡಾಡಿದ್ದಾರೆ.

ಮುಂಗೋಲಿಯನ್ನರು, ಗ್ರೀಕರು, ಪರ್ಶಿಯನ್‌ರು, ತುರ್ಕಿಗಳು, ಕುಶಾನರು, ಮೊಗಲರು, ಡಚ್ಚರು, ಫ್ರೇಂಚರು, ಬ್ರಿಟಿಷರು ಈ ಮುಧೋಳ ನಾಯಿ ತಳಿಯನ್ನು ಭಾರತಕ್ಕೆ ತಂದಿರುವ ವಿಷಯವನ್ನು ಕಾಲ ಘಟ್ಟದಲ್ಲಿ ನಿಂತು ನಿರ್ಣಯಿಸುತ್ತಾರೆ.

ಈ ತಳಿಯ ನಾಯಿಗಳನ್ನು ಬಹುಮನಿಯ ಹಸನಗಂಗೂ, ವಿಜಯಪುರದ ಆದಿಲ್‌ಶಾಹಿಗಳು, ಮುಧೋಳ ಸಂಸ್ಥಾನದ ರಾಜಾದೊರೆ, ಮಾಲೋಜಿರಾವ ಘೋರ್ಪಡೆ, ಛತ್ರಪತಿ ಶಿವಾಜಿ ಮುಂತಾದ ರಾಜಮಹಾರಾಜರು ಸಾಕಿದ್ದ ಕುರುಹುಗಳನ್ನು ಸಾಕ್ಷಾಧಾರಗಳಿಂದ ದೃಢಪಡಿಸುವ ಲೇಖಕರ ಜಾಣ್ಮೆಯನ್ನು ಮೆಚ್ಚಲೇಬೇಕು.

❖❖❖❖❖

ಅಡಿಟಿಪ್ಪಣಿಗಳು :

೧. ಡಾ. ಹಾ. ಮಾ. ನಾ. : 'ಜನಪದ ತತ್ವಗಳು ಮತ್ತು ಸಾಹಿತ್ಯ' ಮಾನಸ ಗಂಗೋತ್ರಿ, ಮೈಸೂರು. ಮು.ಸಂ. ೭

೨. ಡಾ. ಹಾ. ಮಾ. ನಾ. : 'ಜನಪದ ತತ್ವಗಳು ಮತ್ತು ಸಾಹಿತ್ಯ' ಮಾನಸ ಗಂಗೋತ್ರಿ, ಮೈಸೂರು. ಮು.ಸಂ. ೩

೩. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೧೬

೪. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೧೭

೫. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೬೩

೬. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೯೪

೭. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೯೭

೮. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೯೭

೯. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೧೦೬

೧೦. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೧೧೫

೧೧. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೧೩೯

೧೨. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೧೨೨

೧೩. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೧೪೧

೧೪. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೭೪

೧೫. ಸಿದ್ದು ದಿವಾಣ : 'ನೆಂಪು ಕಂಪು' ಮು.ಸಂ. ೪೯

ಅಧ್ಯಾಯ : ೪

ಸಿದ್ದು ದಿವಾಣರ ಜಾನಪದ ಸಂಪಾದನೆ

ಅಧ್ಯಾಯ – ೪
ಸಿದ್ದು ದಿವಾಣರ ಜಾನಪದ ಸಂಪಾದನೆ

೪.೧ ಜಾನಪದ ಸಂಪಾದನೆಯ ಸ್ವರೂಪ :

'ಜಾನಪದ' ಗ್ರಾಮೀಣ ಪರಿಸರಕ್ಕೆ ಮಾತ್ರ ಸೀಮಿತವಾಗುವ ವಿಷಯವಾಗಿಲ್ಲ. ಅದು ವಿಶ್ವವ್ಯಾಪಿ ಗುಣವನ್ನು ಹೊಂದಿರುವಂತದ್ದು. ಜಾಗತೀಕರಣದ ಪ್ರಕ್ರಿಯೆಗಳ ಪ್ರಭಾವವಾಗುತ್ತಿರುವ ಈ ದಿನಗಳಲ್ಲಿ ದೇಶಿಯ ಚಿಂತಕರು, ಜಾಗತೀಕರಣದ ಕರಾಳತೆಯಿಂದ ಜಾನಪದವನ್ನು ಪಾರು ಮಾಡುವ ಬಗೆಯನ್ನು, ಉಳಿಸಿ ಬೆಳೆಸುವ ರೀತಿಯನ್ನು ಕುರಿತು ಚಿಂತನೆ ಮಾಡುತ್ತಿದ್ದಾರೆ.

'ಜಾನಪದ'ವು ಈ ಮಣ್ಣಿನಲ್ಲಿ ಹುಟ್ಟಿದುದು. ಇಲ್ಲಿನ ಸಾರವನ್ನೇ ಹೀರಿ ಸತ್ಯ ಮತ್ತು ಸತ್ವಯುತವಾಗಿ ಬೆಳೆದಂತದ್ದು. ತಲೆ–ತಲಾಂತರದಿಂದ ಬಾಯಿಂದ ಬಾಯಿಗೆ ಹರಿದು ಬಂದ ಈ ಜೀವಂತ ಸಾಹಿತ್ಯವನ್ನು ಸಂಪಾದಿಸುವ ಕಾರ್ಯ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈ ಸಂಪಾದನೆ ಕಾರ್ಯ ಮೆಲ್ನೋಟದಲ್ಲಿ ಸರಳ ಎಂದೆನಿಸಿದರೂ ಇದೊಂದು ಕ್ಲಿಷ್ಟವಾದ ಕಾರ್ಯವಾಗಿದೆ. ಸ್ವೀಕರಣ, ವರ್ಜನ, ಪರಿಷ್ಕರಣ ಮತ್ತು ಸಂದೇಹ ಈ ೪ ವಿಧಾನಗಳಲ್ಲಿ ಸಂಪಾದನಾ ಕಾರ್ಯ ಮುನ್ನಡೆಯಬೇಕಾಗುತ್ತದೆ. ಜಾನಪದ ಸಾಹಿತ್ಯವನ್ನು ಸಂಪಾದಿಸುವುದೆಂದರೇ ಅರ್ಥ ಶುದ್ಧ ಶಿಷ್ಟಪದ ಸಾಹಿತ್ಯ ಸಂಪಾದನೆಯಂತೆ ಮೂಲ ಪಾಠವನ್ನು ನಿರ್ಣಯಿಸುವುದಲ್ಲ. ಹಾಗೆ ನೋಡಿದರೇ ಜಾನಪದ ಸಾಹಿತ್ಯಕ್ಕೆ ಅಧಿಕೃತ ಪಾಠವೇ ಇರಲಾರದು; ಇರಬಾರದು. ಸಂಪಾದನಾ ಕಾರ್ಯದಲ್ಲಿ ಪಾಠವನ್ನು ಹೇಗೆ ಸೋಸಿಕೊಳ್ಳಬೇಕೆಂದು ತಿಳಿದುಕೊಂಡು ತರುವಾಯ ಅದರ ಪ್ರಕಟಣೆ ವಿಧಾನದ ಬಗ್ಗೆ ವಿಚಾರಿಸಬಹುದು. ಇಂದು ಜಾನಪದ ಸಾಹಿತ್ಯವನ್ನು ಬರವಣಿಗೆಯ ಮೂಲಕ ಪ್ರಕಟಿಸುತ್ತಿದ್ದೇವೆ. ಆದರೆ ಆಡು ಮಾತಿನ ಮಾಧ್ಯಮವಾಗಿರುವ ಅದನ್ನು ಬರವಣಿಗೆ ಮಾಧ್ಯಮಕ್ಕೆ ಇಳಿಸುವ ಕಾರ್ಯವನ್ನು ಹೇಗೆ ನಿರ್ವಹಿಸುವುದು? ಎಂಬುದು ಹಿಂದೆ ಮತ್ತು ಇಂದು ಕೂಡ ಜಾನಪದ ಸಾಹಿತ್ಯ ಸಂಪಾದಕರನ್ನು ಕಾಡಿದ ಮತ್ತು ಕಾಡುತ್ತಿರುವ ಪ್ರಶ್ನೆಯಾಗಿದೆ. ಆಡುವ ಭಾಷೆ ಬರವಣಿಗೆಯಲ್ಲಿ ತನ್ನ ಕೆಲವು ಅಂಶಗಳನ್ನು ಕಳೆದುಕೊಳ್ಳುವಂತೆ ಹಾಡುವ ಅಥವಾ ಹೇಳುವ ಜಾನಪದ ಸಾಹಿತ್ಯವೂ

ಬರವಣಿಗೆಯಲ್ಲಿ ತನ್ನ ಕೆಲವು ಅಂಶಗಳನ್ನು ಕಳೆದುಕೊಳ್ಳುತ್ತದೆ. ಒಂದು ಜಾನಪದ ರಚನೆಯನ್ನು ಹೇಳುವಾಗ ಅಥವಾ ಹಾಡುವಾಗ ವ್ಯಕ್ತಗೊಳ್ಳುವ ಧ್ವನಿಯ ಏರಿಳಿತ, ಆಂಗೀಕ ಹಾವಭಾವಗಳು ಅದಕ್ಕೆ ಪ್ರಭಾವಶಾಲಿ ವ್ಯಕ್ತಿತ್ವವನ್ನು ತುಂಬುತ್ತದೆ. ಅದೇ ರಚನೆಯನ್ನು ಬರವಣಿಗೆಗೆ ಇಳಿಸಿಕೊಂಡರೇ ಅದೆಲ್ಲ ಹೋಗಿ ಬಿಡುತ್ತದೆ. ಅದಕ್ಕಾಗಿಯೇ ಜಾನಪದ ಸಾಹಿತ್ಯವನ್ನು ಕೇಳುವಾಗ ಸಿಗುವ ಸುಖ ಓದಿದಾಗ ಸಿಗುವುದಿಲ್ಲವೆನ್ನುವುದು. ಈ ಆರೋಪದಿಂದ ಮುಕ್ತವಾಗಬೇಕಾದರೇ ಅದನ್ನು ಸಾಧ್ಯವಾದಷ್ಟು ಮೂಲ ರೂಪದಲ್ಲಿ ಸಮರ್ಪಕವಾಗಿ ಹಿಡಿದುಕೊಳ್ಳಬೇಕು. ಜನಪದ ಸಾಹಿತ್ಯವನ್ನು ಸಂಪಾದಿಸುವಲ್ಲಿ ಸಂಪಾದಕನಿಗೆ ಕಾಡುವುದೆಂದರೆ ಪಾಠಾಂತರ (variants) ಮತ್ತು ರೂಪಾಂತರಗಳು (varsions). ಇವುಗಳ ಪರಿಜ್ಞಾನವಿಲ್ಲದಿದ್ದರೇ ಅವನು ಸಂಪಾದನಾ ಕಾರ್ಯವನ್ನೇ ಕೆಡಿಸಿಬಿಡುತ್ತಾನೆ.[೧]

ಈ ನಿಟ್ಟಿನಲ್ಲಿ ನೋಡುವುದಾದರೇ ಸಿದ್ದು ದಿವಾಣರ ಹರವಾದ ಪಾಂಡಿತ್ಯ, ಜಾನಪದ ಕ್ಷೇತ್ರದಲ್ಲಿನ ಆಳವಾದ ಶ್ರದ್ಧೆ, ಚಿಕಿತ್ಸಕ ದೃಷ್ಟಿಕೋನ, ವೈವಿಧ್ಯಮಯವಾದ ಪ್ರತಿಭೆಯಿಂದ ಹೊರ ಹೊಮ್ಮಿದ ಒಟ್ಟು ಜನಪದ ಸಂಪಾದನಾ ಕೃತಿಗಳ ಸಂಖ್ಯೆ ಮೂರು (೦೩).

೧) ಹಂತಿ ನೀ ಎಲ್ಲೋಗಿ ಕುಂತಿ – ೨೦೧೩

೨) ಎದ್ದಾವ ಹೋಳ್ಗಿ – ೨೦೧೪

೩) ಗುಳಬುಟ್ಟಿ – ೨೦೧೪

ಹೀಗೆ ಸಿದ್ದು ದಿವಾಣರು ತಾವು ಕಂಡುಂಡದ್ದು, ಕೇಳಿದ್ದು, ಗ್ರಹಿಸಿದ್ದೆಲ್ಲವನ್ನೂ ಈ ಕೃತಿಗಳ ಒಡಲುಗಳಲ್ಲಿ ತುಂಬಿಸಿದ್ದಾರೆ. ಅರ್ಥಪೂರ್ಣತೆಯಿಂದ ಜವಾಬ್ದಾರಿ ಸಂಪಾದಕರಾಗಿ ವಿಶ್ಲೇಷಿಸಿದ್ದಾರೆ.

೪.೨ ಜಾನಪದ ಸಂಪಾದನೆಯ ವಿಭಿನ್ನ ನೆಲೆಗಳು ; ಸಮೀಕ್ಷೆ :

ಸಿದ್ದು ದಿವಾಣರ ಜನಪದ ಸಂಪಾದಿತ ಕೃತಿಗಳೆಲ್ಲವನ್ನೂ ಸಮೀಕ್ಷಿಸಿ –

ಅ) ಜಾನಪದ ಕೃಷಿ ಸಂಸ್ಕೃತಿ

ಬ) ಜಾನಪದ ಸಾಹಿತ್ಯ ಸಂಸ್ಕೃತಿ

ಎಂಬ ಪ್ರಮುಖ ನೆಲೆಗಳಿಂದ ಕಂಡು ಅವುಗಳಲ್ಲಿನ ಒಳ ತುಡಿತಗಳೆಲ್ಲವನ್ನು ವಿಭಾಗಿಸಿ ಮೌಲ್ಯೀಕರಿಸಲಾಗಿದೆ.

೪.೨.೧ 'ಜಾನಪದ ಕೃಷಿ ಸಂಸ್ಕೃತಿ' :

ಕೃಷಿಯ ನಮ್ಮ ಸಂಸ್ಕೃತಿಯ ಜೀವಾಳ. ಜನಪದರು ನಮ್ಮ ಕೃಷಿ ಸಂಸ್ಕೃತಿಯ ಜನಕರು. ಬೇಸಾಯ ಜನಪದರ ಬಾಳಿನ ಉಸಿರು. ಜನಪದರು ಕೃಷಿ ತಪಸ್ವಿಗಳು. ಕೃಷಿ ಸಂವಿಧಾನದ ಮೂಲಕ ಜನಪದ ಸಂವಿಧಾನದ ನೀತಿ–ನಿಯತ್ತುಗಳ ಕಟ್ಟಳೆಗಳನ್ನು

ಹುಟ್ಟು ಹಾಕಿದರು. ಕೃಷಿಯಲ್ಲಿ ಜೀವ ಮತ್ತು ಜೀವನವ ಕಂಡವರು. ಕೃಷಿ ಕಾಯಕ ಯೋಗಿಗಳು. ಕಾಯಕವನ್ನು ತಮ್ಮ ನಾಯಕನನ್ನಾಗಿಸಿಕೊಂಡವರು. ಕಾಯಕದ ಮೂಲಕ ನಾಯಕತ್ವ ಪಡೆದವರು. ಈ ನಾಯಕತ್ವದಲ್ಲಿ ರೀತಿ–ನೀತಿ–ನಿಯತ್ತು, ಗೊತ್ತು–ಗುರಿಗಳುಳ್ಳ ಆಲೋಚನೆಗಳ ಕ್ರಮಬದ್ಧಾತ್ಮಕ ನಡೆ–ನುಡಿ ಮತ್ತು ನಡುವಳಿಕೆಗಳ ಸಂವಿಧಾನದ ಅನುಪಾಲನೆಗೈದವರು. ಅನುಸರಣೆ ಇಂಬು ಗೊಳಿಸಿದವರು. ಜನಪದರ ಕಾಯಕದಲ್ಲಿ ಮನೋರಂಜನೆಯ ಉಲ್ಲಾಸವಿದೆ. ಹಾಡುಗಾರಿಕೆಯ ಸ್ವಾದವಿದೆ. ಕಥೆಗಾರಿಕೆಯ ಹಂದರವಿದೆ. ನಡೆ–ನುಡಿಗಳ ಅನುಕರಣೆಯ ಅನುಭವವಿದೆ. ಗೌರವತೆಯ ಅವಿನಾಭಾವ ಸಂಬಂಧದ ಅನುಭಾವವಿದೆ. ಗ್ರಾಮೀಣ ಬದುಕಿನ ಸೊಗಡಿನಲ್ಲಿ ವೈವಿಧ್ಯಮಯವಾದ ವೈಚಾರಿಕತೆಯುಳ್ಳ ಜೀವನ ವ್ಯವಸ್ಥೆ ಇಂದಿಗೂ ಜೀವಂತವಿದೆ.

ಈ ನಿಟ್ಟಿನಲ್ಲಿ ಸಿದ್ದು ದಿವಾಣರ ಸಂಪಾದನಾ ಕೃತಿಗಳಲ್ಲಿ ಹುದುಗಿರುವ ಸಮಗ್ರ ಜನಪದ ಗ್ರಾಮೀಣರ ಕೃಷಿ ಸಂಸ್ಕೃತಿಯನ್ನು ಪರಿಚಯಿಸಿಕೊಡುವ ನಿಟ್ಟಿನಲ್ಲಿ ಕೆಲವು ಪ್ರಮುಖ ವಿಭಾಗಗಳನ್ನುಗೈದು ಚರ್ಚಿಸಲಾಗಿದೆ. ಅವುಗಳಲ್ಲಿ –

೧) **ಕೃಷಿ ಪರಂಪರೆ ಸಲಕರಣೆಗಳು**
೨) **ದೇಶಿ ಮಣ್ಣಿನ ಪಾತ್ರೆಗಳು**
೩) **ಸುಗ್ಗಿ – ರಾಶಿ**
೪) **ಜನಪದ ಹಬ್ಬ – ಆಟಗಳು**
೫) **ಜನಪದ ಅಳತೆ – ತೂಕಗಳು**
೬) **ಮಳೆಗಳು**
೭) **ಆಯಗಾರರು**

೧) ಕೃಷಿ ಪರಂಪರೆ ಸಲಕರಣೆಗಳು :

ನಮ್ಮ ಗ್ರಾಮೀಣ ಜನಪದರು ಮೂಲತಃ ಕೃಷಿಯನ್ನೇ ನೆಚ್ಚಿಕೊಂಡಿದ್ದರು. ಅದು ಅವರ ಜೀವಾಳವೂ ಆಗಿತ್ತು. ಕೃಷಿ ಕಾಯಕಕ್ಕೆ ಸಂಬಂಧಿಸಿದ ಸಲಕರಣೆಗಳು, ಸಾಧನ ಸಾಮಗ್ರಿಗಳನ್ನು ದೇವರೆಂದೇ ಬಗೆದು, ಪೂಜ್ಯನೀಯವಾಗಿ ಭಯ–ಭಕ್ತಿಯನ್ನಿರಿಸಿ ಕೈಮುಗಿದು ಮುಟ್ಟುವ ಪದ್ಧತಿಯನ್ನು ಬೆಳೆಸಿಕೊಂಡವರು. ಜನಪದರ ಹಾಡಿನಲ್ಲಿ ವಿವಿಧ ಜನಪದ ಸಾಹಿತ್ಯದ ಪ್ರಕಾರಗಳಲ್ಲಿ ಉಲ್ಲೇಖವಾಗಿರುವ ಅನೇಕ ಕೃಷಿ ಉಪಕರಣಗಳನ್ನು ಹೆಸರಿಸಿ, ಅವುಗಳ ಬಳಕೆ, ಉಪಯೋಗಗಳೆಲ್ಲವನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸುವ ಗುರುತರ ಕಾರ್ಯವನ್ನು ಸಿದ್ದು ದಿವಾಣರು ಕೈಗೊಂಡಿದ್ದಾರೆ.

'ಊರ ದ್ಯಾಮವ್ವ ಸಿಂಗಾರ ಮಾಡ್ಯಾರ
ಮುತ್ತೈದೆ ಭೂ ತಾಯಿಯ ಉಡಿಯ ತುಂಬ್ಯಾರ

ಮುತ್ತಿನ ಕೂರ್ಗಿಗೆ ಎತ್ತನ್ನ ಹೂಡ್ಯಾರ
ಬೆಳ್ಸಾಲ ಕುಂಟೀಯ ಗರ್ದಿಲೆ ಹೊಡೆದಾರ'[೧೪]

'ಮೂಡಲ ದಿಕ್ಕಿಗೆ ಕೋರ್ಗಿ ಹೂಡ್ಯಾರ
ಮುತ್ತಿನ ಕೂರ್ಗಿಗೆ ಸಡ್ಡೀಯ ಬಿಗದಾರ
ಮುತ್ತಿನ ಬೀಜದ ಉಡಿಚೀಲ ತುಂಬ್ಯಾರ
ಬಂಗಾರದ ಸಡ್ಡೀಲೆ ಮುಂಗಾರಿ ಬಿತ್ಯಾರ'[೨]

ಮೇಲಿನ ಪದ್ಯಗಳಲ್ಲಿನ ಮುತ್ತಿನ ಕೂರಿಗೆ, ಎಳಸಡ್ಡೀ, ಕುಂಟೀ, ಮೇಳಿ, ಸಡ್ಡೀಬಟ್ಟಲು ಎಂಬ ಪ್ರಮುಖ ಕೃಷಿ ಸಲಕರಣೆಗಳನ್ನು ರೈತಾಪಿ ಜನರು ಬಳಸುವುದನ್ನು ಕಾಣುತ್ತೇವೆ. ಕೃಷಿ ಪದ ಸಂಪತ್ತು ತನ್ನ ಪರಂಪರೆಯ ಸನ್ನಿವೇಶಗಳನ್ನು ಬಿಂಬಿಸುತ್ತದೆ. ಜೋಳ ಬಿತ್ತುವ ಕೂರಿಗೆಗೆ ನಮ್ಮ ಜನಪದರು 'ಮುತ್ತಿನ ಕೂರಿಗೆ' ಎಂದು ಕರೆದದ್ದು ಅಷ್ಟೇ ಸಾರ್ಥಕತೆಯ ಭಾವವಾಗಿದೆ ಎಂದು ಸಿದ್ದು ದಿವಾಣರು ಅಭಿಪ್ರಾಯಪಟ್ಟಿದ್ದಾರೆ. ಎಳಸಡ್ಡಿ ಎಂದರೇ ಬಿತ್ತುವ ಕೂರಿಗೆಯ ಹಿಂದಿನಿಂದ ಅಕ್ಕಡಿ ಹಾಕುವ ಬಿದಿರಿನ ಕೋಲು, ಹಾಗೆಯೇ ಕುಂಟೀ (ಕಬ್ಬಿಣದ ಪಟ್ಟಿ) ಮೇಳಿ, ಬ್ಯಾಕಟಿಕೆಗಳಿಗೆ ಅರ್ಥವತ್ತಾಗಿ ದಿವಾಣರು ವಿಶ್ಲೇಷಿಸಿದ್ದುದು ತುಂಬಾ ಉಪಯುಕ್ತ ಎಂದೆನಿಸಿದೆ.

ಅಡ್ವಟ್ಟಿ, ಬಾರ್ಕೋಲ, ಗೆಜ್ಜೆಸರ, ಹಣ್ಣೆಗ್ಗ ಚಿಪ್ಪಾಡಿ, ಹೆಂಡಿ, ಹೆಗ್ಗರ, ಮಣ್ಕ, ಕ್ವಾಣ, ಗೊಡ್ಡ, ಕಪ್ಲಿ, ಗೂಳಿ, ಖಿಲಾರಿ, ಜವಾರಿ, ತುಪ್ಪ, ಹಂಡ್ಬಂಡ ಗುರ್ದಾಳ, ಕುರ್ಪಿ ಹೀಗೆ ಸುಮಾರು ೨೦೦ಕ್ಕೂ ಮಿಕ್ಕಿದ ಕೃಷಿಗೆ ಸಂಬಂಧಿಸಿದ ಉಪಕರಣ ಮತ್ತು ವಸ್ತುಗಳಿಗೆ ಅರ್ಥವನ್ನು ನೀಡಿ ಪರಿಚಯಿಸುವ ಪರಿ ನಿಜಕ್ಕೂ ದಿವಾಣರ ಜಾನಪದ ಜ್ಞಾನಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಹಾಗೆಯೇ ನಮ್ಮ ಗ್ರಾಮೀಣ ಜನಪದರು ಕೃಷಿ ಮಾಡುತ್ತಿದ್ದ ಕೆಲವು ದವಸ ಧಾನ್ಯಗಳಾದ ಕಡ್ಲಿ, ಅಡ್ಕಿ, ಅಗ್ಸಿ, ಕುಸ್ಬಿ, ಸೌಂತಿ, ಕಡ್ಲಾಯಿ, ಮಟ್ಟಿಕಾಯಿ, ಕಕ್ಕಿಕಾಯಿ, ಸುಲ್ಗಾಯಿ, ಸಿತ್ನಿ, ಹಾಲ್ಗಾಳ, ಗುಂಡ್ದೆನಿ, ಎಳ್ಳಜ್ವಾಳ, ಗುರೆಳ್ಳ, ಹೆಸ್ರ, ಹಾತರ್ಕಿ, ನೆವ್ನಿ, ಚೆಜ್ಜಿ ಹೀಗೆ ಇತ್ಯಾದಿ ಶಬ್ದಗಳನ್ನು ಪರಿಚಯಿಸುವುದರ ಜೊತೆಗೆ ನಮ್ಮ ಜನಪದರ ಬದುಕನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವಲ್ಲಿ ದಿವಾಣರು ಯಶಸ್ವಿಯಾಗಿದ್ದಾರೆ.

ಸೊಂಡಿ ಚೀಲ, ರಾಗೋಲ, ಜೆಲ್ಲಿ, ಸಿಂದಿಹೆಡ್ಲಿ, ಗ್ವಾರಿ, ಟಿಕಾವು, ಗುದ್ಲಿ, ಬುದ್ಲಿ, ಸನಕಿ, ಟಿಕಾವು, ಗುಣಿ, ಈಸ, ದಿಂಡ, ಗಾಲಿ, ಹೆಗ್ಲ, ಕೀಲುಬುಟೆ, ಪುಟೆ, ಬಳಿ, ಲಡ್ಡ, ಸಾಲ, ಯರ್ವಲ ಹಲವಾರು ಉಪಕರಣಗಳು ಈ ತಂತ್ರಜ್ಞಾನದ ಭರಾಟೆಯಲ್ಲಿ ಸದ್ದಿಲ್ಲದೇ ಮರೆಯಾಗಿ ಕೆಲವು ಶಬ್ದಗಳು ಯುವ ಜನಾಂಗಕ್ಕೆ ತಿಳಿಯದೇ ಮರಿಚೀಕೆಯಾಗಿರುವುದನ್ನು ಕಂಡು ಸಂಪಾದಕರು ಮರಗುತ್ತಾರೆ.

೨) 'ದೇಶಿ ಮಣ್ಣಿನ ಪಾತ್ರೆಗಳು' :

ಇಂದಿನ ಯುಗ ಪ್ಲಾಸ್ಟಿಕದ್ದು. ಮನೆಯ ಇಂಚಿಂಚು ಜಾಗವನ್ನು ಆಕ್ರಮಿಸಿ ಅನಾದಿ ಕಾಲದಿಂದಲೂ ಉಪಯೋಗಿಸುತ್ತಿದ್ದ ಮಣ್ಣಿನ ಮಡಕೆ ಕುಡಿಕೆಗಳು ಮೂಲೆಗೆ ಸರಿದು ನೆಲೆ ಕಳೆದುಕೊಂಡಿವೆ ಎಂದು ಕಳವಳ ವ್ಯಕ್ತಪಡಿಸುವ ದಿವಾಣರು ಜನಪದ ದೇಶಿ ಬದುಕಿನ ಮಣ್ಣಿನ ಪಾತ್ರೆಗಳಾದ ಪರ್ಯಾಣ, ಮುಚ್ಛಾ, ತಸ್ತ, ತತ್ರಾಣಿ, ಬಿಂದಿಗಿ, ಅಡಕೇಲ, ಹರವಿಗಳ ಪಟ್ಟಿಯನ್ನು ನೀಡಿ ಕುಂಬಾರರ ಕೌಶಲ್ಯತೆಯನ್ನು ಕೊಂಡಾಡಿದ್ದಾರೆ.

'ಬಯಲು ಸೀಮೆಯ ಪಡಸಾಲೆಯಲ್ಲಿ ನೀರಿನ ತಸ್ತ
ಬರದನಾಡ ಜಲ ಪ್ರಳಯದಿಂದಾತು ಸುಸ್ತ'[೪]

ಎಂದು 'ತಸ್ತ' (ಮಣ್ಣಿನ ಬಗೋಣಿ) ಬಗ್ಗೆ ವಿವರಣೆ ನೀಡುತ್ತ, ಇದು ಗಡಿಗೆಯಾಕಾರದ ಅರ್ಧಭಾಗವನ್ನು ಬಳಸಿ ಈ ತಸ್ತವನ್ನು ಮಾಡಿರುತ್ತಾರೆಂದು ಭೌತಿಕವಾಗಿ ದಪ್ಪ ಮೈಯನ್ನು ಮತ್ತು ಅಂಚನ್ನು ಹೊಂದಿರುತ್ತವೆ. ಈ ತಸ್ತದ ಆಧುನಿಕ ರೂಪಗಳೇ ಬೋಗೋಣಿ, ಸ್ಟಿಲ್‌ಬುಟ್ಟಿ, ಸತಾಲ, ಹಾಲಿನ ಕೊಳಗ, ಹೂ-ಪತ್ರಿ ಬುಟ್ಟಿಗಳೆಂದು ತೌಲನಿಕವಾಗಿ ಉದಾಹರಣೆಗೆಗಳಿಂದ ಪರಿಚಯಿಸಿರುವುದು ಶ್ಲಾಘನೀಯ.

'ಜೋಳದ ಪಯಿರು ಹೊಡೆ ಹಾಯ್ದು ಹೊಂದಲ ದೂಗೆ
ಅಕ್ಕಡಿಯ ಕಾಳುಗಳು ಹುಲುಸಾಗಿರೆ
ಬನ್ನಿಗಿಡದಡಿಯಲ್ಲಿ ತತ್ರಾಣ್ಗೆ ತನ್ನೀರ
ಕುಡಿದು ಬುತ್ತಿಯನ್ನುಂಡ ಸೊಂಪಾಗಿದೆ'[೪]

ಎನ್ನುವಲ್ಲಿ 'ತತ್ರಾಣ್ಗಿ'ಯು ನಮ್ಮ ರೈತಾಪಿ ಜನಪದರ ತಂಪು ನೀರಿನ 'ಫ್ರೀಡ್ಜ್' ಆಮೆಯ ಡುಬ್ಬದಾಕಾರದಂತೆ, ಎರಡೂ ಬದಿಗೆ ಮೈಯನ್ನು ಹೊಂದಿದ ಮತ್ತು ನೆತ್ತಿಯ ಭಾಗದಲ್ಲಿ ಒಂದಿಂಚಿನ ಅಗಲದ ಬಾಯಿವುಳ್ಳ ಇದಕ್ಕೆ ಒಂದುವರೆ ಇಂಚು ಎತ್ತರದ ಕುತ್ತಿಗೆ ಇರುವುದೆಂದು ಹೇಳಿ, ರೈತರು ಇದನ್ನು ನೀರು ತುಂಬಿಕೊಂಡು ಹೊಲಗಳಿಗೆ ಒಯ್ಯಲು ಅನುಕೂಲವಿತ್ತೆಂದು ಭೂತಕಾಲವನ್ನು ನೆನೆಯುತ್ತಾರೆ.

ವಾಟರ ಬ್ಯಾಗ್, ಹಾಲಿನ ಕ್ಯಾನ್, ನೀರಿನ ಕ್ಯಾನ್, ಎಣ್ಣೆ ಕ್ಯಾನಗಳೇ ಅಂದಿನ ತತ್ರಾಣ್ಗಿಗಳ ಇಂದಿನ ನಕಲು ರೂಪಗಳೆಂದು ಸಾಮ್ಯತೆಯನ್ನು ಹೇಳಿದ್ದಾರೆ.

ನಲವತ್ತು-ಐವತ್ತು ವರ್ಷಗಳ ಹಿಂದೆ ಗ್ರಾಮೀಣ ಬಡವ-ಬಲ್ಲಿದರ ಮನೆಯಲ್ಲಿ ಪರ್ಯಾಣ, ಮುಚ್ಛಾ, ಹರವಿ, ಬಿಂದ್ಗಿ ಮಗಿ, ಪಣತಿ, ಕುಡಕಿ, ಹಾಲಾಸ್ವಾರಿ, ಕಡ್ಡತ್ಕಲ್ಲ, ಕ್ವಮ್ಮನಗಿಗಳು ಮತ್ತು ಮಣ್ಣಿನಿಂದ ಮಾಡಿದ ಪಾತ್ರೆ-ಪಗಡೆಗಳಿರುತ್ತಿದ್ದವು. ಕುಂಬಾರರು ಹದ ಮಾಡಿದ ವಿಶೇಷ ಮಣ್ಣಿನಿಂದ ತಯಾರಿಸಿ ಆಂವಿಗೆಯಲ್ಲಿ ಸುಟ್ಟು ಮಾರುತ್ತಿದ್ದರು ಎಂದು ತಿಳಿಸುತ್ತ ಇಂದಿನ ಕಂಚಿನ ಗಂಗಾಳ, ಹಿತ್ತಾಳೆ ತಾಟು, ಕೋಪರ ಪರಾಸ್

ತಾಟು ಇವುಗಳ ಮೂಲ ತಾಯಿ 'ಪರ್ಯಾಣ' ಎಂದು ವಿವರಣೆ ನೀಡುತ್ತಾರೆ. ಜಾನಪದ ಹಾಡಿನ ಕುಂಬಾರಣ್ಣ ಈಗ 'ನೆನಪು' ಮಾತ್ರವೆಂದು ಖೇದ ವ್ಯಕ್ತಪಡಿಸುತ್ತಾರೆ.

೩) ಸುಗ್ಗಿ – ರಾಶಿ :

ಗ್ರಾಮೀಣ ಜನಪದರು ಪಾಲ್ಗುಣ ಶುದ್ಧ ದಶಮಿಯಂದು ಹಿಗ್ಗಿನಿಂದ ಸುಗ್ಗಿಯ ಕುಣಿತ ಆರಂಭಿಸಿ ಹೋಳಿ ಹುಣ್ಣಿಮೆ ದಿನ ಕುಣಿತವನ್ನು ಕೊನೆಗೊಳಿಸಿ ಹುಗ್ಗಿಯನ್ನುಂಡು ಹರ್ಷಿತರಾಗಿ ಕೃಷಿ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗುತ್ತಿದ್ದರೆಂಬ ವಿಷಯವನ್ನು ದಿವಾಣರು ಅನೇಕ ಸ್ವಾರಸ್ಯ ಘಟನೆಗಳಿಂದ ಕಲೆಹಾಕಿ ಹೇಳಿರುವುದು ನಿಜಕ್ಕೂ ಸ್ತುತ್ಯಾರ್ಹ!

'ಕವಣೀಯ ಕಲ್ಲ ಬೀಸ್ಯಾಡು ನಲ್ಲ
ಕುಡ್ಯಾವ ಹಕ್ಕಿ ಎಲ್ಲ
ಕುಂತಾವ ಹಕ್ಕಿ, ತಿಂತಾವ ಹೆಕ್ಕಿ
ಬಿಳಿಜ್ವಾಳ ತೆನಿಯ ಕುಕ್ಕಿ'[೫]

ಎನ್ನುವ ಪದ್ಯದ ಸಾಲುಗಳಿಂದ ಸುಗ್ಗಿಯ ಸನ್ನಿಹಿತ ಕಾಲವನ್ನು ದಿವಾಣರು ಕಣ್ಮುಂದೆ ತರುತ್ತಾರೆ.

ಗ್ರಾಮೀಣರಿಗೆ ಸುಗ್ಗಿ ಕಾಲವೆಂದರೆ ಎಲ್ಲಿಲ್ಲದ ಹಿಗ್ಗಾಗಿತ್ತು. ತಂತ್ರಜ್ಞಾನದ ಪರಿಚಯವೇ ಇಲ್ಲದ ಆ ದಿನಗಳಲ್ಲಿ ಎಲ್ಲವು ಮಾನವ ಶಕ್ತಿಯಿಂದಲೇ ನಡೆಯಬೇಕಿತ್ತು. ಹೀಗಾಗಿ ರೈತರಿಗೆ ಬಿಡುವಿಲ್ಲದ ವೇಳೆ ಇದಾಗಿತ್ತು. ಈಂತಹ ವೇಳೆಯನ್ನು ಬೇಸರಿಸದೇ ಮೈ ಮುರಿದು ಇಷ್ಟಪಟ್ಟು ದುಡಿಯುತ್ತಿದ್ದ ಕಷ್ಟ ಜೀವಿಗಳು ನಮ್ಮ ಗ್ರಾಮೀಣ ಜನಪದರೆಂದು ತಿಳಿಸುವ ದಿವಾಣರು ಜೋಳ ಕೀಳುವುದು, ಕೊಯ್ಯುವುದು, ತೆನೆ ಮುರಿಯುವುದು, ಹಂತಿ ಹೊಡೆಯುವುದು, ಕಣಿಕೆ ತರುವುದು, ಬಣಿವೆ ಒಟ್ಟುವುದು, ಬಂಡಿ ಎಳೆಯುವ ಸಾಹಸ ಪ್ರವೃತ್ತಿಯುಳ್ಳವರಾಗಿದ್ದರು ಎನ್ನುವುದಕ್ಕೆ –

'ಸೋಸಿ ಉಕ್ಕವ ತಂದು, ಚಾಕಿನ ಕುಡ್ಗೋಲ ಮಾಡ್ಸಿ
ಜೂಜ್ಯಾಡಿ ಜ್ವಾಳಾ ಕೊಯ್ದಾನ । ನಮ್ಮ ರೈತ
ಸೂಡ ತಿರದಾನ ಮೆದಿಯ ಒಗದಾನ'[೬]

ಎಂದು ಪದ್ಯವನ್ನು ಉದಾಹರಣೆಯಾಗಿ ನೀಡುತ್ತಾರೆ.

'ಪೆಂಡಿಯ ಕಟ್ಟ್ಯಾರ, ಮುಂಡೀಲೆ ಹೊತ್ತಾರ
ಗುಂಡಾಗಿ ಗೂಡ ಹಾಕ್ಯಾರ । ರೈತರು
ಗೂಡಿಗೆ ಪೂಜೆ ಮಾಡ್ಯಾರ'[೭]

ಎನ್ನುವಲ್ಲಿ ಜಾನಪದರು ತಮ್ಮ ಬದುಕಿನ ಆಸ್ತಿಗಳಾಗಿ ಜೀವಕ್ಕೆ ಜೀವಗಳಾಗಿ ಪ್ರೀತಿಸುವ

ದನಕರುಗಳಿಗೆ ವರ್ಷವೀಡಿ ಬೇಕಾಗುವಷ್ಟು ಮೇವನ್ನು 'ಸುಗ್ಗಿ-ರಾಶಿ' ಕಾಲದಲ್ಲಿ ಸಂಗ್ರಹಿಸಿಡುವ 'ಬಣಿವೆ' ಒಟ್ಟುವ ಬಗೆಯನ್ನು ಕಾಣಬಹುದೆಂದು ದಿವಾಣರು ಹೇಳಿದ್ದಾರೆ.

ಬೆಳೆಯನ್ನು ಕೊಯ್ದು ಒಟ್ಟು ಮಾಡಿ ಇಡುವುದನ್ನು 'ಸೂಡು', 'ಮೆದಿ', 'ಪೆಂಡಿ', 'ಗೂಡು', 'ಜಾಪ', 'ತೆನಿಗಣಕಿ', 'ಮಂಡಗಣಿಕೆ' ಹೆಸರುಗಳಿಂದ ವಿಶ್ಲೇಷಿಸುತ್ತ ರಾಶಿಯಾದ ಬಳಿಕ ಉಳಿಯುವ 'ಸುಂಕ', 'ಹೊಟ್ಟು', 'ಗ್ವಾರಿ', 'ಕಂಕಿ', 'ಇಕ್ಲಿ', 'ಹಕ್ಲ'ಗಳ ಬಗ್ಗೆ ಸವಿವರವಾಗಿ ಹೇಳುವ ಪ್ರತಿಯೊಂದಕ್ಕೂ ವ್ಯಾಖ್ಯಾನವನ್ನು ನೀಡುವ ದಿವಾಣರ ಜಾನಪದ ಜ್ಞಾನ ನಿಜಕ್ಕೂ ಅದ್ಭುತವಾಗಿದೆ.

ಹಿಂದಿನ ಕಾಲದ ಜನಪದರು ಬಹುತೇಕ ಆಸ್ತಿಕತೆಯಲ್ಲಿ ನಂಬಿಗೆಯಿಟ್ಟು, ದೇವರು, ಧರ್ಮ, ಒಳ್ಳೆಯ ಘಳಿಗೆ, ಕೆಟ್ಟ ಘಳಿಗೆ ಇವುಗಳನ್ನೆಲ್ಲ ನಂಬುತ್ತಿದ್ದರು. ಹಾಗೆಯೇ ತಾವು ಮಾಡುವ ಪ್ರತಿಯೊಂದು ಕೆಲಸಕ್ಕೆ 'ಪಂಚಾಂಗ'ವನ್ನು ಆಶ್ರಯಿಸಿ ಬೆಳೆ ಕೊಯ್ಯಲು, ಖಣ ಮಾಡಲು, ಗೂಡು ಒಟ್ಟಲು, ದವಸಧಾನ್ಯಗಳನ್ನು ಮನೆಗೆ ಒಯ್ಯಲು, ಹಗೆಯಲ್ಲಿ ಕಾಳು ಸಂಗ್ರಹಿಸಲು, ಕುಳ್ಳು (ಭರಣಿ) ಒಟ್ಟಲು ಹೀಗೆ ಅನೇಕ ಕೆಲಸಗಳನ್ನು ಪಂಚಾಂಗದಿಂದಲೇ ನಿರ್ವಹಿಸಿಕೊಳ್ಳುತ್ತಿದ್ದರೆಂದು ಹೇಳುತ್ತ –

'ಪಂಚಾಂಗ ತಗಸ್ತಾನ, ಗೂಡ ಪೂಜೆ ಮಾಡ್ತಾನ
ಊರ ಮುತ್ತೈದ್ಯಾರ ಕರಸಂದಾನ । ಗರ್ದೀಲೇ
ಗೂಡ ಮುರ್ಸಂದಾನ'[೮]

ಎನ್ನುವ ಈ ಪದ್ಯ ಮೇಲಿನ ಹೇಳಿಕೆಗಳಿಗೆ ಸಾಕ್ಷಿಯೆಂದು ದಿವಾಣರು ಅಭಿಪ್ರಾಯಪಟ್ಟಿದ್ದಾರೆ.

ಹೀಗಿದ್ದ ನಮ್ಮ ಸುಗ್ಗಿ-ರಾಶಿ ಸಂಸ್ಕೃತಿಯು ಇಂದು 'ಖಣ' ಮಾಡದೇ ಡಾಂಬರ ರಸ್ತೆಗಳ ಮೇಲೆಯೋ ಅಥವಾ ಮಶೀನ್‌ಗಳಲ್ಲಿಯೋ 'ಅರ್ಧ ನೆಲಕ್ಕೆ; ಅರ್ಧ ಚೀಲಕ್ಕೆ' ಎನ್ನುವಂತೆ ರಾಶಿ-ಸುಗ್ಗಿಗಳನ್ನು ಗೈಯುವ ಜನರನ್ನು ಕಂಡು ಕಿಡಿಕಾರುತ್ತಾರೆ.

೪) ಜಾನಪದ ಹಬ್ಬ ಮತ್ತು ಆಟಗಳು :

ಹಬ್ಬ-ಜಾತ್ರೆಗಳು ಸಾಮಾನ್ಯವಾಗಿ ನಂಬಿಕೆಯ ಆಧಾರದ ಮೇಲೆ ನೆಲೆಗೊಂಡ ಸಾಂಪ್ರದಾಯಿಕ ಆಚರಣೆಗಳು. ಇವೆಲ್ಲ ದಿಢೀರ ಹುಟ್ಟು ಪಡೆಯದೇ ಮನುಷ್ಯನ ಭೌಗೋಳಿಕ, ಸಾಮಾಜಿಕ ಹಿನ್ನೆಲೆಯಲ್ಲಿ ನೆಲೆಗೊಂಡ ಜಾನಪದ ಸಂಪ್ರದಾಯಗಳು. ಈ ಜನಪದ ಸಂಸ್ಕೃತಿ ಬದಲಾಗುತ್ತಿರುವ ಸಾಮಾಜಿಕ ಹಿನ್ನೆಲೆಯಲ್ಲಿ ಕಾಲ-ಸಂದರ್ಭಗಳಿಗೆ ಅನುಗುಣವಾಗಿ ಅರ್ಥಪೂರ್ಣವಾದ ಮೌಲ್ಯಗಳನ್ನು ಪಡೆದುಕೊಂಡಿರುತ್ತವೆ. ಹೀಗೆ ಆಚರಣೆಗಳಲ್ಲಿದ್ದ ಎಷ್ಟೋ ಹಬ್ಬ-ಜಾತ್ರೆಗಳು ಬದಲಾದ ರಾಜಕೀಯ, ಸಾಮಾಜಿಕ ಜೀವ ಮೌಲ್ಯಗಳ ಹೊಡೆತಕ್ಕೆ ಸಿಕ್ಕು ತಮ್ಮ ವೈಶಿಷ್ಟ್ಯವನ್ನು ಕಳೆದುಕೊಂಡಿವೆ. ಕೆಲವಂತೂ ಹೇಳ ಹೆಸರಿಲ್ಲದಂತಾಗಿದೆ ಎನ್ನಬಹುದು.[೯]

ನಮ್ಮ ಗ್ರಾಮೀಣ ಜನಪದರು ಆಚರಿಸುತ್ತಿದ್ದ ಹಬ್ಬಗಳಿಗೆ ವೈಜ್ಞಾನಿಕ ಕಾರಣಗಳಿದ್ದು ಅವು ಮೂಲ ನಂಬಿಕೆಗಳಿಂದ ಕೂಡಿದ್ದವು. ಆದರೆ ಇಂದು ನಾವು ಅವುಗಳನ್ನು ಮೂಢ ನಂಬಿಕೆಗಳಾಗಿ ಮಾರ್ಪಡಿಸಿ ಅಜ್ಞಾನಿಗಳಂತೆ ವರ್ತಿಸುತ್ತ ಅವುಗಳ ಮೌಲ್ಯಗಳಿಗೆ ಅಪಚಾರ ಮಾಡುತ್ತಿರುವುದನ್ನು ಖಂಡಿಸುವ ದಿವಾಣರು ಪ್ರತಿಯೊಂದು ಹಬ್ಬಕ್ಕೆ ವೈಜ್ಞಾನಿಕ ವಿಶ್ಲೇಷಣೆಯನ್ನು ನೀಡಿರುವುದು ಗಮನಾರ್ಹ.

'ಕಾರಹುಣ್ಣಿಮೆ ಕರಕೊಂಡ ಬಂತು; ಉಗಾದಿ ಉಡಕೊಂಡ ಹೊಯ್ತು' ಎಂದು ಹೇಳುತ್ತ ಕಾರಹುಣ್ಣಿಮೆಯಿಂದಲೇ ನಮ್ಮ ಹಬ್ಬಗಳು ಪ್ರಾರಂಭಗೊಂಡು ಬಹುತೇಕ ಹಬ್ಬಗಳು 'ಮಣ್ಣನ್ನು' ಪೂಜಿಸುವವುಗಳಾಗಿವೆ. ಈ ನೆಲದಲ್ಲಿ ಆಚರಿಸುವ ಹಬ್ಬಗಳ ಮೂಲವೇ ಮಣ್ಣು. ಮಣ್ಣ ಪೂಜೆಗೇ ಅಗ್ರಸ್ಥಾನ ಎಂದೆಂಬುದನ್ನು ಹೇಳುತ್ತ ವೈಜ್ಞಾನಿಕ ಪರೀಧಿಯಲ್ಲಿ ಹಬ್ಬಗಳನ್ನು ವಿಶ್ಲೇಷಿಸುತ್ತಾರೆ.

ಇಡೀ ಸಕಲ ಜೀವರಾಶಿಗಳಿಗೆ ಅನ್ನ ನೀರು ಆಶ್ರಯವನ್ನಿತ್ತು ಸಲಹುವ ಈ ಭೂಮಾತೆಯ ಮಹತ್ವವನ್ನು ನಮ್ಮ ಜನಪದರು ಚೆನ್ನಾಗಿ ಅರಿತು ಮನುಷ್ಯ ಏನೇ ಪಡೆದುಕೊಂಡರೂ ಅದು ಈ ಮಣ್ಣಿನಿಂದ ವಿನಹಃ ಬ್ರಹ್ಮ ಸೃಷ್ಟಿಯಲ್ಲವೆಂಬ ಸತ್ಯವನ್ನರಿತಿದ್ದರು. ಹೀಗಾಗಿ ಜನಪದರು ಈ ಭೂ ತಾಯಿಯನ್ನೇ (ಮಣ್ಣನ್ನೇ) ಪೂಜಿಸಲು ಪ್ರಾರಂಭಿಸಿದ್ದುದು ಹಾಗೂ ಅದಕ್ಕಾಗಿ ಬಹುತೇಕ ಹಬ್ಬಗಳಲ್ಲೂ ಈ ಮಣ್ಣಿಗೆ (ಭೂಮಿಗೆ) ಮೊದಲ ಪ್ರಾಶಸ್ತ್ಯ ನೀಡಿರುವುದನ್ನು ನೋಡಿದಾಗ ಅವರಿಗಿದ್ದ ಪ್ರಕೃತಿ ಪ್ರೇಮ, ನಿಸರ್ಗದ ಬಗೆಗಿನ ವಿಶೇಷ ಕಾಳಜಿಯು ಎದ್ದು ಕಾಣುತ್ತದೆಂದು ದಿವಾಣರು ಹೇಳುತ್ತಾರೆ. ಕಾರಹುಣ್ಣಿಮೆಗೆ 'ಮಣ್ಣಿನ ಎತ್ತು–ಹೋರಿಗಳನ್ನು', ಪಂಚಮಿಗೆ 'ಮಣ್ಣಿನ ನಾಗಪ್ಪ', 'ಗುಳ್ಳವ್ವನನ್ನು', ಚವತಿಗೆ 'ಮಣ್ಣಿನ ಗಣೇಶನನ್ನು', 'ಜೋಕುಮಾರನನ್ನು', ನವರಾತ್ರಿಯಲ್ಲಿ ಹಾಕುವ 'ಮಣ್ಣು ಕೋಟೆಗಳು' ಇತ್ಯಾದಿಗಳನ್ನೆಲ್ಲ ನೋಡಿದಾಗ ನಮ್ಮ ಬಹುತೇಕ ಹಬ್ಬಗಳಲ್ಲೆಲ್ಲಾ ಮಣ್ಣೇ ಅಗ್ರಸ್ಥಾನ ಪಡೆದುಕೊಂಡಿರುವುದನ್ನು ನಾವು ಕಾಣಬಹುದೆಂದು ತಮ್ಮ ನಿಲುವಿಗೆ ಸತ್ಯವನ್ನು ಎತ್ತಿ ತೋರಿಸಿ ದೃಢಪಡಿಸುತ್ತಾರೆ.

ರೈತರ ಜೀವಾಳಗಳಾದ ದನ–ಕರುಗಳು ಅದರಲ್ಲೂ ಎತ್ತು–ಹೋರಿಗಳನ್ನು ನಾವು ಆರಾಧನಾ ದೃಷ್ಟಿಯಿಂದ ಕಾಣಬೇಕೆಂಬುದನ್ನು ಗ್ರಾಮೀಣ ಜನಪದರು ಕಾರಹುಣ್ಣಿಮೆಯಲ್ಲಿ ಎತ್ತು–ಹೋರಿಗಳನ್ನೇ ಪೂಜಿಸಲು ಪ್ರಾರಂಭಿಸಿದರು. ಹಾಗೆಯೇ ರೈತನ ಹೊಲದಲ್ಲಿನ ಕ್ರೀಮಿ–ಕೀಟಕ, ಇಲಿ–ಹೆಗ್ಗಣಗಳನ್ನು ತಿಂದು ರೈತನ ಮಿತ್ರನೆಂದು ಕರೆಯಿಸಿಕೊಳ್ಳುವ 'ಹಾವು'ಗಳನ್ನು ನಾವು ದಯೆಯಿಂದ ಕಾಣಬೇಕೆಂಬ ಉದ್ದೇಶದಿಂದ ಪಂಚಮಿಯಲ್ಲಿ 'ನಾಗಪ್ಪ'ನ ಪೂಜೆಯನ್ನು ಗ್ರಾಮೀಣರು ಕೈಗೊಂಡರೆಂದು ವೈಜ್ಞಾನಿಕ ಹಿನ್ನೆಲೆಯನ್ನು ದಿವಾಣರು ಉಸುರುತ್ತಾರೆ.

ಈ ಹಬ್ಬಗಳಿಗೆ ಪೂರಕ ಶಕ್ತಿಯಾಗಿ ಕುಂಬಾರರು, ಕಂಬಾರರು, ಬಡಿಗೇರ, ಪಾಂಚಾಳರು, ಶಿಲ್ಪಿಗಳು, ತಳವಾರರು, ಜಮೀನದಾರರು, ಬಾಬದಾರರು ಮುಂತಾದವರ ಮೇಳೈಸುವಿಕೆಯಲ್ಲಿಯೇ ನಮ್ಮ ಹಬ್ಬಗಳು ರೂಪಿತಗೊಂಡಿವೆ ಎಂಬ ದಿವಾಣರ ಮಾತು ಒಪ್ಪಲರ್ಹವಾದುದು.

ಹಾಗೆಯೇ ಗ್ರಾಮೀಣ ಆಟಗಳಲ್ಲಿ ವೈವಿಧ್ಯಮಯ ವೈಶಿಷ್ಟ್ಯಗಳಿದ್ದು ಇವು ಸಾಂಸ್ಕೃತಿಕ ಪರಂಪರೆಯ ಜೀವಾಳವಾಗಿವೆ. ಮಗು ಮನುಷ್ಯನಾಗಲು, ವ್ಯಕ್ತಿತ್ವ ರೂಪಿಸಿಕೊಳ್ಳಲು ಗ್ರಾಮೀಣ ಜನಪದರ ಆಟಗಳು ಸಹಾಯಕಾರಿಯಾಗುತ್ತವೆಂಬುದನ್ನು ದಿವಾಣರು ಸ್ಪಷ್ಟವಾಗಿ ಹೇಳುತ್ತಾರೆ. ಹೊಟ್ಟೆ-ನೆತ್ತಿಯ ಹಸಿವನ್ನು ಉದ್ರೇಕಿಸುವ ಸಂವಹನವಾಗಿ ಆಟಗಳು ಪ್ರತಿ ವ್ಯಕ್ತಿಯ ಬಾಲ್ಯದಲ್ಲಿ ಮಹತ್ವದ ಘಟ್ಟವನ್ನು ಕಲ್ಪಿಸಿಕೊಟ್ಟದ್ದನ್ನು ಮರೆಯಲಾಗದೆಂದು ಹೇಳುತ್ತ ಗ್ರಾಮೀಣ ಕ್ರೀಡೆಗಳಲ್ಲಿ ನಮ್ಮ ಈ ನೆಲದ ಸಂಸ್ಕೃತಿಯನ್ನೂ ಕೂಡ ಕಾಣಬಹುದೆಂದು ತಿಳಿಸುವ ದಿವಾಣರು 'ಕ್ರೀಡೆಗಳ ಸಹವಾಸವಿಲ್ಲದ ವ್ಯಕ್ತಿಯ ಶರೀರ ಕೀಟ ತಿಂದ ಹಣ್ಣಿನಂತೆ' ಎನ್ನುವ ಅವರ ಮಾತುಗಳು ಕ್ರೀಡೆಗಳ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಕಣ್ಣುಮುಚ್ಚಿಗೆ, ಅಂಡ್ಯಾಳ, ಮನಿಪತ್ತಾ, ಜಿಪ್ಪ, ಸಕ್ಕಾಸರಗಿ, ಬಳಚೂರ ಆಟ, ಕಡ್ಡಿ ಆಟ, ಗುಬ್ಬಿಮನಿ, ಗೊಂಬಿ ಮದುವೆ, ಚಿಕ್ಕಮನಿ, ಕುಂಟಾಟ, ಮುಟ್ಟಾಟ, ಕಂಬ-ಕಂಬಾಟ, ದಪ್ಪಾದುಪ್ಪಿ, ಹತ್ತೋಂಬಳ್ಳಾ ಹಲಗಿ, ಒಡ್ಡಾ, ಕೈಕೈ ಎಲ್ಲಿಹ್ವಾದು ಈ ಎಲ್ಲ ಆಟಗಳು ಬಾಲಕಿಯರದ್ದು ಹಾಗೂ ಬಾಲಕರಿಗಾಗಿ ಲಿಂಗಾವಟ್ಟಿ, ಸರಬಡಗಿ, ಬಗರಿ, ಲಗೋರಿ, ಹುಡುತತ್ತು, ಚಿಣಿ-ಫಣಿ, ಸೆರಗೆರಿ, ಗಜಗ, ಮಾವಿನಗೊಟ್ಟ, ಭಾಪಾ, ಗಾಳಿವರ, ಹಂಚಿಬಿಲ್ಲ, ಗಿರಿಗಿಟ್ಟಿ, ಎಲ್ಲಿಗೆ ಬಂತೋ ಸಂಗಯ್ಯ, ಬೋಲ್‌ಬಗರಿ, ಬಿಸ್ಲಾನೆಳ್ಳ, ಕುಸ್ತಿ, ಗಿಡಮಂಗ್ಯಾ, ಲಂಗಡಿ ಇವೆಲ್ಲ ಅಚ್ಚ ಈ ನೆಲದಲ್ಲಿಯೇ ಹುಟ್ಟಿಕೊಂಡ ದೇಶಿ ಆಟಗಳೆಂದು ಹಾಗೂ ಯಾವುದೇ ಖರ್ಚು-ವೆಚ್ಚವಿಲ್ಲದ, ಸಂಸ್ಕೃತಿಯ ಪ್ರತೀಕಗಳೆಂದು ದಿವಾಣರು ಈ ಎಲ್ಲ ಆಟಗಳನ್ನಾಡುವ ಕ್ರಮಪದ್ಧತಿಗಳನ್ನು ಸಾರಾವತ್ತಾಗಿ ಕಣ್ಣಿಗೆ ಕಟ್ಟುವಂತೆ ವಿವರಣೆ ನೀಡಿದ್ದಾರೆ.

ನಮ್ಮ ಗ್ರಾಮೀಣ ಜನಪದರು ಶಾಲೆ ಕಲಿತವರಲ್ಲ. ಆದರೂ ಲೆಕ್ಕದಲ್ಲಿ ಅತಿಯಾದ ಪರಿಣಿತರು. ಏಕೆಂದರೆ ಅವರು ಬಾಲ್ಯದಿಂದಲೂ ಆಡುತ್ತಿದ್ದ ಆಟಗಳ ಪ್ರಭಾವ ಮತ್ತು ಪರಿಣಾಮವೇ ಕಾರಣ ಎಂದೆನ್ನುವ ದಿವಾಣರು –

'ಏಕಪಾವ
ದೋಕಾಬೆಟ್ಟಿ
ಮುರಾ ಮುಟ್ಟಿ

ಚರಕೆಗೌಡ

ಪದಕಾ ಪುಚ್ಚಿ

ಸೇಕಿಂಡೊಳ

ಝುಲ್ಲ್"[೧೦]

ಭಾಷಾ ಸಂಪತ್ತು, ಏಣಿಕಾ ಕ್ರಮ, ಉಚ್ಚಾರ ಸಾಮರ್ಥ್ಯ, ನೆನಪಿನ ಸಕಾಲಿಕ ವರ್ಣನೆಗಳೆಲ್ಲವೂ ಗ್ರಾಮೀಣರ ಆಟಗಳಲ್ಲಿ ಹಾಸು ಹೊಕ್ಕಾಗಿದ್ದವು. ಹೀಗಾಗಿ ನಮ್ಮ ಗ್ರಾಮೀಣ ಜನಪದರು ಇಂದಿಗೂ ಬಾಯ್ಲೆಕ್ಕದಲ್ಲಿಯೇ ಕೋಟಿ–ಕೋಟಿಗಟ್ಟಲೆ ವ್ಯವಹಾರವನ್ನು ನಡೆಸುವುದನ್ನು ಕಂಡಾಗ ಇಂದಿನ ನಾವೆಲ್ಲಿ? ನಮ್ಮಯ ಕ್ಯಾಲ್ಕ್ಯುಲೇಟರ್‌ಗಳೆಲ್ಲಿ? ಎಂದು ದಿವಾಣರು ಅಚ್ಚರಿ ವ್ಯಕ್ತಪಡಿಸುತ್ತಾರೆ.

ಕ್ರಮಬದ್ಧ ಕೇಳುವಿಕೆ, ಮಾತನಾಡುವಿಕೆ, ಸಂವಾದ ಕಲೆಯನ್ನು ಪ್ರಶ್ನೋತ್ತರ ಕೌಶಲ್ಯತಾ ತಂತ್ರಕ್ಕಾಗಿ ಮಾತನ್ನಾಡುವ ಚಾಣಾಕ್ಷತನಕ್ಕೆ ಮತ್ತು ತಂತ್ರಕ್ಕೆ ಜನಪದರ ಅನೇಕ ಕಥೆಯಾಟಗಳನ್ನು ದಿವಾಣರು ಹೆಸರಿಸುತ್ತಾ ಅದರಲ್ಲಿ –

ಕಥಿ, ಕಥಿ ಕಾರಣ, ಮುದುಕಿ ಹೂರಣ ತಿಂದ್ಯೋ ತಿಪ್ಪಗಿ ಚೆಲ್ಲಿದ್ಯೋ, ತಿಪ್ಪಿಗಿ ಚೆಲ್ಲಿದ್ನಿ.

ಕೈಕೈ ಎಲ್ಲಿ ಹ್ವಾದು	?	**ಕರದಾಗ ಹ್ವಾದು.........**
ಕದಾ ಎನ್ ಕೊಟ್ತು	?	**ಕಸ ಕೊಟ್ಟಿತು.........**
ಕಸಾ ಎನ್ಮಾಡ್ದಿ	?	**ತಿಪ್ಪಿಗಿ ಚೆಲ್ಲಿದ್ನು.........**
ತಿಪ್ಪಿ ಎನ್ ಕೊಟ್ತು	?	**ಗೊಬ್ರಾ ಕೊಟ್ತು.........**
ಗೊಬ್ರಾ ಏನ್ಮಾಡ್ದಿ	?	**ಹೊಲಕ್ಕ ಹಾಕ್ನಿ.........**
ಹೊಲಾ ಏನ್ ಕೊಟ್ತು	?	**ಜ್ವಾಳಾ ಕೊಟ್ತು.........**
ಜೋಳ ಏನ್ಮಾಡ್ದಿ	?	**ಕುಂಬಾರ್ಗ ಕೊಟ್ನು.........**
ಕುಂಬಾರ ಏನ್ಕೊಟ್ಟ	?	**ಗಡಿಗೆ ಕೊಟ್ಟ.........**
ಗಡಿಗಿಲೇ ಏನ್ಮಾಡ್ದಿ	?	**ಹೂವಿನ ಗಿಡಕ ನೀರ ಹಾಕಿನ.........**
ಗಿಡಾ ಏನ್ಕೊಟ್ತು	?	**'ಹೂ' ಕೊಟ್ತು.........**
ಹೂ ಏನ್ಮಾಡ್ದಿ	?	**ದೇವರ್ಗೆ ಹಾಕಿನು.........**
ದೇವರೇನ್ಕೊಟ್ಟ	?	**ಗಂಟಿ ಕೊಟ್ಟ.........**
ಗಂಟಿ ಏನ್ಮಾಡ್ದಿ	?	**ಆಕ್ಳ ಕೊಳ್ಳಾಗ ಕಟ್ಟಿನು.........**
ಆಕಳೇನ ಕೊಟ್ತು	?	**ಹಾಲ ಕೊಟ್ತು.........**
ಹಾಲ ಏನ್ಮಾಡ್ದಿ	?	**ಆಯಿಗಿ ಕೊಟ್ನು.........**
ಆಯೇನ ಕೊಟ್ಳು	?	**ತುಪ್ಪಾ, ರೊಟ್ಟಿ ಕೊಟ್ಳು.........**
ತುಪ್ಪಾ ರೊಟ್ಟಿ ಏನ್ಮಾಡ್ದಿ	?	**ಮಾಳ್ಗಿ ಮ್ಯಾಲ ಕುಂತ ತಿಂದಿನು.........**[೧೧]

ಹೀಗೆ ಸಾಗುವ ಈ ಗ್ರಾಮೀಣರ ಮೌಖಿನ ಹಾಗೂ ಅನೇಕ ತರಹದ ದೈಹಿಕ ಶ್ರಮದಾಟಗಳು ಇಂದು ಇತಿಹಾಸದ ಪುಟ ಸೇರಿ ಮರೆಯಾಗುತ್ತಿವೆ ಎಂದು ದಿವಾಣರು ವಿಶಾದ ವ್ಯಕ್ತಪಡಿಸುತ್ತಾರೆ.

೫) 'ಜಾನಪದ ಅಳತೆ ಮತ್ತು ತೂಕಗಳು' :

ನಮ್ಮ ಗ್ರಾಮೀಣ ಜನಪದರು ಚೀಲನ್ನು ಎತ್ತಿ ಹಿಡಿದೋ, ಇಲ್ಲ ಅದರ ಬಳಿ ಹೋಗಿ ಗಂಟುಕಟ್ಟಿದ ಆಕಾರದಿಂದಲೋ ಹೀಗೆ ತಮ್ಮದೇ ಆದ ದೃಷ್ಟಿಕೋನದಿಂದ 'ಇದಿಷ್ಟೇ ಭಾರವಿದೆ' ಎಂದು ಹೇಳುವ ಜಾಣರು....! ಕಣ್ಣಲ್ಲೇ ಅಳೆದು ಲೆಕ್ಕ ಹಾಕೋ ಚಾಣಾಕ್ಷ ಪಂಡಿತರು.....! ಅವರ ಅಳತೆ–ತೂಕಗಳು ಇಂದಿನ ಪ್ರಪಂಚಕ್ಕೆ ವಿಸ್ಮಯವನ್ನು ಮೂಡಿಸ ಬಲ್ಲವು ಎಂಬುದನ್ನು ಉದಾಹರಣೆಗಳನ್ನು ನೀಡಿ ದಿವಾಣರು ಎತ್ತಿ ತೋರಿಸಿದ್ದಾರೆ.

ಜನಪದರು ಬಳಸುತ್ತಿದ್ದ 'ಚೋಟಿ', 'ಗೇಣು', 'ನಾಬಳ್ಳ', 'ಮುಷ್ಠಿ', 'ಮೊಳ' ಇತ್ಯಾದಿಗಳೆಲ್ಲವನ್ನು ಸಂಪಾದಿಸಿ ವಿಶ್ಲೇಷಣೆಯನ್ನು, ವಿವರಣೆಯನ್ನು ನೀಡಿದ್ದಾರೆ.

* **ಚೋಟಿ** = ಹೆಬ್ಬೆರಳು ಮತ್ತು ತೋರು ಬೆರಳುಗಳ ಹಿಗ್ಗಿಸುವಿಕೆಯು, ಚೋಟು.
* **ಗೇಣು** = ಹೆಬ್ಬೆರಳು ಮತ್ತು ಕಿರು ಬೆರಳು ಹಿಗ್ಗಿದ ಅಳತೆ ಗೇಣು. (೯ ಇಂಚು)
* **ನಾಬಳ್ಳ** = ೪ ಬೆರಳು ನೆಟ್ಟಗಿನ ಅವಸ್ಥೆಯಲ್ಲಿ ತೋರು ಬೆರಳಿನಿಂದ ಕಿರು ಬೆರಳಿನವರೆಗಿನ ಅಳತೆಯು ನಾಬಳ್ಳ.
* **ಮುಷ್ಠಿ** = ಬೆರಳುಗಳನ್ನು ಮಡಚಿ ಮುಷ್ಠಿ ಮಾಡಿ ಹೆಬ್ಬೆರಳು ತುದಿಯಿಂದ ಕಿರು ಬೆರಳು ಬೊಡ್ಡಿಯವರೆಗಿನ ಅಳತೆಯೇ ಒಂದು ಮುಷ್ಠಿ. (೬ ಇಂಚು)
* **ಮೊಳ** = ನಡು ಬೆರಳು ತುದಿಯಿಂದ ಮೊಣಕೈ ಗಂಟಿನವರೆಗಿನ ಅಳತೆಯು ಒಂದು ಮೊಳ. (೨ ಗೇಣು / ೧೮ ಇಂಚು)
* **ಮಾರು** = ೨ ಕೈಗಳನ್ನು ಅಗಲಿಸಿದ ಅಳತೆಯು ಒಂದು ಮಾರು. (ನಾಲ್ಕು ಮೊಳ)
* **ಜತ್ತಗಾಲ** = ೨ ಪಾದಗಳನ್ನು ಜೋಡಿಸಿಟ್ಟು ಜಿಗಿದ ಅಳತೆಯು ಜತ್ತಗಾಲ
* **ಜಾಪ** = ಪಾದಗಳನ್ನು ಜೋಡಿಸಿಟ್ಟು ಸರಳ ನಡಿಗೆಗಿಂತ ತುಸು ಹೆಚ್ಚಿಗಿಟ್ಟ ೨ ಹೆಜ್ಜೆಗಳ ಅಳತೆ (೧ ಮಾರು ಅಳತೆಗೆ ಸಮ)

ಹೀಗೆ ಯಾವುದೇ ಉಪಕರಣಗಳಿಲ್ಲದೇ ಸ್ವಲ್ಪ ಹೆಚ್ಚು ಕಡಿಮೆ ಎಂದೆನಿಸಿದರೂ 'ಸತ್ಯದ ನೆತ್ತಿಯ ಮೇಲೆ ಹೊಡೆದ ಹಾಗೆ ಹೇಳುವ ಜನಪದರ ಪ್ರಾವೀಣ್ಯವನ್ನು ದಿವಾಣರು ಕೊಂಡಾಡಿದ್ದಾರೆ.

ಹಾಗೆಯೇ ನಮ್ಮ ಗ್ರಾಮೀಣ ಜನಪದರು ಅಳತೆಗಳನ್ನು ಕುರಿತು ಮಾಡಿರುವ ಅಭ್ಯಾಸ ನಿಜಕ್ಕೂ ವಿಸ್ಮಯ ಮೂಡಿಸುವಂತದ್ದು ಎಂದೆನ್ನುವ ದಿವಾಣರು –

* **ಗಿರ್ದಾ** = ಒಂದು ವಸ್ತುವಿನ ೪ ನೇ ಭಾಗ
* **ಅರ್ಧಾ** = ೧/೨ ಭಾಗ
* **ಪೌನಾ** = ನಾಲ್ಕನೇ ಮೂರು ಭಾಗ
* **ದೀಡ್** = ೧ ೧/೨ ಕೆ.ಜಿ
* **ಅಡೀಚ್** = ೨ ೧/೨ ಕಿ.ಗ್ರಾಂ.

ನಿಟಿವಿ, ಬೆಳಿವಿ, ಕೊಳವಿ, ಚಟಾಕ್, ಗಿರ್ಪಾವ, ಅರ್ಪಾವ, ಅದ್ನ, ಗಿದ್ನ, ಬಳ್ಳ, ಸೇರ, ಸೊಲಗ, ಮಣ, ಇಮ್ನ, ಒಮ್ನ, ಬಳತ, ಹಗೆ, ಪುಟ್ಟಿ, ಖಂಡಗ, ಅಚ್ಚೇರ, ಪಾವಸೇರ ಹೀಗೆ ಇವುಗಳೆಲ್ಲವನ್ನು ಇಂದಿನ ಆಧುನಿಕ ಲೆಕ್ಕಶಾಸ್ತ್ರ ಮಾಪನಗಳಲ್ಲಿ ವಿವರಣೆ ನೀಡುವ ಸಂಪಾದಕರ ಶ್ರದ್ಧೆಯ ಜವಾಬ್ದಾರಿ ಮತ್ತು ಆಳವಾದ ಅಭ್ಯಾಸಕ್ಕೆ ತಲೆದೂಗಲೇ ಬೇಕಾಗುತ್ತದೆ.

೬) ಮಳೆಗಳು :

ಪಂಚಾಂಗದ ಪ್ರಕಾರ ಚೈತ್ರಮಾಸ ಪ್ರಾರಂಭವಾಗಿ ಯುಗಾದಿಯ ನಂತರ ಅಮವಾಸ್ಯೆಯಿಂದ – ಹುಣ್ಣಿಮೆಯವರೆಗಿನ ಮತ್ತು ಹುಣ್ಣಿಮೆಯಿಂದ – ಅಮವಾಸ್ಯೆಯವರೆಗೆ ೧೪ ದಿವಸಕ್ಕೊಂದರಂತೆ ಒಟ್ಟು ೨೭ ನಕ್ಷತ್ರಗಳು ಬರುತ್ತವೆ.

ಈ ೨೭ ಮಳೆ ನಕ್ಷತ್ರಗಳಲ್ಲಿ ೧೨ ನಕ್ಷತ್ರಗಳಲ್ಲಿಯೇ 'ಕಾಲ ಮೇಘ'ವೆನ್ನುತ್ತಾರೆ. ಉಳಿದ ಮೇಘಗಳಿಗೆ 'ಅಕಾಲ ಮೇಘ'ವೆಂದು ಹೆಸರು. ಅಶ್ವಿನಿಯಿಂದ ತೊಡಗಿ ಹುಬ್ಬ ಮಳೆಯವರೆಗೆ, ಮುಂಗಾರು, ಉತ್ತರೆಯಿಂದ ಅನುರಾಧವರೆಗೂ ಹಿಂಗಾರು, ಹೀಗಿರುವ ಪ್ರತಿಯೊಂದು ಮಳೆಯ ವಿಶಿಷ್ಟ ಲಕ್ಷಣಗಳನ್ನು ರೈತರು ಗುರುತಿಸಿದ್ದಾರೆ. ಪ್ರತಿ ಮಳೆಗೆ ಸಂಬಂಧಿಸಿದಂತೆ ಕಂಡುಕೊಂಡಿರುವ ಪ್ರಚಲಿತ ಗಾದೆ ಮಾತುಗಳು ಅವರ ಅನುಭವದ ಮೊತ್ತದಂತಿವೆ.[೧೨]

ಗುರ್ಜಿಯ ಮೂಲಕ ಮಳೆಯನ್ನು ಆಹ್ವಾನಿಸುವ ಗ್ರಾಮೀಣ ಜಾನಪದರು ಕೃಷಿ ಸಾಮ್ರಾಜ್ಯದ ರಾಜ ಮಹಾರಾಜನ ಪಟ್ಟವನ್ನು ಮಳೆರಾಜನಿಗೆ ನೀಡಿ 'ಮಳೆಯಾದ್ರ ಕೆಟ್ಟಲ್ಲ; ಮಗಾ ಉಂಡ್ರ ಕೆಟ್ಟಲ್ಲ' ಎಂಬ ಅರ್ಥಪೂರ್ಣ ಗಾದೆ ಹುಟ್ಟಿಕೊಂಡಿರುವ ಹಿನ್ನೆಲೆಯನ್ನು ಸಂಪಾದಕರು ಅರ್ಥವತ್ತಾಗಿ ಪರಾಮರ್ಶಿಸಿದ್ದಾರೆ.

ಮಳೆಗೆ ಗಂಡು ದೇವರ ಸ್ಥಾನವನ್ನು ನೀಡಿ –

'ರಾಗಿ ಬಣ್ಣದ ಕುದರಿ, ರಾಜೇಕ ದೊಡ್ಡದು
ರಾಜರೊಳು ರಾಜ ಮಳೆರಾಜ । ಬರುವಾಗ
ರಾಜೇ ಕೈಯ ಮುಗದಾವ'[೧೩]

ಎಂಬಲ್ಲಿ ಜನಪದೀಯ ಜೀವನಾಡಿಯಾದ ಕೃಷಿಕರು, ಜೀವ ಸಮುದಾಯದ ಜೀವನ ಮೌಲ್ಯಗಳ ಶೈಲಿಗೆ ಸಂಜೀವಿನಿಯಾಗಿರುವ ಮಳೆಯನ್ನು ಭಯ-ಭಕ್ತಿಯಿಂದ ಜನಪದರು ಭಜಿಸುವ ಭಾವವನ್ನು ವಿಶ್ಲೇಷಿಸಿದ್ದಾರೆ.

ಉಗಾದಿಯಿಂದ ಮಳೆ ಪ್ರಾರಂಭವಾಗಿ ಕಾಮಣ್ಣನ ದಹನದ ಬೂದಿಯನ್ನು ವರ್ಷದ ಕೊನೆಯ ಮಳೆ ತೊಯ್ಯಿಸುವುದೆಂದು ೨೭ ಮಳೆಗಳ ಸಮಗ್ರ ವಿವರಣೆ ನೀಡುವ ದಿವಾಣರು –

'ಭರ್ಣಿ ಮಳಿ ಆದ್ರ ಧರ್ಣಿ ಬೆಳೀತು
ರೋಣಿ ಮಳಿ ಆದ್ರ ಓಣಿ ಕಾಳು ತುಂಬಿತು
ಉತ್ರೀ ಮಳಿಯಾದ್ರ ಬಿತ್ರೀ ; ಇಲ್ಲಾದ್ರ ಗೋವಾ ಗಾಡಿ ಹತ್ರೀ
ಹುಬ್ಬಿ ಮಳಿಯಾದ್ರ ಗುಬ್ಬಿ ಮೈ ತೊಯ್ಲಿಲ್ಲ
ಮಳಿಯಾದ್ರ ಹಸ್ತಾ ; ಇಲ್ಲಾಂದ್ರ ರೈತ ಹಲ್ಲ ಕಿಸ್ತಾ
ಸಾತೀ ಮಳೀ ಹ್ಯಾತೀನಂದ್ರ ಬಿಡ್ಲಿಲ್ಲ
ಅರಿದ್ರಾ ಮಳಿ ಗದ್ಧರಿಸಿದ್ದರ್ರ ಮುಂದಾರ್ಮಳೀ ಕಳೀತು
ಇಸಕ್ಕಿ ಮಳಿಗೆ ನೆಲಯೆಲ್ಲಾ ಇಸಾ
ಚಿತ್ತಮಳಿ ಚಿತ್ತ ಬಂದ್ಕಡೆ ಆಕೈತಿ'[೧೪]

ಜನಪದೀಯರ ಅನುಭವದ ಹಾಗೂ ನಂಬಿಕೆಗಳಲ್ಲಿ ವ್ಯಕ್ತಗೊಂಡ ಮಳೆಗಳ ಗುಣ-ಲಕ್ಷಣಗಳನ್ನು ಆಚಾರ-ವಿಚಾರಗಳನ್ನೆಲ್ಲ ದಿವಾಣರು ಮಾರ್ಮಿಕವಾಗಿ ವಿಶ್ಲೇಷಿಸಿದ್ದಾರೆ.

ನಮ್ಮ ಗ್ರಾಮೀಣ ರೈತಾಪಿ ಜನಪದರು ಯಾವ ಹವಾಮಾನ ಇಲಾಖೆಯ ಸೂಚನೆ-ಸಲಹೆಗಳಿಲ್ಲದೇ ತಾವೇ ನಿಸರ್ಗದ ಏರು-ಪೇರುಗಳನ್ನು ಗ್ರಹಿಸಿ ಭವಿಷ್ಯದ ದಿನಗಳಲ್ಲಿನ ವಿಚಾರಗಳನ್ನು ಉಹಾತ್ಮಕವಾಗಿ ಹೊರಹಾಕುವ ಮತ್ತು ನಿಖರವಾದ ನಂಬಿಕೆಗಳನ್ನು ನಂಬಿ ಬದುಕುವವರಾಗಿದ್ದರು.

* **ಮೂಡಲಗಾಳಿ ಬೀಸಿದರೇ ಮಳೆ ಆಗಲ್ಲ; ಭೂಮಿ ಬಿರುಸಾಗಿ ನೀರು ಬತ್ತುವುದು.**
* **ಪಡುಗಾಳಿ ಬೀಸಿದ್ರೆ ಎತ್ತು-ಎಮ್ಮೆ-ಆಕಳು, ದನಕರುಗಳಿಗೆ ಕಾಲು ಬೇನೆ, ಬಾಯ್ಬೇನೆ ಬರುವುದು.**
* **ನೈರುತ್ಯ (ಕುಂಬಾರ ಗಾಳಿ) ಬೀಸಿದರೇ ಮಳೆ ಮತ್ತೇ ಮತ್ತೇ ಆಗುವುದು.**
* **ಬಡಗಣ್ಣ (ಗಂಗಿ ಗಾಳಿ) ಬೀಸಿದರೇ ಬಿಳಿ ಜೋಳದ ಪೈರಿಗೆ ಹೆಚ್ಚು ತಂಪು ಹವೆ ದೊರೆಯುವುದು.**
* **ತೆಂಕಣ (ಹರಿಶ್ಚಂದ್ರ) ಗಾಳಿ ಬೀಸಿದರೇ ಕಾಳು ಹುಲುಸಾಗಿ ಬೆಳೆಯುವುದು.**[೧೫]

ಎಂಬ ಗ್ರಾಮೀಣ ಜನಪದರ ಅನುಭವದಿಂದ ಅರಳಿ ಬಂದ ನಂಬಿಕೆಗಳನ್ನು ಮತ್ತು ಅನಕ್ಷರಸ್ಥರಾದರೂ ಕೂಡ ಅವರ ವೈಜ್ಞಾನಿಕ ಚಿಂತನೆಯ ದೃಷ್ಟಿಕೋನದ ವೈಖರಿಗೆ ದಿವಾಣರು ತಲೆದೂಗಿದ್ದಾರೆ.

ಶಿಷ್ಟ ವ್ಯಕ್ತಿಗಳು ಹವಾಮಾನ ಮತ್ತು ಮಳೆಗಳ ಬಗೆಗಿನ ಅಧ್ಯಯನಕ್ಕೆ ವೈಜ್ಞಾನಿಕ ಹಿನ್ನೆಲೆಯಲ್ಲಿ ಇಲಾಖೆಗಳನ್ನು ತೆರೆದು ಅಧ್ಯಯನ ಮಾಡುವ ಚತುರರಾದರೇ, ಜನಪದ ರೈತಾಪಿ ಸಮುದಾಯದವರು ಇವರಿಗಿಂತ ಮೊದಲೇ ನಿರ್ದಿಷ್ಟವಾದ ಪಂಚಾಂಗವನ್ನು ಬರೆದು, ತಮ್ಮ ಅನುಭವದ ಹಾಗೂ ನಿಸರ್ಗವನ್ನು ವಿಶಿಷ್ಟ ದೃಷ್ಟಿಕೋನದಿಂದ ನೋಡಿ ನಿಖರ ಫಲಿತಾಂಶವನ್ನು ಕಂಡುಕೊಳ್ಳುವ ಜಾಣರು ಎಂಬುದನ್ನು ಸಿದ್ದು ದಿವಾಣರು ಅನೇಕ ಉದಾಹರಣೆಗಳಿಂದ ದೃಢಪಡಿಸುತ್ತಾರೆ.

ಮಳೆಗಳು ಗಾರ್ಧಭವಾಹನ, ಮಹೀಷಿವಾಹನ, ಮಯೂರವಾಹನ, ಮಂಡೂಕವಾಹನ, ಜಂಬೂಕವಾಹನ, ಗಜವಾಹನ, ಅಶ್ವವಾಹನ, ಇಲಿವಾಹನ, ನರಿವಾಹನಗಳ ಮೇಲೆ ಬರುತ್ತವೆಂಬ ಗ್ರಾಮೀಣರ ನಂಬಿಕೆಗಳನ್ನು ಅಲ್ಲಗಳೆಯುವಂತಿಲ್ಲ. ಏಕೆಂದರೇ ಇಂದಿಗೂ ಕೂಡ ಮಂಡೂಕವಾಹನದ ಮೇಲೆ ಬರುವ ಮಳೆ ಸಂಪೂರ್ಣವಾಗಿ ಸುರಿಯುವುದನ್ನು ಹಾಗೂ ನರಿವಾಹನವನ್ನಾಗಿಸಿಕೊಂಡು ಬಂದ ಮಳೆ ಆಗದೇ ಹೋಗುವುದನ್ನು ಕಂಡಾಗ ಜನಪದರ ಪರಿಕಲ್ಪನೆಯ ಸಿದ್ಧಾಂತಕ್ಕೆ ಮತ್ತು ನಂಬಿಕೆಗಳಿಗೆ ದಿವಾಣರು ಆತ್ಮೀಯವಾಗಿ ಶರಣಾಗಿದ್ದಾರೆ.

ಮಳೆಗಳು ಹೂಗಾರ, ಕುಂಬಾರ, ಅಗಸರ ಮನೆಯಲ್ಲಿ ವಾಸ ಮಾಡಿರುವುದಾಗಿ ಮತ್ತು ಅಗಸರ, ಕಂಬಾರರ ಮನೆಯ ವಾಸದ ಮಳೆಗಳು ಹೆಚ್ಚು ಹೆಚ್ಚಾಗಿ ಸುರಿಯುತ್ತವೆ ಎಂಬ ಇತ್ಯಾದಿ ಜನಪದರ ನಂಬಿಕೆಗಳನ್ನು ದಿವಾಣರು ಅರ್ಥಪೂರ್ಣವಾಗಿ ವಿವರಣಾತ್ಮಕವಾಗಿ ಓದುಗರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

೭) ಆಯಗಾರರು :

ಕಂಬಾರ, ಕುಂಬಾರ, ಬಡಿಗ, ಜಂಗಮ, ಹೂಗಾರ, ನಾಯಿಂದ, ತಳವಾರ, ಕೋಲಕಾರ, ಹೆಳವರು ಇತ್ಯಾದಿ ಜನಾಂಗದವರು 'ಆಯುಗಾರ' ಸಂಸ್ಕೃತಿಯ ಪ್ರತೀಕವಾಗಿದ್ದಾರೆಂದು 'ಕಾಯಕ ನಂಬಿದ ನಾಯಕರಿವರು' ಎಂದು ಅವರವರ ವೃತ್ತಿಯನ್ನು ಮತ್ತು ಕರಕುಶಲತೆಯನ್ನು ಮನಕ್ಕೆ ಮುಟ್ಟುವಂತೆ ಸವಿವರವಾಗಿ ದಿವಾಣರು ಚಿತ್ರಿಸಿದ್ದಾರೆ.

ಅಂದಿನ ಈ ಜನಪದ ಆಯಗಾರ ಸಂಸ್ಕೃತಿಯು ಕೂಡಿ ಬಾಳುವ 'ಸೌಹಾರ್ದ'ದ ಬದುಕನ್ನು ಸೂಚಿಸುತ್ತಿತ್ತು. ಜೊತೆಗೆ ಸರ್ವ ಧರ್ಮ ಸಮನ್ವಯದ ಮನೋಧೋರಣೆ ಎದ್ದು ಕಾಣುತ್ತಿತ್ತು. ಕಾಯಕವೇ ಕೈಲಾಸ ಎಂಬ ಮಾತಲ್ಲಿ ನಂಬಿಕೆ ಇರಿಸಿದ ಈ ಜನಾಂಗದವರು ಅಂದಿನ ಸಮಾಜಕ್ಕೆ ತೀರಾ ಅವಶ್ಯಕರಾಗಿ ರೈತಾಪಿ ಜನರಿಗೆ ಬೆನ್ನೆಲುಬಿನಂತೆ ಬದುಕಲ್ಲಿ ಹಾಸೂ ಹೊಕ್ಕಾಗಿದ್ದರೆಂಬುದನ್ನು ವಿವರವಾಗಿ ಹೇಳುತ್ತ 'ಯಂತ್ರ-ತಂತ್ರಗಳ ಬಲೆಯಲ್ಲಿ ಸಿಕ್ಕು ಈ ಆಯಗಾರರು ಮೂಲ ಕುಟುಂಬದ ವೃತ್ತಿಯನ್ನೇ ಬಿಟ್ಟು ಸಂಸ್ಕೃತಿಯನ್ನು ಬಡವಗೊಳಿಸಿದ್ದಾರೆಂದು ದಿವಾಣರು ಖೇದಗೊಳ್ಳುತ್ತಾರೆ. ಆದರೆ ಇದೆಲ್ಲಾ 'ಕಾಲದ ಮಹಿಮೆ' ಎಂದು ಸಮಾಧಾನಪಟ್ಟುಕೊಳ್ಳುತ್ತಾರೆ.

೪.೨.೨ ಜಾನಪದ ಸಾಹಿತ್ಯ ಸಂಸ್ಕೃತಿ :

ಜನಪದ ಸಾಹಿತ್ಯವು ಆಕಾಶದಷ್ಟು ವಿಶಾಲ, ಸಾಗರದಷ್ಟು ಆಳ. ಗಾದೆ, ಒಗಟು, ಒಡಪು, ಕಥೆ, ಗೀತೆ, ಕಥನಗೀತೆ ಹೀಗೆ ವಿವಿಧ ಸ್ತರದಲ್ಲಿ ವಿಸ್ತಾರತೆಯನ್ನು ಪಡೆದುಕೊಂಡಿದೆ. ಇಡೀ ಜಗತ್ತಿನ ಸಾಹಿತ್ಯದ ಮೂಲವನ್ನೆಲ್ಲ ಜನಪದ ಸಾಹಿತ್ಯದಲ್ಲಿಯೇ ಕಾಣಬಹುದು. ಅದಕ್ಕೆ ಬಿ.ಎಂ.ಶ್ರೀಯವರು ಜನಪದ ಸಾಹಿತ್ಯವನ್ನು 'ಜನವಾಣಿ ಬೇರು; ಕವಿವಾಣಿ ಹೂವು' ಎಂದು ಸಾರ್ಥಕ ಭಾವವನ್ನು ಮೆರೆದಿದ್ದಾರೆ. ಜನಪದರು ಎಲೆಮರೆಯ ಹೂಗಳು. ಹೆಸರು ಬಯಸದೇ, ಸನ್ಮಾನ ದಾನಗಳ ಪಡೆಯದೇ, ಕಂಡುಂಡ ಅನುಭವಗಳನ್ನು ಮುಲಾಜಿಲ್ಲದೇ ಮುಜುಗರಕ್ಕೊಳಗಾಗದೇ ಸಾರಿದ ಅನುಭವಿಗಳು; ಅನುಭಾವಿಗಳು.

ಇಂತಹ ಅನುಭಾವಿಗಳ ಅನುಭವಗಳ ಮೊತ್ತವಾಗಿ ಹೊರಹೊಮ್ಮಿ ಹರಿದು ಬಂದ ಸಾಹಿತ್ಯವೇ ಜಾನಪದ. ಈ ಜಾನಪದ ಸಾಹಿತ್ಯದಲ್ಲಿನ ಕೆಲವು ಪ್ರಮುಖ ಅಂಶಗಳನ್ನು ಕಲೆ ಹಾಕಿದ ಸಿದ್ದು ದಿವಾಣರು ತಮ್ಮದೇ ಆದ ದೃಷ್ಠಿಕೋನದಿಂದ ಮೂಲವನ್ನು ಕಂಡು ಚಿಂತನೆಗೈದು ವಿಮರ್ಶಿಸಿ ವಿವರಿಸಿದ್ದಾರೆ. ಅವುಗಳಲ್ಲಿ –

೧) ಜಾನಪದ ಗಾದೆಗಳು
೨) ಜಾನಪದ ಬೈಗುಳಗಳು
೩) ದೇಶಿ ಶಬ್ದ ಸೊಗಡು
೪) ಜಾನಪದ ಹಂತಿ ಹಾಡುಗಳು
೫) ಜಾನಪದ ಮತ್ತು ಮಹಿಳೆ

೧) ಜಾನಪದ ಗಾದೆಗಳು :

ಗಾದೆಗಳು ಒಂದು ನಾಡಿನ ಜನ ಸಾಮಾನ್ಯರು ನಿತ್ಯ ವ್ಯವಹಾರದಲ್ಲಿ ಸಹಜವಾಗಿ ಬಳಸುವ ರೂಢಿಗತ ಅಲಂಕಾರಿಕ ಮಾತು. ಇದೊಂದು ಅನುಭವದ ಕೂಸು. ಸಂಕ್ಷಿಪ್ತವಾಗಿ, ಚುಟುಕಾಗಿ, ಉಪಮೆ–ದೃಷ್ಟಾಂತಗಳನ್ನು ಅಡಗಿಸಿಕೊಂಡ, ರಸವತ್ತಾದ ಪಾಕವಿವು. ತಾವು ಕಂಡುಂಡ ಅನುಭವಗಳನ್ನು ಕಲಾತ್ಮಕವಾಗಿ ಜನಪದರು ಗಾದೆಗಳನ್ನಾಗಿ ಮಾಡಿ ಹರಿಬಿಟ್ಟರು. ವೇದಕ್ಕಿಂತಲೂ ಸತ್ಯಮುಖವನ್ನುವುಳ್ಳವು ಎಂಬುದಕ್ಕೆ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಮಾತೇ ಸಾಕ್ಷಿಯಾಗಿದೆ. ಈ ಗಾದೆಗಳು ಜ್ಞಾನ, ಸುಜ್ಞಾನ, ಆತ್ಮಜ್ಞಾನ, ಆಧ್ಯಾತ್ಮಿಕ ಜ್ಞಾನ, ವಿಜ್ಞಾನ, ಸಾಮಾನ್ಯ ಜ್ಞಾನಗಳುಳ್ಳ ರೂಪದಲ್ಲಿ ಹರಿದು ವಾಸ್ತವಕ್ಕೆ ಹತ್ತಿರವಾಗಿವೆ ಎಂಬುದನ್ನು ದಿವಾಣರು ಸ್ಪಷ್ಟಪಡಿಸಿದ್ದಾರೆ.

ಕೃಷ್ಣಾ ತೀರದ ಸಂಸ್ಕೃತಿಯಲ್ಲಿ ಮಿಂದೆದ್ದ ಹಲವಾರು ಗಾದೆ ಮಾತುಗಳನ್ನು ಪಟ್ಟಿ ಮಾಡಿದ ದಿವಾಣರು ಆಯಾ ಪ್ರಾದೇಶಿಕ ಅರ್ಥಗಳ ವ್ಯಾಪ್ತಿಯಲ್ಲಿ ಗಾದೆಗಳನ್ನು ವಿವರಿಸಿದ್ದಾರೆ ಮತ್ತು ಅರ್ಥೈಸಿದ್ದಾರೆ.

* ಬರಗಾಲಕ್ಕ ಬಾರಿಕಾಯಿ ; ಸುಕಾಲಕ ಹುಂಚಿಕಾಯಿ.
* ಒಳ್ಳೊಳ್ಳೆ ದೇವ್ರ ಉಳ್ಳ್ಯಾಡುವಾಗ ಕಳ್ಯಾನ ದೇವ್ರ ಕಾಯಿ ಬೇಡಿತ್ತಂತ.
* ಹಸನಗೇಡಿನ ಹಾಸ್ಗ್ಯಾಗ ಕರಕೊಂಡ್ರ, ಮಿಸಕ್ಯಾಡಿ ಮೂರ ಮೊಳಾ ಕೌಂದಿ ಹರಿತಂತ.
* ಚಂದಗೇಡಿ ಕೈಯಾಗ ಆರ್ತಿ ಕೊಟ್ರ, ಆರತಿಂಗಳ ತನಕಾ ತೆಳಗ ಇಡಲಿಲ್ಲಂತ.
* ಗುಳ್ಳವ್ವಂದು ಹರದ್ರೇನು? ಜೋಕಮಾರಂದು ಮುರದ್ರೇನು?
* ಹರಗಿದ ಹೊಲಾ ಚಂದ, ಹಡದಕಿ ಹುಡಗಿ ಚಂದ.
* ನೆಲವಿಗಿ ಹಾರದ ಬೆಕ್ಕ, ಮುಗಿಲಿಗೆ ಹಾರಿತೇ?
* ನಕಲ ಮಾಡಾಕು ಅಕಲ ಬೇಕು.
* ಕೂಳಯಿದ್ದ ಕಡೆ ಸಾವಿರ ಕಾಗಿ.
* ಗುದ್ಲಿ ಜೋಡ ಗುದ್ಯಾಡ್ಯಾವ್ಗ, ಗ್ವಾದ್ಲಿ ತುಂಬ ದೌಳತನ.[೧೬]

ಹೀಗಿರುವ ನೂರಾರು ಗಾದೆಗಳನ್ನು ಸಂಪಾದಿಸಿರುವ ದಿವಾಣರು ವಾಸ್ತವ ಬದುಕಿಗೆ ನಿನ್ನೆಗಳ ಅನುಭವಗಳನ್ನು ಕೊಂಡಿಯಾಗಿಸಿಕೊಂಡು ಉಜ್ವಲ ಭವಿಷ್ಯ ನಿರ್ಮಾಣಕ್ಕೆ ಮಾರ್ಗದರ್ಶಿತ್ವವಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಅಕ್ಷರ ಬಲ್ಲವರು ವೇದಗಳನ್ನು ಬರೆದರೇ ಅಕ್ಷರ ಗೊತ್ತಿಲ್ಲದವರು, ಗಾದೆಗಳನ್ನು ಹೇಳಿದರು'[೧೭] ಎಂಬ ದಿವಾಣರ ಮಾತು ಸತ್ಯಕ್ಕೆ ಸಮೀಪವಾಗಿದೆ.

ಜನಪದರು ಗಾದೆಗಳಿಂದ ಸನ್ನಿವೇಶಕ್ಕೆ ಒಂದೊಂದು ಜೀವಕಳೆ ತುಂಬಿ ಸಂದರ್ಭಕ್ಕೆ ರಸವತ್ತತೆಯನ್ನು ನೀಡಿದ್ದಾರೆಂಬುದನ್ನು ಉದಾಹರಣೆಗಳೊಂದಿಗೆ ದಿವಾಣರು ಎತ್ತಿ ತೋರಿಸಿದ್ದಾರೆ.

೨) ಜಾನಪದ ಬೈಗುಳಗಳು :

ಶಬ್ದ ಭಂಡಾರದ ನಿಗಿ-ನಿಗಿ-ಭಗವಾದ ಬೈಗುಳಗಳು ಜನಪದರ ಮಾನಸಿಕ ಸ್ವಾಸ್ಥ್ಯಕ್ಕೆ ಕುರುಹುಗಳು. ಸಮರ್ಥನೂ, ಹೇಡಿಯೂ ಕೂಡ ಬೈಗುಳ ಪ್ರಯೋಗಿಸಬಹುದು. ಬೈಗುಳಗಳ ಮೂಲ ಉದ್ದೇಶ ಮಾನಸಿಕವಾಗಿ ನೋವುಂಟು ಮಾಡುವುದೇ ಆಗಿದೆ. ಹತಾಶರ ಕೈಯಲ್ಲಿ ಶಾಪಗಳಾಗಿ ಈ ಬೈಗುಳಗಳು ಪರಿವರ್ತಿತಗೊಳ್ಳಲೂಬಹುದು.[೧೮]

ಉತ್ತರ ಕರ್ನಾಟಕದ ನೆಲದಲ್ಲಿ ಹುಟ್ಟಿದ, ಬಳಕೆಗೊಳ್ಳುವ, ಬಳಕೆಗೊಳ್ಳದೇ ಇರುವ ನೂರಾರು ಬೈಗುಳಗಳನ್ನು ಸಂಪಾದಿಸಿರುವ ದಿವಾಣರು 'ಕೈಲಾಗದವರು ಬೈದು ಸಿಟ್ಟು ಶಮನ ಮಾಡಿಕೊಳ್ಳುತ್ತಾರೆ'. ತಾತ್ವಿಕ ಬೈಗುಳಗಳಿಂದ ಬುದ್ಧಿ ಹೇಳುವ ಕಲೆಯನ್ನು ನಮ್ಮ ಜನಪದರು ಕರಗತ ಮಾಡಿಕೊಂಡಿದ್ದರೆಂಬುದನ್ನು ನೆನಪಿಸಿಕೊಳ್ಳುತ್ತ ಬೈಗುಳಲ್ಲಿ

'ಸಾವಿನ ಸುತ್ತ ಬೈಗುಳಗಳು' ಮತ್ತು 'ಸಾಮಾನ್ಯ ಬೈಗುಳಗಳೆಂದು' ವಿಭಾಗಗಳನ್ನುಗೈದು ಪಟ್ಟಿ ಮಾಡುವ ಸಂಪಾದಕರು ಪ್ರತಿಯೊಂದು ಬೈಗುಳಕ್ಕೂ ಶಿಷ್ಟ ಅರ್ಥವನ್ನು ನೀಡಿ ಈ ನೆಲದ ಸಂಸ್ಕೃತಿ, ಸಂಪ್ರದಾಯ, ಆಚರಣೆಗಳನ್ನು ಸಮೀಕರಿಸಿ, ತಿಳಿಗೊಳಿಸಿ ವಿಶ್ಲೇಷಿಸುವ ಚಿಕಿತ್ಸಕ ದೃಷ್ಟಿಕೋನವನ್ನು ನೋಡಬಹುದು.

ಸಾವನ್ನು ನಿರಂತರ ನೆನಪಿಸಿದರೆ ಸಾವಿನ ಬೈಗುಳಗಳನ್ನು ನಮ್ಮ ಪ್ರೀಯರಿಗೆ ಪ್ರಯೋಗಿಸಿದರೇ ಅವರ ಸಾವು ದೂರಾಗುತ್ತದೆಂಬ ನಂಬಿಕೆ ಜನಪದರದಾಗಿತ್ತು ಎಂಬ ಅವರ ನಂಬಿಕೆಯ ಮರ್ಮವನ್ನು ಹೇಳುವ ಸಂಪಾದಕರು ಹೆಜ್ಜಾಗ ಗೂಟ ಬಡ್ಲಿ, ಉಡ್ದಾರ ಹರೀಲೀ, ಮಾರೀ ಮಣ್ಣಾಗ್ಲಿ, ಕುಕ್ಕರಸ್ಲೀ, ಹೆಣಾಹೊರ್ಲಿ, ಶ್ಯಟೀಲಿ, ಸೆರಗಹರ್ಲಿ, ರಂಡ್ಯಾಗ್ಲೀ, ಬಾಸೀಂಗಹರ್ಲೀ, ಕಂಬಳ್ಯಾಗಒಯ್ಲೀ, ದುರ್ಗವ್ವ ಒಯ್ಲೀ, ಇಟ್ಟಬರ್ಲೀ, ದನಿ ಅಡಗ್ಲಿ, ಅಡ್ಡಒಯ್ಲೀ, ಕುಣ್ಯಾಗಹಾಕ್ಲೀ, ಬಾಯಾಗ ಮಣ್ಣ ಹಾಕ್ಲೀ, ನಿಗ್ರಹೋಗ್ಲೀ, ಹೆಜ್ಜಾಗ ನವಣೀ ಒಗೀಲೀ ಹೀಗೆ ಸುಮಾರು ೧೦೦ಕ್ಕೂ ಹೆಚ್ಚಿನ ಬೈಗುಳಗಳನ್ನು ಕಲೆಹಾಕಿ ಅವುಗಳ ಮರ್ಮವನ್ನು ಬಿಡಿಸಿ ಹೇಳಿರುವುದು ದಿವಾಣರ ಆಳವಾದ ಜಾನಪದ ಅಭ್ಯಾಸದ ಫಲಶೃತಿಯಾಗಿದೆ.

ಅರುಗೇಡಿ, ಅಬ್ರುಗೇಡಿ, ಬಾಡ್ಯಾ, ಎಬರೇಸಿ, ಕುರ್ಸ್ಯಾಲ್ಯಾ, ಮೊಮ್ಮಟ್ಯಾ, ಕ್ವಂಗೀ, ಮಂಗೀ, ಕಿವ್ಡ, ಕೊಳಕ್ಯಾ, ಕಿಸಬಾಯಿ, ಗೆಣ್ಯಾ, ಗಯ್ಯಾಳಿ, ಜೀನಾ, ಚಿಪ್ಪಾಡಿ, ಕುಲಗೇಡಿ, ಕ್ವಾಡ್ಗ, ಕ್ವಾಣ್ಯಾ, ಯಬ್ಡ, ನೆಗ್ಗೇಡಿ, ತಾಯ್ಗಂಡ ಇಂತಹ ೨೦೦ಕ್ಕೂ ಮಿಕ್ಕಿದ ಸಾಮಾನ್ಯ ಮನೆ-ಮನೆಯ ಬೈಗುಳಗಳನ್ನು ಒಟ್ಟು ಮಾಡಿ ವಿವರಣೆ ನೀಡಿದ್ದಾರೆ.

೩) 'ದೇಶಿ ಶಬ್ದ ಸೊಗಡು' :

ಕನ್ನಡ ಭಾಷೆ ಇಂದು, ಹಿಂದುಸ್ತಾನಿ ಮರಾಠಿ, ಪೋರ್ಚುಗಿಸ್, ಸಂಸ್ಕೃತ, ಇಂಗ್ಲೀಷ, ಹಿಂದೀ, ಅರಬ್ಬಿ ಮುಂತಾದ ಹಲವಾರು ಭಾಷೆಗಳ ಕೊಡುಕೊಳ್ಳುವಿಕೆಯಿಂದ ಸಮೃದ್ಧವಾಗಿ ಬೆಳೆದಿದೆ. ಒಂದು ಜೀವಂತ-ಸಮೃದ್ಧ ಭಾಷೆಗೆ ಈ ಕೊಡು-ಕೊಳ್ಳುವಿಕೆ ಅನಿವಾರ್ಯವು ಹೌದು. ಆದರೆ ಈ ಸ್ವೀಕರಣ ಪದ್ಧತಿ ಮೀತಿ ಮೀರಿದಾಗ, ಆ ಭಾಷೆಯ ನೆಲದ ಶಬ್ದಗಳು ಮತ್ತು ಮೂಲ ಸತ್ವಗಳೆಲ್ಲ ನಶಿಸುವುದರಲ್ಲಿ ಸಂದೇಹವೇ ಇಲ್ಲ. ಈಗ ಕನ್ನಡದ ಜನಪದಕ್ಕೂ ಇದೇ ಗತಿ ಬಂದಿರುವುದು ವಿಪರ್ಯಾಸ. ಕನ್ನಡದ ಶಿಷ್ಟಭಾಷೆಗೆ ಜನಪದವೇ ತಾಯಿ ಬೇರು. ಆದರೆ ಇಂದು ನಾವಾಡುವ ಕನ್ನಡದಲ್ಲಿ ಸಹಸ್ರಾರು ಅನ್ಯಭಾಷಾ ಪದಗಳನ್ನು ಕಾಣುತ್ತೇವೆ. ಆದರೆ ಮೂಲದ ಈ ನೆಲದಲ್ಲಿ ಹುಟ್ಟಿ-ಬೆಳೆದ ಸಂಸ್ಕೃತಿಯ ಜೀವಾಳ ಎಂದೆನಿಸಿರುವ ಅನೇಕ ದೇಶಿ ಶಬ್ದಗಳು ನಮಗಿಂದು ಮರೀಚಿಕೆಯಾಗಿವೆ. ಇದು ಭಾಷೆಗೆ ಮತ್ತು ಮುಂಬರುವ ಜನಾಂಗಕ್ಕೆ ದೊಡ್ಡ ನಷ್ಟವೇ ಸರಿ. ಇಂದು ಅಚ್ಚಗನ್ನಡದ ದೇಶಿ ಶಬ್ದಗಳ ಅರ್ಥವೇ ಕನ್ನಡಿಗರಿಗೆ ಆಗದಿರುವುದು ದುರ್ದೈವದ ಸಂಗತಿ. ಮೊದಲಿದ್ದ ದೇಶಿ ಭಾಷೆಯ ಶಬ್ದದ ಸೊಗಡು ಇಂದು ಬರಡಾಗಿ

ಮರಭೂಮಿಯಂತಾಗಿದೆ. ಅಂದು ನಮ್ಮ ಪೂರ್ವಜರು, ಕೃಷಿ ಸಾಮಗ್ರಿ, ಆಹಾರ, ಹಬ್ಬಗಳು, ಮದುವೆ-ಮುಂಜಿ, ಆಭರಣ ಇತ್ಯಾದಿಗಳಿಗೆ ಸಂಬಂಧಿಸಿದ ಶಬ್ದಗಳು ಹಾಗೂ ದಿನನಿತ್ಯದ ದೇಶಿ ಪದಗಳು ಇಂದು ನಮ್ಮಿಂದ ದೂರವಾಗಿ ಅವುಗಳ ಪರಿಕಲ್ಪನೆಯೇ ಇಲ್ಲದಿರುವುದು ದುಃಖದ ವಿಷಯ.

ಈ ನಿಟ್ಟಿನಲ್ಲಿ ನೋಡಿದಾಗ ಸಿದ್ದು ದಿವಾಣರು ಈ ನೆಲದ ದೇಶಿ ಶಬ್ದಗಳ ಸೊಗಡನ್ನು ಯುವ ಜನಾಂಗಕ್ಕೆ ಪರಿಚಯಿಸುವ ಮತ್ತು ಸಂಸ್ಕೃತಿ-ಸಂಪ್ರದಾಯಗಳ ಮೂಲವನ್ನು ತೋರುವ ಗುರುತರ ಕಾರ್ಯವನ್ನು ಸಂಪಾದನೆಯ ಮೂಲಕ ನೆರವೇರಿಸಿದ್ದಾರೆ.

ಕನ್ನಡ ಸರ್ವನಾಮಗಳಿಗೆ :

ಕಂವ್ಗ = ಅವನಿಗೆ, ಕಿಂವ್ಗ = ಇವನಿಗೆ, ಕಕಿಗೆ = ಅವಳಿಗೆ, ಕಿಕಿಗಿ = ಇವಳಿಗೆ ಎಂಬುದಾಗಿ ಹಾಗೆಯೇ ಕಿಲ್ಲಿ = ಇಲ್ಲಿ, ಕಲ್ಲಿ = ಅಲ್ಲಿ, ಕಿಟ್ಟ = ಇಷ್ಟ, ಕಟ್ಟ = ಅಷ್ಟು, ಕಿವ್ರಿಗಿ = ಇವರಿಗೆ, ಕೆಲ್ಲಿ = ಎಲ್ಲಿ, ಕೆಂವ = ಅವಸರ, ಕಿದ್ಕ = ಇದಕ್ಕೆ, ಕದ್ಕ = ಅದಕ್ಕೆ ಹೀಗೆ ಈ ನೆಲದ ದೇಶಿ ಶಬ್ದಗಳನ್ನು ಕಲೆಹಾಕಿ ಅವುಗಳಿಗೆ ಶಿಷ್ಟಾರ್ಥಗಳೊಂದಿಗೆ ವಿವರಣೆ ನೀಡಿರುವುದು ಔಚಿತ್ಯ ಪೂರ್ಣ ಎಂದೆನಿಸಿದೆ.

ನಮ್ಮ ಜನಪದರು ದಿನನಿತ್ಯದಲ್ಲಿ ಪ್ರಯೋಗಿಸುತ್ತಿದ್ದ – ಉಗರ ಬೆಚ್ಚ = ಸ್ವಲ್ಪ ಬಿಸಿ, ಉಸುಳಿ = ಕುದಿಸಿದ ಕಾಳಿನ ವಗ್ಗರಣೆ, ಉಡಗ = ಶಕ್ತಿಹೀನ, ಉಪ್ಪ ಪಾರಾಗು = ಗೆಲವು, ಉಂಡಾಡಿ = ಎಳೆತನ, ಉಳಕ್ಲ = ಉಳಿದದ್ದು, ಉಡ್ಕಿ = ೨ನೇ ವಿವಾಹ, ಊಂಚಿ = ಕಾಳು, ಉಲುಕ = ತಿರುಗು, ಉಡುಚ = ಚರ್ಮರೋಗ, ಉಗ್ಗ = ಚೆಲ್ಲು ಹೀಗೆ ಸುಮಾರು ೫೦೦ ಕ್ಕೂ ಹೆಚ್ಚಿನ ದೇಶಿ ಶಬ್ದಗಳನ್ನು ಒಟ್ಟುಗೂಡಿಸಿ ಅವುಗಳ ವಿಶಿಷ್ಟಾರ್ಥಗಳನ್ನು ವಿಶ್ಲೇಷಿಸಿ ವಿವರಣೆ ನೀಡಿರುವುದು ಇಂದಿನ ಸಮಯಕ್ಕೆ ಸೂಕ್ತವಾದ ಕಾರ್ಯ ಎಂದೆನಿಸುವುದರಲ್ಲಿ ಸಂದೇಹವೇ ಇಲ್ಲ.

ಹೀಗಿದ್ದ ನಮ್ಮ ಶ್ರೀಮಂತ ದೇಶಿ ಪದಗಳನ್ನು ಇಂದಿನ ಯುವ ಪೀಳಿಗೆ ಗುರುತಿಸದ ಮತ್ತು ಅರ್ಥ ತಿಳಿಯದ ಮತಿಹೀನರಾಗಿರುವುದು ಕನ್ನಡಕ್ಕೆ ಜನಪದ ಕ್ಷೇತ್ರಕ್ಕೆ ಆದ ಬಹುದೊಡ್ಡ ನಷ್ಟವೆಂದು ದಿವಾಣರು ವಿಶಾದ ವ್ಯಕ್ತಪಡಿಸುತ್ತಾರೆ.

ಳ) 'ಜಾನಪದ ಹಂತಿ ಹಾಡುಗಳು :

ಜನಪದ ಸಾಹಿತ್ಯದಲ್ಲಿ ಗೀತೆಯೊಂದು ಪ್ರಮುಖ ಪ್ರಕಾರ. ಅದು ಮುಟ್ಟದ ವಸ್ತುವಿಲ್ಲ. ಸಂಸಾರದ ವಿಭಿನ್ನ ಮುಖಗಳೆಲ್ಲವೂ ಇಲ್ಲಿ ಚಿತ್ರಿತಗೊಂಡಿವೆ. ತಾಯಿ, ಮಗಳು, ಅತ್ತೆ-ಸೊಸೆ, ಅಣ್ಣ-ತಂಗಿ, ಅತ್ತಿಗೆ-ನಾದಿನಿ, ಮೈದುನ, ಸವತಿ, ಒರಗಿತ್ತಿಯರು,

ಮೌಲ್ಯಗಳನ್ನು ಪ್ರತಿಫಲಿಸುವ ಇವು ಸಾಮಾಜಿಕ ಬದುಕಿನ ಹೊಗಳಿಕೆ ತೆಗಳಿಕೆ, ವ್ಯಂಗ್ಯ, ಲಾಸ್ಯ-ಹಾಸ್ಯಗಳ ಸುತ್ತ ಸಾಮಾಜಿಕ ಪ್ರಜ್ಞಾ ಪ್ರಕಾಶನಗಳ ಮೊತ್ತಗಳಾಗಿವೆ ಎಂದು ದಿವಾಣರು ಅಭಿಪ್ರಾಯಪಟ್ಟಿದ್ದಾರೆ.

ಸಿದ್ದು ದಿವಾಣರು ಸಂಪಾದಿಸಿ ವಿಭಾಗಗಳನ್ನು ಗೈದು ಕಟ್ಟಿಕೊಟ್ಟ ಹಂತಿ ಪದಗಳ ಒಂದೊಂದು ಉದಾಹರಣೆಯನ್ನು ಮಾತ್ರ ಈ ಕೆಳಗೆ ನೋಡಬಹುದು.

* ಕರಿಯೆತ್ತ ಕಾಳಿಂಗ, ಬಿಳಿಯೆತ್ತ ಮಾನಿಂಗ
ಸರಕಾರದೆತ್ತ ಸಾರಂಗ । ನಡದರ
ಭೂಮಿ ನಡಗಿತ್ತೋ ಗಡಗಡ ।

(ಬಸವಣ್ಣನ (ಎತ್ತುಗಳನ್ನು) ಕುರಿತ ಹಂತಿ ಹಾಡು)[೧೯]

* ಹಂತಿ ಎತ್ತಿಗೆ ಶರಣು, ಕುಂತ ದೈವಕ ಶರಣು
ಮತ್ತೋಮ್ಮೆ ಶರಣ ಶಿವಶರಣು । ನಮ್ಮಕೂಡ
ಜೋಡಿಗಾದವ್ರಿಗೆ ನಮ ಶರಣು ।

(ಕಣ-ರಾಶಿ ಪರಿಸರದ ಹಂತಿ ಹಾಡು)[೨೦]

* ಮಣ್ಣರ ಬಳಕೋರೋ, ನೀರರ ಹೊಡಕೋರೋ
ಹೆಂಡಿಯ ಹಚ್ಚಿ ಬಳಕೋರೋ । ಒಕ್ಕಲಿಗ
ಮೇಟಿಯ ನಡಿಸಿ ಉಳಕೋರೋ ।

(ಸಾಮಾಜಿಕ ಚಿಂತನಶೀಲ ಹಂತಿ ಹಾಡು)[೨೧]

* ಮೇಲಿನ ಕರಿನೆಲಕ ಮುತ್ತೈತಿ ಬಿಳಿ ಹತ್ತಿ
ಮುತ್ತೈದೆ ಉಡೀಯ ತುಂಬೈತಿ । ಬಿಳಿ ಹತ್ತಿ
ಬಾನೆಲ್ಲ ಬೆಳಕ ಚೆಲ್ಲೈತಿ ।

(ನಿಸರ್ಗ ಸಂಬಂಧಿ ಹಂತಿ ಹಾಡು)[೨೨]

* ಹಾಡ ಬರ್‍ತಾವಂತ ಹಾರಾಡಿ ಬರಬ್ಯಾಡ
ಹಗ್ಗದ ಬಲೀಯ ವಗದಾನ । ಮಲಿಯಪ್ಪ
ಮಗ್ಗಲ ಎಲುವ ಮುರದಾವ ।

(ಹಾಸ್ಯ-ಲಾಸ್ಯ ಹಂತಿ ಹಾಡು)[೨೩]

*　ಊರ ಮುಂದಿನ ತ್ವಾಟ ನೀರುಂಡ ಬಳ್ಳೊಳ್ಳಿ
ಸಾಲ ಮೂಲಂಗಿ ಗಜನಿಂಬಿ । ಬನದಾಗ
ಅರೆತ್ತಿನ ಬಾಂಯಿ ತೆಗದೇನ ।

(ಉದ್ಯೋಗ ಸಂಬಂಧಿ ಹಂತಿ ಹಾಡು)[೨೪]

ಹೀಗೆ ಆಯಾ ವಿಭಾಗಗಳಲ್ಲಿ ಹಲವಾರು ಹಂತಿ ಪದಗಳನ್ನು ಒತ್ತೊಟ್ಟಿಗೆ ಕಲೆ ಹಾಕಿ ವಿಶ್ಲೇಷಣೆ, ವಿವರಣೆ ನೀಡುವ ದಿವಾಣರು –

'ಹಂತಿ
ನೀ ಎಲ್ಲೋಗಿ ಕುಂತಿ
ಮುಗದ ಹೊಯ್ತು ನಿನ್ನಂತಿ
ಕುಂತ್ಹೋತ ನಿನ್ನ ಕಂತಿ
ನೀ ನೆಂಪ್ಯಾಗ ಇರಬೇಕಂತಿ
ನಿನ್ಬಗ್ಗೆ ನಮ್ಗಿಲ್ಲ ಚಿಂತಿ
ಹಂತಿ, ನಿ ಎಲ್ಲೋಗಿ ಕುಂತಿ'[೨೫] ಎನ್ನುವಲ್ಲಿ ವಿಷಾದದ ಛಾಯೆಯನ್ನು ಕಾಣಬಹುದಾಗಿದೆ.

೫)　ಜಾನಪದ ಮತ್ತು ಮಹಿಳೆ :

ಇಂದಿನ ದಿನಗಳಲ್ಲಿ 'ಲಿಂಗತ್ವ' ಸಮನ್ಯಾಯದ ಪರಿಕಲ್ಪನೆ ಬೆಳೆಯ ತೊಡಗಿದೆ. ಸಂವಿಧಾನ ರಾಷ್ಟ್ರದ ಶಾಸನ – ಕಾನೂನುಗಳಲ್ಲಿ ಇದನ್ನು ಒಪ್ಪಿಕೊಂಡು ಆಗಿದೆ. ಸಬಲೆ ಎಂದಿದ್ದವಳು ಇಂದು ಅಬಲೆಯಾಗಿ ಎಲ್ಲ ರಂಗದಲ್ಲೂ ಪುರುಷನಷ್ಟೇ ಸಮರ್ಥಳು, ಸಮಾನಳು ಎಂಬುದನ್ನು ತೋರಿಸಿಕೊಟ್ಟಿದ್ದಾಳೆ. ಆದರೆ ನಮ್ಮ ಹಿಂದಿನ ಗ್ರಾಮೀಣ ಪರಿಸರದ ಜಾನಪದದಲ್ಲಿ ಉಲ್ಲೇಖಗೊಂಡ ಮಹಿಳೆ ತೀರಾ ಮುಗ್ಧಳು. ಗಂಡನ, ಅತ್ತೆ–ಮಾವನ, ನಾದಿನಿಯರ ಪಡಿ ನೆರಳಲ್ಲಿಯೇ ಅರಳೀ ನಗುವ ಚೆಲ್ಲುವ 'ಹೂ' ಇವಳು.

ಜಾನಪದ ಗ್ರಾಮೀಣ ಮಹಿಳೆ ಒರ್ವ ಅನುಭವಿ; ಅನುಭಾವಿ ಹಾಗೂ ಪುರುಷನಿಗಿಂತಲೂ ಹಲವು ಪಟ್ಟು ಹೆಚ್ಚಾಗಿ ಸಾಹಿತ್ಯಾಸಕ್ತಳಾಗಿದ್ದಳು ಎಂಬುದನ್ನು ಊಹಾತ್ಮಕವಾಗಿ ಹೇಳುವ ಸಿದ್ದು ದಿವಾಣರು 'ಮನದಲ್ಲಿ ಹೆಣ್ತನವನ್ನು ತುಂಬಿಕೊಂಡು ರಚಿಸಿದ ಪದ್ಯಗಳ ಭಾವವೇ ಬೇರೆ ಹಾಗೂ ಗಂಡ್ತತನ ಭಾವದಿಂದ ಅರಳಿದ ಪದ್ಯಗಳ ಭಾವನೆಯೇ ಬೇರೆಯಾಗಿ ಒಡೆದು ಸ್ಪಷ್ಟವಾಗಿ ಕಾಣಿಸುವುದೆಂದು'[೨೬] ಹೇಳುತ್ತ ಬಹುತೇಕ ಜಾನಪದ ಸಾಹಿತ್ಯ ಹೆಣ್ತನದ ಭಾವ–ಭಾವನೆಗಳನ್ನೇ ಹೆಚ್ಚಾಗಿ ತುಂಬಿಕೊಂಡು ತುಳುಕುತ್ತಿರುವುದನ್ನು ತೂಗಿ ನೋಡಬಹುದೆನ್ನುತ್ತ 'ಜೋಗುಳ' ಪದ, 'ಸೋಬಾನೆ' ಪದ, ಕುಟ್ಟುವ, ಖೇರುವ, ಬೀಸುವ ಮುಂತಾದ ಹಲವಾರು ಸಾಹಿತ್ಯ ಪ್ರಕಾರಗಳ ಪದ್ಯಗಳನ್ನು ಉದಾಹರಣೆಯಾಗಿ ನೀಡಿ–ತೋರಿಸಿ ತಮ್ಮ ಹೇಳಿಕೆಗೆ ಬಲವಾದ ಪುಷ್ಠಿ ತಂದು ಕೊಂಡಿರುವ ದಿವಾಣರ ನಿಲುವನ್ನು ಅಲ್ಲಗಳೆಯುವಂತಿಲ್ಲ.

ಮದುವೆಯೆಂಬುದು ಪವಿತ್ರ ಬಂಧನ. ಸ್ವರ್ಗದಲ್ಲಿಯೇ ಅದು ಖಚಿತವಾಗಿರುತ್ತದೆ. ಪತಿಯೇ ಪ್ರತ್ಯಕ್ಷ ದೈವ ಎನ್ನುವ ಜನಪದ ಹೆಣ್ಣು –

'ಗಂಜೀಯ ಕುಡಿದರೂ ಗಂಡನ ಮನೆ ಲೇಸ
ಅಂದಣವ ಮ್ಯಾಲಿ ಚವರವ । ಬೀಸಿದರೂ
ಹಂಗೀನ ತವರಮನಿ ಸಾಕ'[೨೭]

ಎನ್ನುತ್ತ ಮದುವೆಯನ್ನುವುದು ಬ್ರಹ್ಮಗಂಟು. ಬಡತನವಿರಲೀ, ಸಿರಿತನವಿರಲೀ ಪಾಲಿಗೆ ಬಂದದ್ದು ಪಂಚಾಮೃತವೆಂದು ಬಗೆದು ಬಾಳುವೆ ಮಾಡುತ್ತಿದ್ದ 'ಗರತಿ' ನಮ್ಮ ಜನಪದ ಮಹಿಳೆ ಎಂದು ಗೌರವ ಪೂರ್ವಕವಾಗಿ ಸಿದ್ದು ದಿವಾಣರು ತಲೆ ಬಾಗುತ್ತಾರೆ.

ತಾಯಿ ಗರ್ಭದಿಂದ ಹಿಡಿದು ಭೂಗರ್ಭ ಸೇರುವವರೆಗೆ ಆಯಾ ಸನ್ನಿವೇಶಗಳಿಗೆ ಅನುಗುಣವಾಗಿ ಸುಖ–ದುಃಖ, ಸಾವು–ನೋವು ಸಂಬಂಧಿತ ಜನಪದ ಸಾಹಿತ್ಯವು ಸ್ತ್ರೀ ಸಮುದಾಯದಿಂದಲೇ ಉಗಮವಾಯಿತೆಂದು ಹಾಗೂ ಜನಪದ ಮಹಿಳೆಯರು ಒರ್ವ ಇಂಪು ಧ್ವನಿಯುಳ್ಳ ಉತ್ತಮ ಗಾಯಕಿಯರಾಗಿದ್ದರು[೨೮] ಎಂದು ಸಿದ್ದು ದಿವಾಣರು ಅಭಿಪ್ರಾಯಪಡುವಲ್ಲಿ ಸತ್ಯವಿದೆ ಎಂದೆನಿಸುತ್ತದೆ.

❖❖❖❖❖

ಅಡಿಟಿಪ್ಪಣಿಗಳು :

೧. ಡಾ. ಎಂ. ಎಂ. ಕಲಬುರ್ಗಿ : ಪರಿಕಲ್ಪನೆ, ಪ್ರಸಾರಾಂಗ, ಹಂಪಿ.
೧ಅ. ಸಿದ್ದು ದಿವಾಣ : 'ಎದ್ದಾವ ಹೋಳ್ಗಿ' : ಪು.ಸಂ. ೯೯
೨. ಸಿದ್ದು ದಿವಾಣ : 'ಎದ್ದಾವ ಹೋಳ್ಗಿ' : ಪು.ಸಂ. ೯೯
೩. ಸಿದ್ದು ದಿವಾಣ : 'ಎದ್ದಾವ ಹೋಳ್ಗಿ' : ಪು.ಸಂ. ೫೭
೪. ಸಿದ್ದು ದಿವಾಣ : 'ಎದ್ದಾವ ಹೋಳ್ಗಿ' : ಪು.ಸಂ. ೫೭
೫. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' : ಪು.ಸಂ. ೩೮
೬. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' : ಪು.ಸಂ. ೪೦
೭. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' : ಪು.ಸಂ. ೪೦
೮. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' : ಪು.ಸಂ. ೫೨
೯. ಡಾ. ಸಿ. ಪಿ. ಗುರುಪ್ರಸಾದ : 'ಏಳು ಊರಿನ ದೇವತೆಗಳು', ಪ್ರಸಾರಾಂಗ, ಹಂಪಿ.
೧೦. ಸಿದ್ದು ದಿವಾಣ : 'ಗುಳಬುಟ್ಟಿ' : ಪು.ಸಂ. ೯೮
೧೧. ಸಿದ್ದು ದಿವಾಣ : 'ಗುಳಬುಟ್ಟಿ' : ಪು.ಸಂ. ೧೦೨
೧೨. ಡಾ. ಹರಿಲಾಲ ಪವಾರ : ಜನಪದ ನಂಬಿಕೆಗಳು. ಪ್ರಸಾರಾಂಗ, ಕ.ವಿ.ವಿ. ಧಾರವಾಡ.
೧೩. ಸಿದ್ದು ದಿವಾಣ : 'ಗುಳಬುಟ್ಟಿ' : ಪು.ಸಂ. ೨೦
೧೪. ಸಿದ್ದು ದಿವಾಣ : 'ಗುಳಬುಟ್ಟಿ' : ಪು.ಸಂ. ೨೪
೧೫. ಸಿದ್ದು ದಿವಾಣ : 'ಗುಳಬುಟ್ಟಿ' : ಪು.ಸಂ. ೨೩
೧೬. ಸಿದ್ದು ದಿವಾಣ : 'ಎದ್ದಾವ ಹೋಳ್ಗಿ' : ಪು.ಸಂ. ೫೨
೧೭. ಸಿದ್ದು ದಿವಾಣ : 'ಎದ್ದಾವ ಹೋಳ್ಗಿ' : ಪು.ಸಂ. ೩೯
೧೮. ಡಾ. ಕೆ. ಆರ್. ದುರ್ಗಾದಾಸ : ವಸತಿ ಜಾನಪದ : ಪ್ರಸಾರಾಂಗ, ಕ.ವಿ.ವಿ. ಧಾರವಾಡ.
೧೯. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' : ಪು.ಸಂ. ೧೦೨
೨೦. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' : ಪು.ಸಂ. ೧೦೬
೨೧. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' : ಪು.ಸಂ. ೧೦೭
೨೨. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' : ಪು.ಸಂ. ೧೧೧
೨೩. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' : ಪು.ಸಂ. ೧೧೦
೨೪. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' : ಪು.ಸಂ. ೧೧೨
೨೫. ಸಿದ್ದು ದಿವಾಣ : 'ಹಂತಿ ನೀ ಎಲ್ಲೋಗಿ ಕುಂತಿ' : ಪು.ಸಂ. ೧೧೪
೨೬. ಸಿದ್ದು ದಿವಾಣ : ಸಂದರ್ಶನದಲ್ಲಿನ ಅವರ ಅಭಿಪ್ರಾಯ'
೨೭. ಸಿದ್ದು ದಿವಾಣ : 'ಎದ್ದಾವ ಹೋಳ್ಗಿ' : ಪು.ಸಂ. ೭೩
೨೮. ಸಿದ್ದು ದಿವಾಣರ ಸಂದರ್ಶನದ ಅಭಿಪ್ರಾಯ.

ಅಧ್ಯಾಯ : ೫

ಸಮಾರೋಪ

ಅಧ್ಯಾಯ – ೫
ಸಮಾರೋಪ

ಬಾಗಲಕೋಟೆಯ ಬೇಂದ್ರೆ ಎಂದೇ ಕರೆಯಿಸಿಕೊಳ್ಳುವ ಕವಿ–ಸಂಪಾದಕ ಸಿದ್ದು ದಿವಾಣರು ವೃತ್ತಿಯಿಂದ ಶಿಕ್ಷಕರಾಗಿ, ಜನಪದ–ಜಂಗಮರಾಗಿ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಗಳನ್ನು ತನ್ನಡೆಗೆ ಬರಮಾಡಿಕೊಂಡವರು. ಕೇವಲ ಸಾಹಿತ್ಯದಲ್ಲಿ ಅಷ್ಟೇ ಅಲ್ಲ, ತಮ್ಮ ವೈಯಕ್ತಿಕ ಬದುಕಿನಲ್ಲೂ ಮಾನವೀಯ ಆದರ್ಶಗಳನ್ನು ಮತ್ತು ಸದ್ಗುಣಗಳನ್ನು ಆತ್ಮೀಯ ಸಂಬಂಧಗಳ ಸ್ನಿಗ್ಧ ಪ್ರೀತಿಯನ್ನು ಅಳವಡಿಸಿಕೊಂಡವರು. ನವೋದಯ ಕಾವ್ಯ ಪರಂಪರೆಯನ್ನು ನೆನಪಿಸುವ ದಿವಾಣರ ಒಟ್ಟು ಸಾಹಿತ್ಯವು ಜಾನಪದೀಯ ಸತ್ವ ಹಿರಿಕೊಂಡು ಹುಬ್ಬೇರಿಸಿ ನೋಡುವಂತೆ ರಚನೆಯಾಗಿದೆ.

ಪ್ರಾಚೀನ ಕಾಲದ ಆಚಾರ–ವಿಚಾರ, ವೈದ್ಯಪದ್ಧತಿ, ಬೈಗುಳಗಳು, ದೇಶಿ ಸಂಸ್ಕೃತಿ–ಸಂಸ್ಕಾರಗಳು, ರೀತಿ–ರಿವಾಜುಗಳನ್ನು ವೈಜ್ಞಾನಿಕ ಚಿಂತನೆಯಿಂದ ಪರಾಮರ್ಶಿಸಿ ಮೂಢನಂಬಿಕೆಗಳನ್ನು ನೀಗಿ ಮೂಲ ನಂಬಿಕೆಗಳಿಗೆ ಭದ್ರ ಅಡಿಪಾಯ ಹಾಕಿ ಮುಂದಿನ ಜನಾಂಗಕ್ಕೆ ನೀಡುವ ತವಕ ಇವರದ್ದು. ತಮ್ಮ ಬದುಕಿನುದ್ದಕ್ಕೂ ಎಲೆ ಮರೆಯ ಕಾಯಿಯಂತೆ, ಶರಣ ಶಿವಯೋಗಿಯಂತೆ, ಸಾತ್ವಿಕ ಬದುಕನ್ನು ನಡೆಸುತ್ತ ಪ್ರಚಾರ–ಪತಾಕೆಗಳಿಂದ ದೂರವಿದ್ದರೂ ಸ್ವಪ್ರತಿಭೆಯು ಇವರನ್ನು ಕರ್ನಾಟಕಕ್ಕೆ ಪರಿಚಯಿಸಿ, ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗಳನ್ನು ತಂದೊಡ್ಡಿದ್ದು ಇವರ ಜನಪದ ಜಂಗಮ ವ್ಯಕ್ತಿತ್ವಕ್ಕೆ ಹಾಗೂ ಆದರ್ಶ ತತ್ವನಿಷ್ಠ ಬದುಕಿಗೆ ಹಿಡಿದ ಕೈಗನ್ನಡಿಯಾಗಿದೆ. ಬಾಲ್ಯದಿಂದಲೇ ಬಡತನವನ್ನು ಸವಾಲಾಗಿ ಸ್ವೀಕರಿಸಿದ ಸಿದ್ದು ದಿವಾಣರು – 'I will win not Immediately ; But Definitely' ಎಂಬ ಇಂಗ್ಲೀಷನ ಸಾಲುಗಳಂತೆ, ಬಡತನದಲ್ಲೂ ಭವಿಷ್ಯದ ಬಗ್ಗೆ ದಿಟ್ಟಹೆಜ್ಜೆಗಳನ್ನಿಟ್ಟು ಆ ವಿಧಿಯನ್ನೇ ನಾಚಿಸುವ ವೀರಧೀರನ ಸಾಹಸ ಪ್ರವೃತ್ತಿಯ ವ್ಯಕ್ತಿತ್ವವನ್ನು ರೂಢಿಸಿಕೊಂಡವರು ಸಿದ್ದು ದಿವಾಣರು.

ಕೃಷ್ಣೆಯ ತಡಿಯಲ್ಲಿನ 'ಬಾಡಗಿ' ಪುಟ್ಟ ಗ್ರಾಮದಲ್ಲಿ ಜನಿಸಿದ ಶ್ರೀಯುತರ ವಂಶದವರು ಮೂಲತಃ ಪೂನಾ ಸಂಸ್ಥಾನದಲ್ಲಿ ದಿವಾಣರಾಗಿ ಇದ್ದುದರಿಂದಲೇ ಇವರಿಗೆ

'ದಿವಾಣ' ಎಂಬ ಅಡ್ಡ ಹೆಸರು ಪ್ರಾಪ್ತಿಯಾಯಿತು. ದಿವಾಣರೆಂಬ ಅಡ್ಡ ಹೆಸರಿದ್ದರೂ ಬಡತನ ಮಾತ್ರ ಕಿತ್ತು ತಿನ್ನುವಷ್ಟು ಕ್ರೂರವಾಗಿತ್ತು. ಚಿಕ್ಕಂದಿನಿಂದಲೂ ಗಣಿತ ವಿಷಯದಲ್ಲಿ ನಿಷ್ಣಾತರಾಗಿದ್ದ ದಿವಾಣರಿಗೆ ಬಾಲ್ಯದಲ್ಲಿ ವಿದ್ಯಾಭ್ಯಾಸಕ್ಕೆ ತಂದೆ-ತಾಯಿಗಳ ಪ್ರೋತ್ಸಾಹ ದೊರೆತು 'ಹೋಳಿಗೆ' ಶಿಕ್ಷಕರ ಗಣಿತ ಕಲಿಕಾ ಕ್ರಮದಿಂದ ಸ್ಫೂರ್ತಿಗೊಂಡು ಗಣಿತವನ್ನೇ ನೆಚ್ಚಿ-ಮೆಚ್ಚಿ ಮುಂದೆ ಆ ವಿಷಯವೇ ಇವರು ಬದುಕಲು; ಬದುಕಿನಲ್ಲಿ ನೆಲೆಯೂರಲು ಕಾರಣವಾಯಿತು.

ಹಳ್ಳಿಯ ವಾತಾವರಣದಲ್ಲಿ ಬೆಳೆದ ದಿವಾಣರು ಅಂದಿನ ಮುಗ್ಧ ಪ್ರಾಮಾಣಿಕತೆಯ ಕಾಲದಲ್ಲಿ ಪ್ರತಿಯೊಂದು ಸಂಗತಿಯನ್ನು ಕುತೂಹಲ ಹಾಗೂ ಲವಲವಿಕೆಯಿಂದ ನೋಡುತ್ತಿದ್ದರು. ಇಂತಹ ಗುಣವೇ ಅವರ ಜಿಜ್ಞಾಸೆ ಪ್ರವೃತ್ತಿ ಬೆಳೆಯಲು ಪೂರಕವಾಯಿತು. ಅಂದು ಬಾಡಗಿ ಗ್ರಾಮದಲ್ಲಿ ಬೆಳಗಿನ ಜಾವ ದಿನವೂ ಕೇಳಿ ಬರುತ್ತಿದ್ದ ಬೀಸುವ ಕಲ್ಲಿನ ಇಂಪಾದ ಪದಗಳಿಂದ ನಿದ್ದೆಯೊಡೆದು ಏಳುತ್ತಿದ್ದ ದಿವಾಣರಿಗೆ ಅಜ್ಜಿ ಮತ್ತು ತಾಯಿ ಹೇಳುತ್ತಿದ್ದ ಜನಪದ ಕಥೆ-ಕವನಗಳಿಂದ ಪ್ರಭಾವಿತರಾಗುತ್ತಿದ್ದರು. 'ಹಣ್ಣಿನ ಗುಣವನ್ನು ಹೀಚಿನಲ್ಲಿಯೇ ನೋಡು' ಎಂಬಂತೆ ಮುಂದೆ ಕವಿಯಾಗಿ, ಸಂಶೋಧಕ-ವಿಮರ್ಶಕರಾಗಿ, ಜನಪದ ಜಂಗಮರಾಗಿ ಕೃತಿ-ಕೃತ್ಯಗಳಿಂದ ಸಾರ್ಥಕ ಬದುಕನ್ನು ತಮ್ಮದಾಗಿಸಿಕೊಂಡು ಇಂದು ವಿಶ್ರಾಂತಿ ಜೀವನದಲ್ಲೂ ಜಾನಪದ ಕಂಪನ್ನು ಸ್ವಂತ ಇಂಪಾಗಿ ಹಾಡುವಲ್ಲಿಯೂ ಹರಡಿಸುವ ಕಲೆಗಾರರಾಗಿದ್ದಾರೆ.

ಸಿದ್ದು ದಿವಾಣರು ಹುಟ್ಟಿನಿಂದಲೇ ಜಾನಪದ ಸತ್ವವನ್ನು ಮೈಗೂಡಿಸಿಕೊಂಡು ಬಂದವರು. ಕಾಡು ಹಕ್ಕಿಯೊಂದು ಹಾಡುತ್ತ-ಹಾಡುತ್ತ ಎಲ್ಲೆಲ್ಲೋ ಆಡುತ್ತ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುವ ಹಾಗೆ ಶ್ರೀಯುತರು ತಮ್ಮ ಬರಹದ ಪರೀಧಿಯನ್ನು ವಿಸ್ತರಿಸಿಕೊಂಡರು. ಹಕ್ಕಿಯಷ್ಟೇ ಸಹಜವಾಗಿ ತೀವ್ರವಾಗಿ ಅವರು ತಮ್ಮ ಸುತ್ತಲಿನ ಪರಿಸರವನ್ನು ಬದುಕನ್ನು ಅನುಭವಿಸಿದವರು. ಆಯಾ ಋತುಗಳು, ಹಬ್ಬ-ಹರಿದಿನಗಳು, ಹುಣ್ಣಿಮೆ-ಅಮವಾಸ್ಯೆಗಳು, ತಿಥಿಗಳು, ಸುಗ್ಗಿಯ ಸಡಗರ ಇತ್ಯಾದಿಯಾಗಿ ಕಾಲದ ಎಲ್ಲ ಆಯಾಮಗಳಿಗೆ ತಕ್ಕಂತೆ ಪ್ರತಿ ಕ್ಷಣಕ್ಕೂ ಜಾನಪದಕ್ಕೆ ಜೀವ ತುಂಬಬಲ್ಲ ಶಕ್ತಿ ಆಗಿನಿಂದಲೇ ಚೆಲ್ಲೋರೆದು ಹರಿದದ್ದು ಶ್ಲಾಘನೀಯ!

ಬಡತನದಲ್ಲಿ ಮಿಂದು-ಬೆಂದು ಅಂದು ಮುಲ್ಕಿ ಪರೀಕ್ಷೆಯನ್ನು ತೇರ್ಗಡೆ ಹೊಂದಿ ಮುಂದೆ ೧೯೬೫ ರಲ್ಲಿ ಮೇಟ್ರಿಕ ಪರೀಕ್ಷೆಯನ್ನು ಶೇ. ೬೬% ರಷ್ಟು ಅಂಕಗಳಿಂದ ಪಾಸಾದ ದಿವಾಣರಿಗೆ ೧೯೭೧ ರ ಜುಲೈ ೨೭ ರಂದು ಶಿಕ್ಷಕ ವೃತ್ತಿ ದೊರೆತು ತನ್ನ ದುಡಿಮೆಯ ಹಣದಿಂದಲೇ ತನ್ನಿಬ್ಬರು ತಂಗಿಯರ ಮದುವೆ ಮಾಡಿಸಿದ್ದುದು ಈ ಅಣ್ಣನ ಹಿರಿಮೆಯಾಗಿದೆ. ಕೃಷಿ ಗ್ರಾಮೀಣ ಸಂಸ್ಕೃತಿಯ ಜೀವನಾನುಭವಗಳು, ಗ್ರಾಮೀಣ

ಸಂವೇದನೆಗಳು, ಗ್ರಾಮ್ಯ ಜನಪದರ ಜೀವನ ವಿಧಿ-ವಿಧಾನಗಳನ್ನು ತೊಟ್ಟಿಲಿನಿಂದಲೇ ಕಂಡುಂಡು ತಾಯಿಯ ಲಾಲಿಯಲ್ಲಿಯೇ ಜಾನಪದ ಸವಿಯನ್ನು ಸವಿದಿದ್ದ ಸಿದ್ದು ದಿವಾಣರು ಮುಂದೆ ಜಾನಪದ ಕಣಜವೇ ಆಗಿ ಸಾಹಿತ್ಯ ಕೃಷಿಗೈದರು.

ಶ್ರೀಯುತರು ೧೯೯೭ ರಲ್ಲಿ ಮುಧೋಳ ತಾಲೂಕ ಬರಹಗಾರರ ವೇದಿಕೆಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಸಂಪಾದಕರಾಗಿ ಹೊರತಂದ 'ಭಾರತ ಸ್ವರ್ಣ ರಶ್ಮಿ' ಕವನ ಸಂಕಲನವು ದೇಶದ ಸ್ವರ್ಣ ಮಹೋತ್ಸವ ಆಚರಣೆಗೆ ಸಾಕ್ಷಿಯಾಗಿ ಹೊರಹೊಮ್ಮಿ ಸಿದ್ದು ದಿವಾಣರು ಈ ಕೃತಿಯಿಂದಲೇ ಕವಿಗಳಾಗಿ, ಸಂಪಾದಕರಾಗಿ ಕನ್ನಡ ಸಾರಸ್ವತಲೋಕಕ್ಕೆ ಪ್ರವೇಶಗೈದರು. ೫೦ ವರ್ಷದ ಸ್ವಾತಂತ್ರ್ಯ ಭಾರತವು ಭ್ರಷ್ಟಾಚಾರ, ಬಡತನ, ಜಾತಿಯತೆ, ಮೂಢನಂಬಿಕೆ, ಅನಕ್ಷರತೆಯ ಕದಂಬ ಬಾಹುಗಳಿಂದ ಬಂಧನಕ್ಕೊಳಗಾಗಿ ನರಳುವ ಪರಿಯನ್ನು ಇಲ್ಲಿನ ಅನೇಕ ಕವನಗಳು ಸಾರಿ ಹೇಳುತ್ತ, ಹಾಗೇ ಹಿಂದಿನವರ ತ್ಯಾಗ-ಬಲಿದಾನಗಳನ್ನು ನೆನೆದು ರಾಷ್ಟ್ರ-ಪ್ರಜ್ಞೆಯನ್ನು ಮೂಡಿಸುವ ಕೃತಿಯಾಗಿ ಹೊರಹೊಮ್ಮಿದ್ದನ್ನು ಗುರುತಿಸಬಹುದಾಗಿದೆ.

ಈ ನೆಲದ ದೇಶಿ ಪದಗಳನ್ನು ಸಂಸ್ಕೃತಿ-ಸಂಪ್ರದಾಯಗಳನ್ನು ಗ್ರಾಮೀಣ ಆಟ-ಪಾಠಗಳನ್ನು ಜೊತೆಗೆ ಆಯಗಾರ ಜನಾಂಗಗಳ ಬದುಕು-ಜೀವನದ ರೀತಿ-ನೀತಿಗಳನ್ನು, ಹಬ್ಬ-ಹರಿದಿನ, ಜಾತ್ರೆ-ಉತ್ಸವಗಳ ಆಚರಣೆಗಳನ್ನು ವೈಜ್ಞಾನಿಕ ಪರಿಧಿಯಲ್ಲಿ ಪರಿಚಯಿಸುವ ಕಾರ್ಯವನ್ನು 'ನೆಂಪು-ಕಂಪು' ಕೃತಿಯಿಂದ ಓದುಗರ ಮನಸ್ಸನ್ನು ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜನಪದ ಸಾಹಿತ್ಯವು ಶ್ರೀ ಸಾಮಾನ್ಯನ ಜೀವನದ ಸಂಹಿತೆ, ಗ್ರಾಮೀಣ ಜೀವನದ ಉಲ್ಲಾಸ-ಉತ್ಸಾಹ, ಆಚಾರ-ವಿಚಾರ, ರೂಢಿ-ಸಂಪ್ರದಾಯ, ಕಳವಳ-ಕನವರಿಕೆ, ಸರಸ-ವಿರಸ, ಸಮರಸಗಳ ಸನ್ನಿವೇಶ, ಸಿಹಿ-ಕಹಿ ಪ್ರಸಂಗಗಳ ಚಿತ್ರವನ್ನು ಸರಳವಾಗಿ ಆತ್ಮೀಯವಾಗಿ 'ಜಗದಗಲ ಪ್ರೀತಿ' ಕವನ ಸಂಕಲನದ ಮೂಲಕ ಹಿಡಿದಿಡುವಲ್ಲಿ ದಿವಾಣರು ಸಮರ್ಥ ಕವಿ ಕಲಾಕೌಶಲ್ಯವನ್ನು ಮೆರೆದಿದ್ದಾರೆ.

ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಪರಿಸರ ರಕ್ಷಣೆ, ರಾಜಕೀಯ ಹೀಗೆ ಹತ್ತು-ಹಲವಾರು ಮನೋಜ್ಞ ಉದಾಹರಣೆಗಳೊಂದಿಗೆ ಎಲ್ಲಾ ಕ್ಷೇತ್ರಗಳಲ್ಲೂ ನಿರ್ಭಯವಾಗಿ, ಜಾತಿ, ಮತ, ಪಂಥಗಳ ವಿಂಗಡಣೆಯಿಲ್ಲದೇ ವಯಸ್ಸು, ಲಿಂಗ, ಭೇಧಗಳಿಲ್ಲದೇ ಎಲ್ಲರ ಮನಸೂರೆಗೊಳ್ಳುವ ತಿಳಿ ಹಾಸ್ಯದ ಹಾಗೂ ಹಸಿಗೋಡೆಯೊಳಗೆ ಹರಳಿಟ್ಟಂತಹ ಶೈಲಿಯನ್ನೊಳಗೊಂಡ 'ಶಬ್ದಸಿರಿ' ಚುಟುಕು ಕೃತಿಯು ನಿತ್ಯ ನೂತನದಿಂದ ಕೂಡಿದೆ.

ತಾನೂ ಬದುಕಿ ಮತ್ತೊಬ್ಬರ ಬದುಕಿಗೂ ಹಿತಬಯಸುವ ವಿಶಾಲ ಹೃದಯಿಗಳಾದ ಜಾನಪದರ ಬದುಕಿನ ರೀತಿ-ನೀತಿಗಳು, ಆದರ್ಶಗಳು, ಅವರಿಗಿದ್ದ ಶಾಸ್ತ್ರೀಯ ಚಿಂತನೆ,

ತಾವು ಬೆಳೆದ ಪೈರನ್ನು ಖಣ ಮಾಡಿ ರಾಶಿ ಮಾಡುವಾಗಿನ ಕೆಲವು ಸಂಪ್ರದಾಯ-ವಿಧಿ-ವಿಧಾನಗಳನ್ನು 'ಗುಳಬುಟ್ಟಿ' ಕೃತಿಯ ಲೇಖನಗಳಲ್ಲಿ ಗ್ರಾಮೀಣರ ಅನುಪಮವಾದ ಸಂಸ್ಕೃತಿಯನ್ನು ಪರಿಚಯಿಸಿದ್ದಾರೆ.

ಲೇಖಕರು ತಾವು ಹುಟ್ಟಿ-ಬೆಳೆದ 'ಬಾಡಗಿ' ಗ್ರಾಮದ ಪೌರಾಣಿಕ, ಚಾರಿತ್ರ್ಯಿಕ, ಐತಿಹ್ಯಗಳನ್ನು ದ್ವಾಪರ ಕಾಲದವರೆಗೂ ಪೋಣಿಸಿ ನೋಡುವ ಸಂಶೋಧನಾತ್ಮಕ ನಿಲುವು ಹಾಗೂ ಒಕ್ಕಲುತನವನ್ನೇ ನೆಚ್ಚಿಕೊಂಡು ಸಾಗಿ ಬಂದ ರೈತಾಪಿ ಮನೆತನದಲ್ಲಿ ಹುಟ್ಟಿದ ಶ್ರೀಯುತರು ಗಳೆ, ಕೂರಿಗೆ, ಪಟ್ಟೆ, ಹಗೆ, ಕವಣೆ ಹೀಗೆ ಬೇಸಾಯಕ್ಕೆ ಸಂಬಂಧಿಸಿದ ಎಲ್ಲ ಮುಗ್ಗಲುಗಳ ಪರಿಚಯವನ್ನು 'ಹಂತಿ ನೀ ಎಲ್ಲೋಗಿ ಕುಂತಿ' ಎಂಬ ಕೃತಿಯಿಂದ ದರ್ಶನ ಮಾಡಿಸಿದ್ದಾರೆ.

ಜನಪದರ ಆಚರಣೆ, ಸಂಪ್ರದಾಯ, ಕೃಷಿ ಕಸುಬು, ಹೆಣ್ಣು-ಗಂಡು ಬದುಕು, ಬೈಗುಳ, ವಸ್ತ್ರ-ಒಡವೆ, ಆಹಾರ ಪದಾರ್ಥ ಮತ್ತು ಪರಿಕರಗಳು, ದವಸ-ಧಾನ್ಯ, ಅಳತೆ-ವಾದ್ಯಗಳು, ಕೃಷಿ ಪರಿಕರಗಳು ಹೀಗೆ ನೂರಾರು ವರ್ಷದ ಆಸುಪಾಸಿನ ಸಮಗ್ರ ಗ್ರಾಮ ಬದುಕಿನ ಶಬ್ದ ಚಿತ್ರವನ್ನು ಸಂಸ್ಕೃತಿ, ಸಂಪ್ರದಾಯಗಳ ನಡುವಳಿಕೆಯ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ, ಮನಸ್ಸಿಗೆ ಮುಟ್ಟುವಂತೆ 'ಎದ್ದಾವ ಹೋಳ್ಗಿ' ಕೃತಿಯಲ್ಲಿ ಲೇಖಕರು ಕಟ್ಟಿಕೊಟ್ಟಿದ್ದಾರೆ.

ಮನುಷ್ಯ ಜೀವನದ ಸತ್ಯಗಳನ್ನು ಸರಳ-ಭಾಷೆಯಲ್ಲಿ ಬಿಡಿಸಿಡುವ 'ಸಿದ್ಧಹನಿ' ಚುಟುಕು ಕೃತಿಯು ಅರ್ಥಪೂರ್ಣವಾಗಿ, ಸತ್ವಭರಿತವಾಗಿ ಹೊರಹೊಮ್ಮಿದೆ.

ಒಟ್ಟಂದದಲ್ಲಿ ಸಿದ್ದು ದಿವಾಣರು ಒಬ್ಬ ಜನಪದ ಜಂಗಮರು. ತಮ್ಮ ನಡೆ-ನುಡಿ, ವ್ಯಕ್ತಿತ್ವದಲ್ಲೂ ಕೂಡ ಜಾನಪದಿಯತೆಯನ್ನು ಅಳವಡಿಸಿಕೊಂಡವರು. ಜಾನಪದವನ್ನೇ ಉಸಿರಾಡಿಸುವವರು. ಹುಟ್ಟಿನಿಂದ ಮೊದಲ್ಗೊಂಡು ಚಟ್ಟದವರೆಗಿನ ಮನುಷ್ಯನ ಪ್ರತಿ ಹೆಜ್ಜೆ-ಹೆಜ್ಜೆಯಲ್ಲೂ ಜಾನಪದವನ್ನು ಕಂಡು ವೈಜ್ಞಾನಿಕತೆಯ ಒರೆಗೆ ಹಚ್ಚಿ ಸತ್ಯವನ್ನು, ಸತ್ವವನ್ನು ಕಂಡು ಹಿಡಿಯೋ ಸಂಶೋಧಕರಾಗಿ ಕಾಣುತ್ತಾರೆ. ಅದಕ್ಕಿಂತಲೂ ಹೆಚ್ಚಾಗಿ ಈ ಮಣ್ಣಿನ ಮಗನಾಗಿ ನಮ್ಮೊಳಗೆ ಮೆರೆಯುತ್ತಾರೆ.

❖❖❖❖❖

ಅನುಬಂಧ

೧ : ಸಿದ್ಧು ದಿವಾಣಿರ ಬದುಕಿನ ಪ್ರಮುಖ ಘಟ್ಟಗಳು

೨ : ಸಿದ್ಧು ದಿವಾಣಿರ ಪ್ರಕಟಿತ – ಅಪ್ರಕಟಿತ ಲೇಖನಗಳು

೩ : ಸಿದ್ಧು ದಿವಾಣಿರ ಪ್ರಕಟಿತ – ಅಪ್ರಕಟಿತ ಗ್ರಂಥಗಳು

೪ : ಸಿದ್ಧು ದಿವಾಣಿರಿಗೆ ಸಂದ ಪ್ರಶಸ್ತಿ – ಪುರಸ್ಕಾರಗಳು

೫ : ಸಿದ್ಧು ದಿವಾಣಿರ ಹಸ್ತಾಕ್ಷರ

೧ : ಸಿದ್ದು ದಿವಾಣರ ಬದುಕಿನ ಪ್ರಮುಖ ಘಟ್ಟಗಳು

೧. ೧೯೪೬ – ಡಿಸೆಂಬರ್ ೦೫ ಜನನ

೨. ೧೯೬೫ – ಮೆಟ್ರಿಕ ಪರೀಕ್ಷೆ ಉತ್ತೀರ್ಣ. ಪಿ. ಬಿ. ಹೈಸ್ಕೂಲ, ಜಮಖಂಡಿ.

೩. ೧೯೭೧ – ಜಮಖಂಡಿಯ ಮರೇಗುದ್ದಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಆರಂಭ.

೪. ೧೯೭೨ – ಹಾರೂಗೇರಿಯ ಇಂದಿರಾಜೀಯವರೊಡನೆ ವಿವಾಹ.

೫. ೧೯೭೮ – ಭಾರತ ಸೇವಾ ದಳ ತಾಲೂಕ ಅಧಿನಾಯಕರಾಗಿ ಸೇವೆ.

೬. ೧೯೭೫ – ಪುತ್ರ 'ಜಗದೀಶ'ರ ಜನನ.

೭. ೧೯೯೩ – ಸರ್ಕಾರಿ ಪ್ರೌಢ' ಶಾಲೆ ಮುಗಳಖೋಡದಲ್ಲಿ ಮುಖ್ಯೋಪಾಧ್ಯಾಪಕರಾಗಿ ಸೇವೆ.

೮. ೧೯೯೨ – ೧೯೯೯

– ರಾಜ್ಯ ಉಪಾಧ್ಯಕ್ಷರು, ಅಖಿಲ ಭಾರತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು.

೯. ೧೯೯೮ – ಬಿ.ಆರ್.ಸಿ. ಯಾಗಿ ಮುಧೋಳದಲ್ಲಿ ಸೇವೆ.

೧೦. ೧೯೯೯ – ಕರ್ನಾಟಕ ರಾಜ್ಯ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ.

೧೧. ೨೦೦೧ – ಅತ್ಯುತ್ತಮ ಜನಗಣತಿದಾರರೆಂದು ರಾಷ್ಟ್ರ ಪ್ರಶಸ್ತಿ.

೧೨. ೨೦೦೨ – ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಪ್ರಶಸ್ತಿ.

೧೩. ೨೦೦೩ – ಬಾಗಲಕೋಟ ಜಿಲ್ಲಾ ಪ್ರೌಢ ಶಾಲಾ ಶಿಕ್ಷಕ ಸಂಘದ ಅಧ್ಯಕ್ಷರಾಗಿ ಆಯ್ಕೆ.

೧೪. ೨೦೦೪ – ಸೇವಾ ನಿವೃತ್ತಿ.

೨ : ಸಿದ್ದು ದಿವಾಣರ ಪ್ರಕಟಿತ ಲೇಖನಗಳು

ಪ್ರಕಟಿತ ಲೇಖನಗಳು :

೧) ಜೀವನದಿಂದ ಜಾರಿ ಹೋದ ದೇಶಿ ಶಬ್ದ ಸಿರಿ ಸಂಪತ್ತು
೨) ಗ್ರಾಮೀಣ ಹಬ್ಬಗಳ ಅಂತರಂಗ
೩) ಮನಿ ಮಾತ ಮರೀಬ್ಯಾಡ
೪) ಪುಟ್ಟ ಬೀಜದಲ್ಲಿ ಹೆಮ್ಮರ
೫) ಮಾನವೀಯತೆ ಮರೆತ ಸಿರಿತನ
೬) ಮೌಲ್ಯವೃದ್ಧಿ – ಶಿಕ್ಷಣ ಸಮೃದ್ಧಿಯ ಸಾರ್ಥಕ ಯಶೋಗಾಥೆ
೭) ರನ್ನಮಯ ಮುದುವೊಳಲ್
೮) ನಂಬಿಗಸ್ಥ ಭಂಟ; ಮುಧೋಳ ಬೇಟೆ ನಾಯಿ
೯) ಕನ್ನಡಕ್ಕೆ ಕನ್ನಡಕ ಬೇಕು
೧೦) ಕಾಲ ಜ್ಞಾನ ಯೋಗಿ ; ಲೋಕಾಪುರದ ಶ್ರೀ ಕಾಶಿಲಿಂಗೇಶ್ವರ ಶ್ರೀ
೧೧) ಹತ್ತು ಹೆಜ್ಜೆಯ – ಹತ್ತರ ಹೊತ್ತಗೆ
೧೨) ನಾವು ಮತ್ತು ನಮ್ಮ ಸ್ವಾತಂತ್ರ್ಯ
೧೩) ತತ್ವ ತಪಸ್ವಿ – ಡಾ. ಎಸ್. ರಾಧಾಕೃಷ್ಣನ್‌ರು
೧೪) ಹೊಟ್ಟೆ – ನೆತ್ತಿಯ ಹಸಿವಿನ ಮೂಲ ಗ್ರಾಮೀಣ ಆಟಗಳು
೧೫) ಸುಡುಗಾಡ ಸಿದ್ಧರತ್ತ ಪರಿವರ್ತನೆಯ ಗಾಳಿ
೧೬) ಕರ್ನಾಟಕದಲ್ಲೇ ಕನ್ನಡ ಪರಕೀಯ
೧೭) ಮಹಾಸ್ವಾದದ ಮಹಾಲಿಂಗಪೂರ ಬೆಲ್ಲ
೧೮) ಲೋಕ ಪ್ರಸಿದ್ಧ ಲೋಕಾಪುರ ಕಲ್ಲು
೧೯) ಇತಿಹಾಸದ ಹಾಸಿಗೆಯಲ್ಲಿ ಕೃಷ್ಣಾತೀರ ಸಂಸ್ಕೃತಿ
೨೦) ಉಳಿತಾಯ : ಮರ – ಹೆಮ್ಮರ
೨೧) ಕಾಡು ನಾಡಿನ ಐಸಿರಿ
೨೨) ಪ್ರಾಥಮಿಕ ಶಿಕ್ಷಣ : ಹೊಸ ಅಲೆಯ ಸಾರ್ಥಕತೆ
೨೩) ಚೈತನ್ಯ ಚಿಗುರು ಸಿ. ಕೆ. ಚಿಂಚಲಿ ಪ್ರಾಥಮಿಕ ಶಾಲೆ

೨೪) ಬೆಳಕು ಬಂದಿದೆ ಮನೆಯ ಬಾಗಿಲಿಗೆ

೨೫) ಸೃಷ್ಟಿ ಸೃಜನ ವೇದಿಕೆ – ಹೊಸ ದೃಷ್ಟಿಕೋನ

೨೬) ಶಿಕ್ಷಣದ ದಾರಿಗೆ ದಿಕ್ಸೂಚಿಯಾಗುವ ಜನ ಶಿಕ್ಷಣ

೨೭) ಶ್ರೀ ಸಿದ್ಧಾರೂಢ ಪಂಥದ ಶಂಭುಲಿಂಗಾನಂದ ಶ್ರೀ

೨೮) ಮುಧೋಳದ ಶ್ರೀ ಸಿದ್ಧರಾಮೇಶ್ವರ

೨೯) ರನ್ನನ ನಾಡಿನ ಅನ್ನದ ಯೋಜನೆ

೩೦) ಹಿರಿಯ ಜಾನಪದ ತಜ್ಞ : ಜಿ. ಬಿ. ಖಾಡೆ

೩೧) ಜನಮನದ ಕಲಾವಿದ ಶ್ರೀ ಕೃಷ್ಣಾಜೀ ದೇಶಪಾಂಡೆ

೩೨) ತಾಲೂಕಿನ ಸಾಹಿತ್ಯಿಕ ಸಂಘ–ಸಂಸ್ಥೆಗಳು

೩೩) ಕೃಷ್ಣಾರ್ಪಣಮಸ್ತು ಶ್ರೀ ಕೇಶವ

೩೪) ಸಾಕ್ಷರತೆ – ವ್ಯವಸ್ಥೆಯ ಪರಿವರ್ತನೆಗೆ ಅನಿವಾರ್ಯ

೩೫) ಕುಂಬಾರರು

೩೬) ಮಕರ ಸಂಕ್ರಮಣ

೩೭) ಚರಿತ್ರೆ ಮತ್ತು ಚಾರಿತ್ರ್ಯ

೩೮) ಶಿಕ್ಷಣದ ಪ್ರಚನ್ನ ಶಕ್ತಿ ಆಟ–ಪಾಠಗಳು

೩೯) ಕನ್ನಡಿಗನಿಗೊಂದು ಕತೆ

೪೦) ಯುಗ ಪುರುಷ ಮಹಾತ್ಮಾ ಗಾಂಧೀಜಿ

೩ : ಸಿದ್ದು ದಿವಾಣರ ಪ್ರಕಟಿತ – ಅಪ್ರಕಟಿತ ಗ್ರಂಥಗಳು

ಪ್ರಕಟಿತ ಗ್ರಂಥಗಳು :

೧) ಭಾರತ ಸ್ವರ್ಣರಶ್ಮಿ (ಕವನ ಸಂಕಲನ)

೨) ಪಾರಿಜಾತ ಗಾರುಡಿಗ (ವ್ಯಕ್ತಿ ಪರಿಚಯ)

೩) ಕರ್ನಾಟಕ ಪರಿಚಯ (ಮಾಹಿತಿ ಸಂಗ್ರಹ)

೪) ಜೇನಹನಿ (ಚುಟುಕು ಸಂಕಲನ)

೫) ನೆಂಪು–ಕಂಪು (ಲೇಖನ ಮಾಲೆ)

೬) ಜಗದಗಲ ಪ್ರೀತಿ (ಕವನ ಸಂಕಲನ)

೭) ಶಬ್ದ ಸಿರಿ (ಚುಟುಕು ಸಂಕಲನ)

೮) ಗುಳಬುಟ್ಟಿ (ಜನಪದ ಸಂಪದ)

೯) ಹಂತಿ ನೀ ಎಲ್ಲೋಗಿ ಕುಂತಿ (ಜನಪದ ಸಂಪದ)

೧೦) ಎದ್ದಾವ ಹೋಳ್ಗಿ (ಜನಪದ ಸಂಪದ)

೧೧) ಸಿದ್ಧಹನಿ (ಚುಟುಕು ಸಂಕಲನ)

ಅಪ್ರಕಟಿತ ಗ್ರಂಥ :

೧) ಬೆಳಕಿನಾಚೆಯ ಬೆಳಕು (ಮುದ್ರಣದಲ್ಲಿದೆ)

೮ : ಸಿದ್ದು ದಿವಾಣರಿಗೆ ಸಂದ ಪ್ರಶಸ್ತಿ – ಪುರಸ್ಕಾರಗಳು

೧) ಕರ್ನಾಟಕ ರಾಜ್ಯ ಶಿಕ್ಷಕ ಪ್ರಶಸ್ತಿ

೨) ಡಾ. ರಾಧಾಕೃಷ್ಣನ್ ಪ್ರಶಸ್ತಿ

೩) ಸತ್ಯಸಾಯಿ ಪ್ರತಿಷ್ಠಾನ ಆದರ್ಶ ಗುರು ಪ್ರಶಸ್ತಿ

೪) ಭಾರತ ಜನಗಣತಿ ರಾಷ್ಟ್ರಪತಿಗಳ ಪ್ರಶಸ್ತಿ

೫) ಪ್ರಜ್ಞಾಪೀಠ ಪ್ರಶಸ್ತಿ

೬) ಕರ್ನಾಟಕ ಭೂಷಣ ಪ್ರಶಸ್ತಿ

೭) ಭಾರತ ಭೂಷಣ ಪ್ರಶಸ್ತಿ

೮) ರಾಜ್ಯೋತ್ಸವ ಬಾಗಲಕೋಟ ಜಿಲ್ಲಾ ಪ್ರಶಸ್ತಿ

೯) ಕರ್ನಾಟಕ ರಾಜ್ಯ ಸಾಕ್ಷರತಾ ಪ್ರಶಸ್ತಿ

೧೦) ಸಾಹಿತ್ಯರತ್ನ ಪ್ರಶಸ್ತಿ

೧೧) ರಾಷ್ಟ್ರೀಯ ಭೂಷಣ ಪ್ರಶಸ್ತಿ

೧೨) ಕರುನಾಡರತ್ನ ಪ್ರಶಸ್ತಿ

೧೩) ಬಸವ ಚೇತನ ಪ್ರಶಸ್ತಿ

೧೪) ಕರ್ನಾಟಕ ರಾಜ್ಯ – ಆದರ್ಶ ಶಿಕ್ಷಕ ಪ್ರಶಸ್ತಿ

೧೫) ಯುವ ಜನ ಮೇಳ ಪ್ರಶಸ್ತಿ

೧೬) ಕರ್ನಾಟಕ ಸರ್ಕಾರ – ಜಾನುವಾರ ಗಣತಿ ರಾಜ್ಯ ಪ್ರಶಸ್ತಿ

ಹಾಗೂ ೧೦೦ಕ್ಕೂ ಹೆಚ್ಚು ರಾಜ್ಯ, ಸಮಾಜ ಸೇವಾ ಸಂಸ್ಥೆಗಳ ಪ್ರಶಸ್ತಿಗಳು

೫೮ : ಸಿದ್ದು ದಿವಾಣರ ಹಸ್ತಾಕ್ಷರ

ಸಿದ್ದು ದಿವಾಣ - ತ್ರಿಪದಿಗಳು

೧

ನೆಮ್ಮದಿಯ ನಗುವಿರಲಿ, ನೆರೆಯವರ ನಗುವಿನಲ್ಲಿ
ಕೊಂಕು ನಗೆಬೇಡ ನಗೆಯಲ್ಲಿ । ಕಂದಯ್ಯ
ನಿನ್ನ ಮುಗುಳ್ನಗೆಯಲಿ ಜಗವೆಲ್ಲ ನಗಲಿ ॥

೨

ಒಂಟೆತ್ತು ಕಣಮಾಡಿ, ಹುಂಜಯ್ಯ ಹೊಡದೇವ
ಬೆಳ್ಳವರ ಹುಂಜಯ್ಯ ಹಾಡ್ಯಾಡಿ । ಕಂದಯ್ಯ
ಹುಲ್ಲಿನಾ ಹಕ್ಕೀವ ಹರೆಹೊತ್ತ ॥

೩

ಜೋಳಿಗೆ ಹುಡುಕಿತ್ತು, ಕಾರಣಕೆ ಹೂರಣಗಲ್ಲು
ತೋರಣ ಬೇಡಿತ್ತು ಒಳಕಲ್ಲು । ಕಂದಯ್ಯ
ಹೊಟ್ಟಾನ ಹಾಡಿಸಿತ್ತು ಬೀಸುವ ಕಲ್ಲು ॥

೪

ಗಟ್ಟಿ ರೊಟ್ಟ್ಯುಣ್ಣಾಂವ, ಒಟ್ಟ್ಯಾನ ಮುದ್ದಿನ ಬಣವಿ
ನೆಮ್ಮದಿ ಹೊಲತ್ತ ಮನೆತುಂಬ । ಕಂದಯ್ಯ
ದೊಡ್ಡಾಂವ ಆಗ್ಯಾನ ದುಡದಾಂವ ॥

೫

ಭಕ್ತಿಗೆ ಒಲಿಯುವ ಬೆಳಕು, ಶ್ರದ್ಧೆಗೆ ಸಿಗುವ ಬೆಳಕು.
ನೀತಿ, ನಿಯತ್ತಿಗೆ ನಿಲುಕುವ ಬೆಳಕು । ಕಂದಯ್ಯ
ಬದುಕಿಗೆ ಬೇಕು ಸುಜ್ಞಾನದ ಬೆಳಕು ॥

— ಸಿದ್ದು. ರಾ. ದಿವಾಣ
ಜಯನಗರ, ಮುಧೋಳ

ಗ್ರಂಥಋಣ

ಗ್ರಂಥಋಣ

ಕ್ರ.ಸಂ	ಕೃತಿ	ಲೇಖಕರು	ಪ್ರಕಾಶನ	ಪ್ರ. ವರ್ಷ
೧	ಕವಿ ಕರ್ಮಯೋಗಿ ದಿನಕರ ದೇಸಾಯಿ	ವಿಷ್ಣುನಾಯ್ಕ	ಉಪನ್ಯಾಸ ಗ್ರಂಥ ಮಾಲೆ, ಕ.ವಿ.ವಿ. ಧಾರವಾಡ	೧೯೯೪
೨	ಕರ್ನಾಟಕ ಸಂಸ್ಕೃತಿ ಸಮೀಕ್ಷೆ	ಡಾ. ಎಚ್. ತಿಪ್ಪೇರುದ್ರ ಸ್ವಾಮಿ	ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.	೨೦೦೭
೩	ಕನ್ನಡ ಸಾಹಿತ್ಯದಲ್ಲಿ ಕರ್ಣ	ಡಾ. ವ್ಹಿ. ಎಸ್. ಮಾಳಿ	ಕ.ವಿ.ವಿ. ಧಾರವಾಡ.	೧೯೯೯
೪	ಸಾಂಸ್ಕೃತಿಕ ಅಧ್ಯಯನ	ಡಾ. ರಹಮತ ತರಿಕೇರಿ	ಕರ್ನಾಟಕ ಸಾಹಿತ್ಯ ಅಕಾಡೆಮಿ,	೨೦೦೮
೫	ದಿನಕರ ದೇಸಾಯಿ ಬದುಕು ಬರಹ	ಡಾ. ಶ್ರೀಪಾದ ಶೆಟ್ಟಿ	ಪ್ರಸಾರಾಂಗ, ಕ.ವಿ.ವಿ. ಧಾರವಾಡ.	೧೯೯೫
೬	ಭುಜೇಂದ್ರ ಮಹೀಶವಾಡಿ ಸಾಹಿತ್ಯ ಒಂದು ಅಧ್ಯಯನ	ಡಾ. ಪಿ. ಜಿ. ಕೆಂಪಣ್ಣವರ	ಕ.ವಿ.ವಿ. ಧಾರವಾಡ	೧೯೯೮
೭	ಡಾ. ಎಸ್. ಎಸ್. ಕೋತಿನ ಅವರ ಬರಹಗಳು	ಡಾ. ಎಸ್. ಕೆ. ಢಾಲೆ	ಕ.ವಿ.ವಿ. ಧಾರವಾಡ	೨೦೦೩
೮	ಡಾ. ವಿ. ಕೃ. ಗೋಕಾಕ ಸಾಹಿತ್ಯದಲ್ಲಿ ಶಿಕ್ಷಣದ ಕೊಡುಗೆ	ಡಾ. ಎಸ್. ಕೆ. ಢಾಲೆ	ಕ.ರಾ.ಮು. ವಿ.ವಿ. ಮೈಸೂರು	೨೦೧೦
೯	ಜಾನಪದ ತತ್ವಗಳು	ಡಾ. ಅರವಿಂದ ಮಾಲಗತ್ತಿ	ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ	೧೯೯೯
೧೦	ನವ್ಯತೆ	ನರಹಳ್ಳಿ ಬಾಲಸುಬ್ರಹ್ಮಣ್ಯಂ	ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು	೧೯೯೬

ಕ್ರ.ಸಂ	ಕೃತಿ	ಲೇಖಕರು	ಪ್ರಕಾಶನ	ಪ್ರ. ವರ್ಷ
೧೧	ಪೂರ್ಣಚಂದ್ರ ತೇಜಸ್ವಿ	ಡಾ. ಎಚ್. ಎಂ. ಮಹೇಶ್ವರಯ್ಯ	ನವಕರ್ನಾಟಕ ಪ್ರಕಾಶನ,	೨೦೦೨
೧೨	ನೂರು ಮರ ನೂರು ಸ್ವರ	ಕೀರ್ತಿನಾಥ ಕುರ್ತುಕೋಟಿ	ಪ್ರಸಾರಾಂಗ ಗ್ರಂಥ ಮಾಲೆ, ಧಾರವಾಡ	೧೯೩೬
೧೩	ಸಾಹಿತ್ಯ ಮತ್ತು ವಿಮರ್ಶೆ	ದ. ರಾ. ಬೇಂದ್ರೆ	ಮನೋಹರ ಗ್ರಂಥ ಮಾಲೆ, ಧಾರವಾಡ	೧೯೩೬
೧೪	ಆನಂದ ಕಂದ	ದು. ನಿಂ. ಬೆಳಗಲಿ	ಉಪನ್ಯಾಸ ಗ್ರಂಥ ಮಾಲೆ, ಕ.ವಿ.ವಿ. ಧಾರವಾಡ	೧೯೯೯
೧೫	Bijapur District Gazetter	B. N. Satyan		೧೯೬೬

ಪತ್ರಿಕೆಗಳು

ಪತ್ರಿಕೆಗಳು

೧) ಕನ್ನಡ ಪ್ರಭ

೨) ಪ್ರಜಾವಾಣಿ

೩) ಹೊಸತು

೪) ಪ್ರಪಂಚ